Pages : 36 | 12₹
Volume - 16
Issue - 2
February - 2019

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# Swabhimani Sahakari
# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

## ರೈತ, ಮಧ್ಯಮ ವರ್ಗ ಮತ್ತು ಕಾರ್ಮಿಕರಿಗೆ ಭರಪೂರ ಕೊಡುಗೆ

- ಆದಾಯ ತೆರಿಗೆ ಮಿತಿಯನ್ನು ರೂ.2.5 ಲಕ್ಷದಿಂದ ರೂ.5 ಲಕ್ಷಗಳಿಗೆ ಏರಿಕೆ
- ರೈತರಿಗೆ ವಾರ್ಷಿಕ ಸಹಾಯಧನ ರೂಪದಲ್ಲಿ ರೂ.6,000
- ಕಾರ್ಮಿಕರಿಗೆ ನಿವೃತ್ತಿ ನಂತರ ಮಾಸಿಕ ಪಿಂಚಣಿ ರೂ. 3,000
- ಕಾರ್ಮಿಕರ ಗ್ರಾಚ್ಯುಟಿ ಮಿತಿ: ರೂ.10 ಲಕ್ಷಗಳಿಂದ ರೂ.20 ಲಕ್ಷಗಳಿಗೆ ಏರಿಕೆ
- ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಗ್ರಾಮಗಳಲ್ಲಿ ಡಿಜಿಟಲ್ ಕ್ರಾಂತಿ
- ನರೇಗಾ ಯೋಜನೆಗೆ ರೂ. 60 ಸಾವಿರ ಕೋಟಿ
- ಮುದ್ರಾ ಯೋಜನೆ ಅಡಿ ರೂ.7.23 ಲಕ್ಷ ಕೋಟಿ ಸಾಲ ವಿತರಣೆ




ಸೌಹಾರ್ದ ಸಹಕಾರಿಗಳ
ಸಂಖ್ಯೆ : 4522

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1204

# ಸೌಹಾರ್ದ ಸಹಕಾರಿಗಳ ಎಚ್ಚರಿಕೆಯ ನಡೆ ಅಗತ್ಯ



ಬಿ.ಹೆಚ್. ಕೃಷ್ಣಾರೆಡ್ಡಿ

ಆತ್ಮೀಯ ಸಹಕಾರಿ ಬಂಧುಗಳಿಗೆ, ಹೃದಯಪೂರ್ವಕ ನಮಸ್ಕಾರಗಳು. ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಯ ಬಗ್ಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಮಾಜ ಹಾಗೂ ಸರಕಾರ ಅತ್ಯಂತ ಭರವಸೆ ಹಾಗೂ ವಿಶ್ವಾಸದಿಂದ ಇದ್ದಾರೆ. ಸೌಹಾರ್ದ ಸಹಕಾರಿ ಕ್ಷೇತ್ರ ದೇಶದ ಸಹಕಾರ ಕ್ಷೇತ್ರದ ಇತಿಹಾಸದಲ್ಲಿ ಒಂದು ಬಗೆಯ ಆತ್ಮವಿಶ್ವಾಸವನ್ನು ಮೂಡಿಸಿದೆ. ವಿನೂತನವಾಗಿರುವ ಈ ವ್ಯವಸ್ಥೆಯನ್ನು ದೇಶದ ಜನ ಅತ್ಯಂತ ಕಾತುರದಿಂದ ತಮ್ಮ ತಮ್ಮ ರಾಜ್ಯಗಳಲ್ಲೂ ಇದನ್ನು ಅಳವಡಿಸಬೇಕು ಎಂಬುವ ಅಭಿಪ್ರಾಯ ಹೊಂದಿದ್ದಾರೆ. ಕೇಂದ್ರದ ಹಾಗೂ ಅಂತರರಾಷ್ಟ್ರೀಯ ಸಹಕಾರಿಗಳು ತಜ್ಞರು ಇದರ ಅಧ್ಯಯನ ಮಾಡುತ್ತಿದ್ದಾರೆ. ಇದರ ಪ್ರಗತಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ನಾವೆಲ್ಲ ಹೆಮ್ಮೆ ಪಡುವಂತಹ ವಿಚಾರ.

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ ಈಗ 18 ವರ್ಷ. ರಾಜ್ಯದ ಸೌಹಾರ್ದ ಸಹಕಾರಿಗಳು ಸಾಂಪ್ರದಾಯಿಕ ಸಹಕಾರಿ ಸಂಘಗಳಂತೆ ಕೇವಲ ಸಾಲ ಕೊಡುವುದು ಅದಕ್ಕಾಗಿ ಸಾರ್ವಜನಿಕರಿಂದ ಠೇವಣಿ ಪಡೆಯುವುದು ವರ್ಷಕ್ಕೊಮ್ಮೆ ಡಿವಿಡೆಂಡ ನೀಡುವುದು ಮಾತ್ರವಲ್ಲದೆ ವಿಭಿನ್ನ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡು ಸದಸ್ಯರಿಗೆ ಹಲವು ವಿಧವಾದ ಸೌಲಭ್ಯಗಳನ್ನು ನೀಡುತ್ತಿವೆ. ರಾಜ್ಯದ ಎಲ್ಲ ಜಿಲ್ಲೆಗಳ ಎಲ್ಲ ತಾಲ್ಲೂಕುಗಳಲ್ಲಿ ಹರಡಿರುವ ವಿವಿಧ ರೀತಿಯ 4522 ಸೌಹಾರ್ದ ಸಹಕಾರಿಗಳು ಶ್ರೀ ಸಾಮಾನ್ಯರ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಸಾಲಗಾರರನ್ನು ಸಾಹುಕಾರರ ಮೀಟರ ಬಡ್ಡಿಯ ಶೋಷಣೆಯಿಂದ ಪಾರುಮಾಡಲು ಸೌಹಾರ್ದ ಸಹಕಾರಿಗಳು ನೆರವಾಗಿವೆ.

ಸ್ನೇಹಿತರೆ ಅಭಿವೃದ್ಧಿಯ ಹರಕೆಯ ಸಾಲಿನಲ್ಲಿ ಜೊತೆಗೆ ಒಂದೆರಡು ಮುಳ್ಳುಗಳು ಸೇರಿವೆ. ಈ ಮುಳ್ಳುಗಳು ನಮಗೆ ನೆಮ್ಮದಿಯಿಂದ ಇರಲು ಬಿಡುವುದಿಲ್ಲ. ಈ ಮುಳ್ಳುಗಳನ್ನು ಹೊಸಕಿ ಹಾಕುವುದು ನಮ್ಮೆಲ್ಲರ ಆದ್ಯತಾ ವಲಯವಾಗಿದೆ. ಈಗಿರುವ ಇಂತಹ ಸಹಕಾರಿಗಳ ಠೇವಣಿದಾರರ ಹಿತ ರಕ್ಷಣೆಯ ಜೊತೆಗೆ ಹೊಸದಾಗಿ ಇಂತಹ ಚಟುವಟಿಕೆಗಳು ಹುಟ್ಟಿಕೊಳ್ಳಬಾರದು ಎಂಬುದು ನಮ್ಮೆಲ್ಲರ ಪ್ರಯತ್ನ. ಸರಕಾರ ಹಾಗು ಸಾರ್ವಜನಿಕರು ಮತ್ತು ಸಹಕಾರಿ ಕ್ಷೇತ್ರದ ಹಿರಿಯರು ಈ ಒಂದೆರಡು ಮುಳ್ಳುಗಳನ್ನು ಹೇಗೆ ನಿರ್ವಹಿಸುತ್ತೇವೆ ಎಂಬುದರ ಕಡೆಗೆ ಗಮನ ಹರಿಸಿದ್ದಾರೆ.

ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷ ಆದರೆ ಕೆಲವು ಸಹಕಾರಿಗಳಲ್ಲಿ ಠೇವಣಿದಾರರ ಹಣ ವಾಪಸ್ಸು ಮಾಡುವುದಕ್ಕೆ ತೊಂದರೆ ನೀಡಲಾಗುತ್ತಿದೆ. ಯಾವುದೇ ಕಾರಣಕ್ಕೂ ಠೇವಣಿದಾರರ ಹಣಕ್ಕೆ ಮೋಸವಾಗದಂತೆ ಕ್ರಮವಿಡುವುದು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವುದು ಎಲ್ಲ ಸಹಕಾರಿಗಳಿಗೆ ಆದ್ಯತೆಯ ಕೆಲಸವಾಗಬೇಕೆಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರ ಅಪೇಕ್ಷೆಯಾಗಿದೆ ಮತ್ತು ಇದು ಎಲ್ಲ ಸೌಹಾರ್ದ ಸಹಕಾರಿಗಳಿಗೆ ಕಳಕಳಿಯ ಮನವಿಯೂ ಕೂಡ.

> ಸ್ನೇಹಿತರೆ ಅಭಿವೃದ್ಧಿಯ ಹರಕೆಯ ಸಾಲಿನಲ್ಲಿ ಜೊತೆಗೆ ಒಂದೆರಡು ಮುಳ್ಳುಗಳು ಸೇರಿವೆ. ಈ ಮುಳ್ಳುಗಳು ನಮಗೆ ನೆಮ್ಮದಿಯಿಂದ ಇರಲು ಬಿಡುವುದಿಲ್ಲ. ಈ ಮುಳ್ಳುಗಳನ್ನು ಹೊಸಕಿ ಹಾಕುವುದು ನಮ್ಮೆಲ್ಲರ ಆದ್ಯತಾ ವಲಯವಾಗಿದೆ. ಈಗಿರುವ ಇಂತಹ ಸಹಕಾರಿಗಳ ಠೇವಣಿದಾರರ ಹಿತ ರಕ್ಷಣೆಯ ಜೊತೆಗೆ ಹೊಸದಾಗಿ ಇಂತಹ ಚಟುವಟಿಕೆಗಳು ಹುಟ್ಟಿಕೊಳ್ಳಬಾರದು ಎಂಬುದು ನಮ್ಮೆಲ್ಲರ ಪ್ರಯತ್ನ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜಿ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408, 23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop


## ಒಳಪುಟಗಳಲ್ಲಿ . . .


ಜ್ಞಾನ ಜ್ಯೋತಿ ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ ............................................ 5-10, 13-17
ಸೌಹಾರ್ದ ಸಹಕಾರಿಗಳ ಸಮಾಚಾರಗಳು ....... .......................... 11-12, 18-20, 22-26
ವಿವೇಕವಾಣಿ ........................................ 21
ಸುತ್ತೋಲೆ ........................................ 27
ಲೇಖನ ........................................ 28-33
ಆರ್‌ಬಿಐ ನ್ಯೂಸ್ ........................ 34-36


# ಸಂಪಾದಕೀಯ

## ಸಹಕಾರ ಕ್ಷೇತ್ರಕ್ಕೆ ಯುವಕರ ಸೇರ್ಪಡೆ : ಅಭಿಯಾನದ ಅಗತ್ಯತೆ ಹಾಗೂ ಡಿಜಿಟಲೈಜೇಷನ್‌ಗೆ ಆದ್ಯತೆ

ಇತ್ತೀಚೆಗೆ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ ಅಧ್ಯಕ್ಷ ಶ್ರೀ ಬ್ರಿಯಾನ್ ಲೀ ಬ್ರಾಂಚ್ ರವರು ಸಹಕಾರಿಗಳ ಜೊತೆಗೆ ನಡೆಸಿದ ವಿಚಾರ ವಿನಿಮಯ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಯುವಕರ ಸೇರ್ಪಡೆಯ ಅಗತ್ಯತೆಯನ್ನು ಒತ್ತಿಹೇಳುತ್ತ ಇದಕ್ಕಾಗಿ ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್‌ನವರು ವ್ಯಾಪಕ ಪ್ರಚಾರ ಕಾರ್ಯಕ್ರಮ ಹಾಗೂ ಕ್ರಿಯಾಯೋಜನೆಯನ್ನು ಹಾಕಿಕೊಂಡಿರುವುದಾಗಿ ಹೇಳುತ್ತ ಪ್ರತಿಯೊಂದು ಸಹಕಾರಿ ಸಂಘಟನೆಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಹೇಳಿರುವುದು ಸಂಯೋಚಿತವಾಗಿದೆ ಎಂದು ಅಭಿಪ್ರಾಯ ಪಡಬಹುದಾಗಿದೆ.

ನಮ್ಮ ದೇಶದ ಸಹಕಾರ ಕ್ಷೇತ್ರದ ಶಕ್ತಿಯನ್ನು ನೆನಪಿಸಿಕೊಂಡರೆ ಮೈ ಜುಂ ಎನ್ನುವಂತಹ ಒಂದು ಅಗಾಧ ಶಕ್ತಿ ಎನಿಸುತ್ತದೆ. ದೇಶಾದ್ಯಂತ 8.5 ಲಕ್ಷ ಸಹಕಾರಿ ಸಂಸ್ಥೆಗಳು 30 ಕೋಟಿ ಸದಸ್ಯರ ಬಳಗ ಅವುಗಳಿಗೆ ಕನಿಷ್ಠ 9 ಜನ ನಿರ್ದೇಶಕರೆಂದರೆ 75 ಲಕ್ಷ ನಿರ್ದೇಶಕರು. ಬೃಹತ್ತಾಗಿ ಬೆಳೆದಿರುವ ಸಹಕಾರ ಕ್ಷೇತ್ರದ ಸಾಧನೆಯೂ ಮೆಚ್ಚುಗೆಗೆ ಪಾತ್ರವಾಗಿದೆಯಾದರೂ ದೇಶದ ಹಣಕಾಸಿನ ವ್ಯವಸ್ಥೆಯಲ್ಲಿ ಸಹಕಾರ ಸಂಘಟನೆಗಳಿಗೆ ಸಿಗಬೇಕಾದ ಮಾನ್ಯತೆ ಸಿಗದಿರುವುದು ಕಳವಳವಾಗುತ್ತದೆ. ಇದಕ್ಕೆ ಕಾರಣ ಈ ಕ್ಷೇತ್ರದಲ್ಲಿ ಯುವಕರು ಹೆಚ್ಚಿನ ಆಸಕ್ತಿ ವಹಿಸುವಂತೆ ಮಾಡದಿರುವುದು ಮತ್ತು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಯುವಕರನ್ನು ಈ ಕ್ಷೇತ್ರದಲ್ಲಿ ಬೆಳೆಯಲು ಅವಕಾಶ ಒದಗಿಸದಿರುವುದು ಮೂಲ ಕಾರಣವೆಂದು ವಿಶ್ಲೇಷಿಸಬಹುದು.

ಸಹಕಾರ ಕ್ಷೇತ್ರದಲ್ಲಿ ಯುವಕರು ಭಾಗವಹಿಸುವಂತಾಗಬೇಕಾದರೆ ಆಧುನಿಕ ಯುಗದ ಕಾರ್ಯನಿರ್ವಹಣೆ ಅಂದರೆ ಡಿಜಿಟಲೀಕರಣ ದತ್ತವೂ ಸಹ ಸಹಕಾರ ಸಂಸ್ಥೆಗಳು ಗಮನಹರಿಸುವುದು ಅಗತ್ಯ. ಸಹಕಾರ ಸಂಸ್ಥೆಗಳ ವ್ಯವಹಾರಗಳನ್ನು ಹಂತಹಂತವಾಗಿಯಾದರೂ ಡಿಜಟಲೀಕರಣ ಮಾಡುವುದರಿಂದ ಪ್ರಸ್ತುತ ಅರ್ಥವ್ಯವಸ್ಥೆಯಲ್ಲಿ ಆಧುನೀಕರಣದೊಂದಿಗೆ ಹೆಜ್ಜೆಹಾಕಲು ಸಾಧ್ಯ.

ಈ ಕ್ಷೇತ್ರದಲ್ಲಿ ಯುವ ಸಹಕಾರಿಗಳು ಹೆಚ್ಚು ಆಸಕ್ತಿ ವಹಿಸುವಂತೆ ಕ್ರಮವಿಡುವುದು ಅಗತ್ಯ. ಈ ನಿಟ್ಟಿನಲ್ಲಿ ಪ್ರತಿಯೊಂದು ಸಹಕಾರಿ ಸಂಸ್ಥೆಯು ತನ್ನ ಎಲ್ಲ ಕಾರ್ಯಕ್ರಮಗಳ ಬಗ್ಗೆ ಯುವಕರಿಗೆ ಜಾಗೃತಿಯನ್ನು ಮೂಡಿಸುವಂತಹ ಅವರಿಗೆ ತಿಳುವಳಿಕೆ ನೀಡುವಂತಹ ಹಾಗೂ ಅವರನ್ನು ಅಳವಡಿಸುವಂತಹ ಅವರನ್ನು ಪ್ರೇರೇಪಣೆಯಾಗುವಂತಹ ಕಾರ್ಯಕ್ರಮಗಳ ಅಭಿಯಾನವನ್ನೇ ಹಾಕಿಕೊಳ್ಳುವುದು ಇಂದಿನ ಅವಶ್ಯಕತೆಯಾಗಿದೆ. ಈ ಎಲ್ಲಾ ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದ ವರೆಗಿನ ಎಲ್ಲ ಸಹಕಾರಿ ಸಂಸ್ಥೆಗಳು ಯುವ ಸಹಕಾರಿಗಳ ವೇದಿಕೆಯ ಮೂಲಕ ಸಹಕಾರ ತತ್ವಗಳು, ಸಹಕಾರ ಕ್ಷೇತ್ರದ ಬೆಳವಣಿಗೆ, ಸಹಕಾರ ಕ್ಷೇತ್ರದ ಸಾಧನೆಗಳು, ಆಡಳಿತ ವ್ಯವಸ್ಥೆ, ಹಣಕಾಸಿನ ವ್ಯವಸ್ಥೆ, ಯುವಕರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಬೆಳೆಯಲು ಇರುವ ಅವಕಾಶಗಳ ಬಗ್ಗೆ ನಿರಂತರ ಶಿಕ್ಷಣ ಹಾಗೂ ತರಬೇತಿಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸಂಸ್ಥೆಗಳ ಆಡಳಿತದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮಜರುಗಿಸುವುದು ಅವಶ್ಯಕ.



## ಜ್ಞಾನ ಜ್ಯೋತಿ

ಎಂ.ಬಸಪ್ಪ, ಸಹಕಾರ ಸಂಘಗಳ ನಿವೃತ್ತ ಉಪನಿಬಂಧಕರು ಬೆಂಗಳೂರು.

# "ಪರರ ಸುಖವನ್ನು ತನ್ನದಾಗಿಸಿಕೊಳ್ಳುವ ಹಾಗೂ ಪರರ ಸುಖದಲ್ಲಿ ಭಾಗಿಯಾಗುವ ಮನೋಭಾವದಲ್ಲಿ ಪರಿವರ್ತನೆ"

ಈಗತ್ತಲಾಗಿನ ಜಗದ ಜನರ ಸ್ವಾರ್ಥಪರ ಬದುಕಿನ ಶೈಲಿಯನ್ನು ನಿರೀಕ್ಷಿಸಿದ ಕವಿ ಡಿ.ವಿ.ಜಿ.ಯವರು "ನಿಮ್ಮ ಸಮಯದಲ್ಲೊಂದಿಷ್ಟನ್ನು ಅನ್ಯರಿಗೆ ಮೀಸಲಿಟ್ಟು ಸುಖವನ್ನು ಅನುಭವಿಸಿರಿ" ಎಂಬ ಸಂದೇಶವನ್ನು ಕೆಳಗಿನ ಪದ್ಯದಲ್ಲಿ ನೀಡಿದ್ದಾರೆ. ತನ್ನ ಮನೆ, ತನ್ನ ಸಂಸಾರ, ತನ್ನ ಆಸ್ತಿ, ತನ್ನ ಸಂಪತ್ತೆಂಬ ಸ್ವಾರ್ಥಾಲಾಪದಲ್ಲಿ ಸದಾ ಮುಳುಗಿರುವ ಇಂದಿನ ವ್ಯಕ್ತಿಗಳಿಗೆ ಅನ್ಯರ ಜೀವನದ ಕಡೆ ಕಣ್ಣು ಹಾಯಿಸುವಷ್ಟು ಸಮಯವಿಲ್ಲ ಹಾಗೂ ನೆರವನ್ನಿತ್ತು, ಅವರ ನೋವಿನಲ್ಲಿ ಭಾಗಿಯಾಗಿ ನೆರವಾಗಬೇಕೆಂಬ ಭಾವನೆ ಅದೃಶ್ಯವಾಗುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ. ಇತರರಿಗೆ ನೆರವಾಗೆಂದರೆ ತನ್ನನ್ನು ಬಿಟ್ಟುಬಿಡೆಂಬುದರ್ಥವಲ್ಲ. ತನ್ನ ಕೈಲಾದ ನೆರವನ್ನು ನೀಡಿ ಇತರರ ಶ್ರೇಯೋಭಿವೃದ್ಧಿಗೆ ಶ್ರಮಿಸೆಂದು ಅರ್ಥ.



ಆಂಗ್ಲಕವಿ Ralph Waldo Emerson ಎಂಬಾತ ಹೇಳುವಂತೆ "Rejoice with the good of others and don't feel jealous and thus feel contended". ಇತರರ ಶುಭವನ್ನು ಗುರಿಯಾಗಿಟ್ಟುಕೋ, ಸುಖವು ತನ್‌ತಾನೇ ನಿನಗೊದಗಿ ಬರುವುದು ಖಾತ್ರಿಯೆಂದಿದ್ದಾರೆ.

"ಕೊಟ್ಟುಪಡೆ, ಪಡೆವ ಸಿರಿಯನರಿ" ಎಂಬುದರ ಒಳಾರ್ಥವನ್ನು ಬಿಂಬಿಸುವ ದೃಷ್ಟಾಂತವಾಗಿ ದ್ರೌಪದಿಯು ಕೃಷ್ಣನಿಗೆ ಸ್ವಲ್ಪ ಗಾಯವಾದಾಗ ಬೆರಳಿಗೆ ತನ್ನ ಸೀರೆಯ ಸೆರಗನ್ನು ಕಿತ್ತು ಕಟ್ಟಿದ ಕಾರಣ ಅವಶ್ಯಕವಾದಾಗ, ಸಂಕಷ್ಟದಲ್ಲಿದ್ದಾಗ ಅಪರಿಮಿತ ವಸ್ತ್ರ ಪಡೆದು, ಮಾನಉಳಿಸಿಕೊಂಡ ಪುರಾಣದ ಉದಾಹರಣೆ ನಮಗೆಲ್ಲಾ ತಿಳಿದೇ ಇದೆ. ತಂದೆಮಗನ ಹಾಗೂ ಇತರರ ಕ್ಷೇಮಸಂಬಂಧೀ ಪದ್ಯವನ್ನು ಗಮನಿಸಿ,

**"ತನಗೆ ಬಾರದ ಲಾಭ ತನಯಂಗೆ ಬಂದಾಗ ।**
**ಜನಕನ್ ಅದು ತನದೆಂದು ಸಂತಸಿಪ ತೆರದಿ ॥**
**ಜನದೊಳಾರ್ಗಾವ ಸೊಗವಾದೊಡಂ ತನದೆನ್ನು।**
**ತನುಭವಿಪನೋ ಜ್ಞಾನಿ ॥ ಮಂಕುತಿಮ್ಮ ॥**

ತಂದೆಯಾದವನೋರ್ವನು ವೈದ್ಯಕೀಯ ಶಿಕ್ಷಣ ಪಡೆಯಲಾಗದಿದ್ದರೂ ತನ್ನ ಮಗ ಎಂ.ಬಿ.ಬಿ.ಎಸ್ ಓದಿದರೆ ತಾನೇ ವೈದ್ಯನಾದಷ್ಟು ಸಂತೋಷಭರಿತನಾಗುತ್ತಾನೆ. ತನ್ನ ಜೀವಿತಕಾಲದಲ್ಲಿ ಐ.ಎ.ಎಸ್ ಪರೀಕ್ಷೆ ಪಾಸು ಮಾಡಲಾಗಲಿಲ್ಲ. ಆದರೆ ತನ್ನ ಮಗ ಐ.ಎ.ಎಸ್ ಮಾಡಿ ಜಿಲ್ಲಾಧಿಕಾರಿಯಾಗಿದ್ದಾನೆಂದರೆ ತಂದೆಯಾದವನಿಗೆ ಅಪರಿಮಿತ ಆನಂದ. ತನಗೆ ಸ್ವಯಂ ಈ ಎರಡೂ ಲಾಭಗಳು ದಕ್ಕದಿದ್ದರೂ ತನ್ನ ಮಗನಿಗೆ ದಕ್ಕಿದ್ದಕ್ಕಾಗಿ ತನ್ನದೆಂದೇ ಸಂತುಷ್ಟನಾಗುತ್ತಾನೆ.

ಈ ಸಂತೋಷದ ಪರಿಧಿಯನ್ನೇ ವಿಸ್ತರಿಸುತ್ತಾ ಕವಿಗಳು ಶುಭವಾಗುವುದು ತನಗೆ, ತನ್ನ ಮಗನಿಗೆಂಬ ಸೀಮಿತ ವ್ಯಾಪ್ತಿಯನ್ನು ಬಿಟ್ಟು, ಯಾರಿಗಾದರೂ ಆಗಲಿ, ಅದೂ ಸಹ ತನಗೇ ಸಂದ ಶುಭವೆಂದು ವಿಸ್ತರಿತ ಆತ್ಮ ತೃಪ್ತಿಯನ್ನು ಹೊಂದಲು ತನ್ಮೂಲಕ ವಿಶ್ವಪ್ರಜ್ಞೆಯನ್ನು ಹೊಂದಲು ಕರೆಕೊಡುತ್ತಿದ್ದಾರೆ.

ಈ ವಿಶ್ವದ "ಅಸದೃಶ್ಯ ಆಡಳಿತಗಾರ" (Invisible Administrator) ನಾದ ಭಗವಂತನ ವಿಸ್ತೃತರೂಪಗಳೇ ತಾವೆಲ್ಲರೂ ಎಂದು ವಿಶ್ವಕುಟುಂಬ ಪ್ರಜ್ಞೆಯನ್ನು ಹೊಂದಲು ಈ ಹಿಂದಿನ ನಮ್ಮ ಸಂತರ, ಸಾಧುಗಳ ಚಿಂತನಶೀಲರ "ಸರ್ವೇಜನಾ ಸುಖೊನೋಭವಂತು" ಮತ್ತು "ವಸುದೈವ ಕುಟುಂಬಕಂ" ವಿಶ್ವೋಕ್ತಿಗಳನ್ನು ನೆನಪಿಸುತ್ತಾ ಜಗದೊಳ್ ಯಾರಿಗಾದರೂ ಶುಭವಾಯಿತೆಂದರೆ, ಅದನ್ನು ತನದೆಂದು ಅನುಭವಿಸುವವನು ಜ್ಞಾನಿ ಎಂದಿದ್ದಾರೆ.

ಹಣತೆಯ ಬತ್ತಿಯೊಂದು ಉರಿದು ಇತರರಿಗೆ ಬೆಳಕ ನೀಡಿ ತನ್ನ ಬದುಕಿನ ಸಾರ್ಥಕತೆಯನ್ನು ಕಾಣುತ್ತದೆ. ಅಂತೆಯೇ ನೆಲದಲ್ಲಿ ಬಿತ್ತಲ್ಪಟ್ಟ ಬೀಜವೊಂದು ಮೊಳಕೆಯೊಡೆದು, ತನ್ನ ಆಸ್ತಿತ್ವವನ್ನು ಇಲ್ಲವೆನಿಸಿಕೊಂಡು ವೃಕ್ಷವಾಗಿ ಜಗತ್ತಿಗೆ ನೆರಳು, ಹೂವು, ಹಣ್ಣು ನೀಡಿ ಜನ್ಮಸಾಫಲ್ಯತೆಯನ್ನು ಕಾಣುತ್ತದೆ. ಸಮಸ್ತ ವಿಶ್ವಕ್ಕೆ ಬೆಳಕೀವ ಸೂರ್ಯ ಚಂದ್ರರುಗಳೂ ಸಹ ಜಗತ್ತಿನವರ ಸುಖಕ್ಕಾಗಿ ಸೇವೆ ನೀಡುತ್ತಿದ್ದಾರೆ.

ಈ ಮೂಲಕ ನಾವುಗಳೆಲ್ಲರೂ ವಿಸ್ತರಿತ ಮನೋಭಾವವನ್ನು ಹೊಂದಿ, ಉತ್ತಮ ಸಹಕಾರಿಗಳಾಗಿ, ಸರ್ವರ ಅಭಿವೃದ್ಧಿಯನ್ನು ಬಯಸುತ್ತಾ, ನಮ್ಮ ದೈನಂದಿನ ಮನೋಭಾವದಲ್ಲಿ ಪರಿವರ್ತನೆ ತಂದು, ಇತರರ ನೆರವಿಗೂ ಸಹಾಯದ ಹಸ್ತವನ್ನು ಚಾಚುತ್ತಾ ಹೃದಯವಂತರಾಗೋಣ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

# ಸಂಯುಕ್ತ ಸಹಕಾರಿಗೆ ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ ಅಧ್ಯಕ್ಷರ ಭೇಟಿ

## "ಯುವಕರ ಸೇರ್ಪಡೆ, ವ್ಯವಹಾರಗಳ ಡಿಜಿಟಲೈಜೇಶನ್, ತಾಂತ್ರಿಕ ಅಡೆತಡೆಗಳ ನಿವಾರಣೆಗೆ ಆದ್ಯತೆ" – ಬ್ರಿಯಾನ್ ಲೀ ಬ್ರಾಂಚ್, ವೋಕೋ ಅಧ್ಯಕ್ಷ

**ಬೆಂಗಳೂರು :** ಸಂಯುಕ್ತ ಸಹಕಾರಿಯು ದಿನಾಂಕ : 17.01.219ರಂದು ಈ ಕಾರ್ಯಕ್ರಮವನ್ನು ಹೋಟಲ್ ಪಾರಿಜಾತ ಗೇಟ್ ವೇ ಇಲ್ಲಿ ಆಯೋಜಿಸಿದ್ದರು. ಈ ಸಭೆಯಲ್ಲಿ ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ (WOCCU) ಇದರ ಅಧ್ಯಕ್ಷರಾದ ಶ್ರೀ ಬ್ರಿಯಾನ್ ಲೀ ಬ್ರಾಂಚ್‌ರವರು ಹಾಗೂ ಶ್ರೀ ಕೆರ್ರಿ ಡ್ಯಾನಿ ನೇಲರ್, ಇವರ ಜೊತೆಯಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ, ಆರ್.ಬಿ.ಐ.ನ ನಿರ್ದೇಶಕರು ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಸತೀಶ್ ಮರಾಠೆ, ಶ್ರೀ ಉದಯ ಜೋಶಿ, ಶ್ರೀ ನಿಮಿಶ್ ಪಟೇಲ, ಮುಂತಾದವರು ಭಾಗವಹಿಸಿದ್ದರು.

ಶ್ರೀಮತಿ ಸವಿತಾರವರು ಪ್ರಾರ್ಥನೆಯನ್ನು ನೆರವೇರಿಸಿಕೊಟ್ಟರು. ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ರಾಜ್ಯದ ಸಮಗ್ರ ಸಹಕಾರ ವ್ಯವಸ್ಥೆ ಬದ್ಧವೆಂದು ತಿಳಿಸಿ, ಮುಖ್ಯ ಅಥಿತಿ ಗಣ್ಯರನ್ನು ಸ್ವಾಗತ ಮಾಡುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಹಿರಿಯ ಸಹಕಾರಿ ಹಾಗೂ ಆರ್.ಬಿ.ಐ ಮತ್ತು ಎನ್.ಸಿ.ಡಿ.ಸಿ.ಯ ನಿರ್ದೇಶಕರಾದ ಶ್ರೀ ಸತೀಶ್ ಮರಾಠೆರವರು ಕಾರ್ಯಕ್ರಮದ ಮುಖ್ಯ ಉದ್ದೇಶವನ್ನು ವಿವರಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರುಣ್ ಕುಮಾರ್‌ರವರು ಕರ್ನಾಟಕದಲ್ಲಿ ಸಹಕಾರ ಚಳುವಳಿಯ ಬಗ್ಗೆ ವಿಶೇಷವಾಗಿ ಕ್ರೆಡಿಟ್ ಸಹಕಾರ ಚಳುವಳಿಯ ಬಗ್ಗೆ ಮಾಹಿತಿಯನ್ನು ನೀಡಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಕರ್ನಾಟಕದಲ್ಲಿ ಸೌಹಾರ್ದ ಚಳುವಳಿಯ ಕುರಿತು ವಿಷಯವನ್ನು ತಿಳಿಸಿದರು. ಅಲ್ಲದೆ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಸಿ.ಎಂ. ಮಾರೇಗೌಡರವರು ಮಾತನಾಡಿ ಕರ್ನಾಟಕದಲ್ಲಿ ಪತ್ತಿನ ಸಹಕಾರ ಸಂಸ್ಥೆಯ ಹುಟ್ಟು ಬೆಳವಣಿಗೆ ಹಾಗೂ ಪ್ರಸ್ತುತ ಕಾರ್ಯವೈಖರಿಯ ಬಗ್ಗೆ ತಿಳಿಸಿದರು.

ಉಪಸ್ಥಿತರಿದ್ದ ಮುಖ್ಯ ಅಥಿತಿಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ಹುಟ್ಟು, ಬೆಳವಣಿಗೆ ವಿಶೇಷ ಕಾರ್ಯಚಟುವಟಿಯ ಬಗ್ಗೆ ಒಂದು ಸಾಕ್ಷ್ಯಾಚಿತ್ರದ ಮೂಲಕ ತೋರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರಗು ಮೂಡಿಸಲಾಯಿತು.

ಇದೇ ಸಂದರ್ಭದಲ್ಲಿ ಜ್ಞಾನ ಶಾಲೆ ಸೌಹಾರ್ದ ಸಹಕಾರಿಯ ಕಾರ್ಯ ವೈಖರಿಯ ಬಗ್ಗೆ, ವಿಶೇಷವಾಗಿ ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ಅನುವು ಮಾಡಿಕೊಡುವುದರಲ್ಲಿ ಹಾಗೂ ಮುಂದಿನ ದಿನಗಳ ಕಾರ್ಯ ಯೋಜನೆಯ ಬಗ್ಗೆ ಒಂದು ಸಾಕ್ಷ್ಯಾಚಿತ್ರ ತೋರಿಸುವುದರ ಮೂಲಕ ಸೌಹಾರ್ದ ಸಹಕಾರಿಯ ಬೆಳವಣಿಗೆಯನ್ನು ತಿಳಿಸಿಕೊಡಲಾಯಿತು.



ನಂತರ ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ (WOCCU) ಇದರ ಅಧ್ಯಕ್ಷರಾದ ಶ್ರೀ ಬ್ರಿಯಾನ್ ಲೀ ಬ್ರಾಂಚ್‌ರವರು, 160 ದೇಶಗಳಲ್ಲಿ, 75,000 ಕ್ರೆಡಿಟ್ ಸಹಕಾರ ಸಂಘಗಳು ಮತ್ತು ವಿಶ್ವದ 260 ದಶಲಕ್ಷ ಜನರನ್ನು ವರ್ಲ್ಡ್ ಕೌನ್ಸಿಲ್ ಆಫ್ ಕ್ರೆಡಿಟ್ ಯೂನಿಯನ್ ಹೊಂದಿದೆ ಎಂದು ತಿಳಿಸಿದರು. ಸಹಕಾರ ಸಂಸ್ಥೆಗಳು ಅಂತರರಾಷ್ಟ್ರೀಯ ಮಾನದಂಡಗಳೊಂದಿಗೆ ಮತ್ತು ಕಾರ್ಯ ಸಾಧ್ಯತೆಯನ್ನು ಹಾಗೂ ಸದಸ್ಯ ಸಮುದಾಯವನ್ನು ಉತ್ತಮಗೊಳಿಸಲು ಆರ್ಥಿಕ ಸ್ಥಿರತೆಯೊಂದಿಗೆ ಕೆಲಸ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

"ಸಹಕಾರ ಸಂಘಗಳು ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯುವಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಳಿಸುವುದು, ಡಿಜಿಟಲೈಜೇಷನ್ ಸೇವೆಗಳನ್ನು ಒದಗಿಸುವುದು ನಮ್ಮ ಮುಖ್ಯ ಗುರಿ ಎಂದು ತಿಳಿಸಿದರು. ಡಿಜಿಟಲ್ ರೂಪದಲ್ಲಿ ಖರೀದಿ ನಿರ್ಮಾಣಕ್ಕೆ ಸಹಕಾರ ಸಂಸ್ಥೆಗಳು ಹಣಕಾಸು ಸೇವೆಗಳನ್ನು ಒದಗಿಸಬೇಕು. "ನಿಯಂತ್ರಣ, ತಾಂತ್ರಿಕ ಅಡೆತಡೆಗಳು, ಸದಸ್ಯರ ಸಮೂಹ" ಇದು ಸಹಕಾರ ಸಂಘಗಳ ಪ್ರಮುಖ ಸವಾಲುಗಳಾಗಿದೆ ಎಂದು ತಿಳಿಸಿದರು. WOCCU 2025ರ ವೇಳೆಗೆ ಇದರ ಸದಸ್ಯ ಸಹಕಾರಿ ಸಂಘಗಳ ಹಣಕಾಸು ಸೇವೆಗಳನ್ನು ಡಿಜಿಟಲೈಜ್ ಮಾಡುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಯು.ಎಸ್.ನಲ್ಲಿ ಪ್ರತಿಯೊಬ್ಬರೂ ಸಹಕಾರ ಸಂಘಗಳ ಸದಸ್ಯರಾಗಿದಾರೆ ಎಂದು ತಿಳಿಸಿದರು. ಅಲ್ಲದೆ ಅವರು ಸಭೆಯಲ್ಲಿ ಭಾಗವಹಿಸಿದ್ದವರ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದರು.

ಶ್ರೀ ಕೆರ್ರಿ ಡಿವೈನ್ ನೇಲರ್, ವಿಶ್ವದಲ್ಲೇ ಕ್ರಡಿಟ್ ಸಹಕಾರ ಚಳುವಳಿಯನ್ನು ಬಲಪಡಿಸುವುದರ ಮೂಲಕ ಪ್ರಾಮುಖ್ಯತೆ ಮತ್ತು ನಿರ್ವಹಿಸಬೇಕಾದ ಅತಿಮುಖ್ಯ ಗುರಿಗಳ ಬಗ್ಗೆ ತಿಳಿಸಿದರು.

ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀ ಬ್ರಿಯಾನ್ ಲೀ ಬ್ರಾಂಚ್, ಶ್ರೀ ಕೆರ್ರಿ ಡಿವೈನ್ ನೇಲರ್, ಮತ್ತು ಶ್ರೀ ಸತೀಶ್ ಮರಾಠೆ ಮತ್ತು ಶ್ರೀ ರಮೇಶ ವೈದ್ಯರವರಿಗೆ ಸನ್ಮಾನಿಸಲಾಯಿತು.

ನಂತರ ಸಭೆಯ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್‌ರವರು ನಡೆಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ್, ಶ್ರೀ ಬಿ.ಎಸ್. ಗುಂಡುರಾವ್, ಶ್ರೀ ಎಂ. ಬಿ. ಕಲಾಲ್, ಶ್ರೀ ಆರ್.ಎನ್. ದೇಶಪಾಂಡೆ, ಶ್ರೀ ಬಿ. ರಾಜಶೇಖರ್, ಆರ್.ಐ.ಸಿ.ಎಂ.ನ ನಿರ್ದೇಶಕರಾದ ಶ್ರೀ ಇಳಂಗೋವನ್, ಕರ್ನಾಟಕ ರಾಜ್ಯ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರಾದ ಶ್ರೀ ನಾಗರಾಜಶೆಟ್ಟಿ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ನಂದೀಶ ವಿ. ಹಿರೇಮಠ, ಶ್ರೀ ವೈ. ವಿ. ಗುಂಡೂರಾವ್,ಶ್ರೀ ಎಸ್.ಎ. ಸಿದ್ಧಾಂತಿ, ಶ್ರೀ ಹೆಚ್.ಎಸ್. ನಾಗರಾಜಯ್ಯರವರು ಅಲ್ಲದೆ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಸನೀಲ್‌ರವರು ಉಪಸ್ಥಿತರಿದ್ದರು ಮತ್ತು ಅನೇಕ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಸಹಕಾರಿಗಳು ಭಾಗವಹಿಸಿದ್ದರು.




ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿಯವರೊಂದಿಗೆ ಅತಿಥಿ ಗಣ್ಯರು.

## ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ಸಮಾರಂಭ



ಭೂಮಿಪೂಜೆ



ಕಾರ್ಯಕ್ರಮದ ಉದ್ಘಾಟನೆ

**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ಸಮಾರಂಭವನ್ನು ಡಾ॥ ಪ್ರಭಾಕರ ಕೋರೆ, ಮಾನ್ಯ ರಾಜ್ಯ ಸಭಾ ಸದಸ್ಯರು ಹಾಗೂ ಕಾರ್ಯಾಧ್ಯಕ್ಷರು ಕೆ.ಎಲ್.ಇ. ಸಂಸ್ಥೆ ಬೆಳಗಾವಿ ಇವರು ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಶ್ರೀ ಮಹಾಂತೇಶ ಕವಟಗಿಮಠ, ಮಾನ್ಯ ಮುಖ್ಯ ಸಚೇತಕರು, ವಿರೋಧಪಕ್ಷ ವಿಧಾನ ಪರಿಷತ್, ಕರ್ನಾಟಕ ಸರ್ಕಾರ, ಸಹಕಾರ ರತ್ನ ಪುರಸ್ಕೃತರಾದ ಶ್ರೀ ರಾವ್ ಸಾಹೇಬ್ ಅ. ಪಾಟೀಲ, ಮಾನ್ಯ ಅಧ್ಯಕ್ಷರು, ಅರಿಹಂತ ಸೌಹಾರ್ದ ಸಹಕಾರಿ ನಿ., ಬೋರಗಾಂವ. ಶ್ರೀ ಡಿ.ಟಿ. ಪಾಟೀಲ, ಮಾನ್ಯ ಅಧ್ಯಕ್ಷರು, ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಬೆಂಗಳೂರು ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ವಹಿಸಿದ್ದರು.




ಶಿಲಾನ್ಯಾಸ

ಕಾರ್ಯಕ್ರಮವು ಶ್ರೀಮತಿ ರೇಷ್ಮಾ ಪಾಟೀಲ ಹಾಗೂ ಶ್ರೀಮತಿ ಶಿಲ್ಪಾ ಹೊಸಮನಿಯರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸ್ವಾಗತವನ್ನು ಶ್ರೀ ಜಿ ಎನ್ ಪಾಟೀಲ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇವರು ನಡೆಸಿಕೊಟ್ಟರು.

ಪ್ರಾಸ್ತಾವಿಕ ನುಡಿಯನ್ನು ಶ್ರೀ ಜಗದೀಶ ಕವಟಗಿಮಠ ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇವರು ನಡೆಸಿಕೊಟ್ಟರು. ಮಾನ್ಯರು ಮಾತನಾಡುತ್ತ ಬೆಳಗಾವಿ ಪ್ರಾಂತಕ್ಕೆ ನಿವೇಶನ ಖರೀದಿಸಿ ಕಟ್ಟಡ ನಿರ್ಮಿಸುವುದು, ಸಂಯುಕ್ತ ಸಹಕಾರಿಯ ಎಲ್ಲಾ ಆಡಳಿತ ಮಂಡಲಿಯವರ ಒತ್ತಾಸೆಯಾಗಿತ್ತು ಅದು ಈಗ ಕಾರ್ಯಗತವಾಗುತ್ತಾ ಇದೆ, ಇದು ಸಂತೋಷದ ವಿಷಯ. ಬೆಳಗಾವಿ ಜಿಲ್ಲೆ ಸೌಹಾರ್ದ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಈ ಕಟ್ಟಡದಲ್ಲಿ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿ, ನ್ಯಾಯಾಲಯ ಹಾಗೂ ತರಬೇತಿ ವಿಭಾಗಗಳು ನಿರ್ಮಾಣಗೊಳ್ಳುತೀವೆ ಎಂದು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಹೇಳಿದರು.

**ಡಾ॥ ಪ್ರಭಾಕರ ಕೋರೆಯವರು** ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತ ಸಹಕಾರ ಚಳುವಳಿಯು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಾಗಿ ನಡೆದು ಬಂದಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ಉತ್ತರ ಕರ್ನಾಟಕ ಭಾಗವು ಪ್ರಮುಖ ಪಾತ್ರ ವಹಿಸಿದೆ. ಸಹಕಾರಿಗಳು ಈ ಭಾಗದಲ್ಲಿ ಹೆಚ್ಚು ಇವೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ ಪ್ರಾಂತೀಯ ಕಛೇರಿಯ ಸ್ವಂತ ಕಟ್ಟಡವು ನಿರ್ಮಾಣಗೊಳ್ಳುತ್ತಿರುವುದು ಸಂತೋಷಕರ ವಿಷಯವಾಗಿದೆ. ಈ ಕಟ್ಟಡದಲ್ಲಿ ಸೌಹಾರ್ದ ಸಹಕಾರಿಗಳಿಗೆ ತರಬೇತಿ ವಿಭಾಗ ಹಾಗೂ ಸಹಕಾರಿಯ ನ್ಯಾಯಾಲಯ ಕೂಡ ಸ್ಥಾಪಿತಗೊಳ್ಳುವುದರಿಂದ ಸಹಕಾರಿಗಳಿಗೆ ಅನುಕೂಲಕರವಾಗಲಿದೆ, ಕಟ್ಟಡದ ಕೆಲಸವು ಬೇಗನೆ ಮುಗಿಯಲಿ ಎಂದು ಶುಭಹಾರೈಸಿದರು.

**ಶ್ರೀ ಮಹಾಂತೇಶ ಕವಟಗಿಮಠ :** ಸೌಹಾರ್ದ ಸಹಕಾರಿಗಳು ತುಂಬ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು, ಒಂದು ಇತಿ ಮಿತಿಗಳಲ್ಲಿ, ಕಾನೂನುಗಳನ್ನು ಪಾಲಿಸುತ್ತ ನಡೆದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಕಟ್ಟಡವು ಅಲ್ಪಾವಧಿಯಲ್ಲಿಯೇ ಪೂರ್ಣಗೊಳ್ಳಲಿ ಎಂದು ಶುಭ ಹಾರೈಸಿದರು.

**ಶ್ರೀ ಡಿ.ಟಿ. ಪಾಟೀಲ :** ನಮ್ಮ ಕರ್ನಾಟಕ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಕಛೇರಿ ಕಟ್ಟಡದ ಕಾರ್ಯ ನಡೆಯುತ್ತಿದ್ದು ಅದರ ಎದುರಿಗೆ ಸಂಯುಕ್ತ ಸಹಕಾರಿಯ ಇದರ ಬೆಳಗಾವಿ ಪ್ರಾಂತೀಯ ಕಛೇರಿಯ ಕಟ್ಟಡವು ನಿರ್ಮಾಣಗೊಳ್ಳುತ್ತಿರುವುದು ಸಂತೋಷದ ವಿಷಯವಾಗಿದೆ ಎಂದರು. ಕಟ್ಟಡ ಬೇಗನೆ ನಿರ್ಮಾಣಗೊಳ್ಳಲಿ ಎಂದು ಶುಭಹಾರೈಸಿದರು.

**ಶ್ರೀ ರಾವಸಾಹೇಬ ಅ ಪಾಟೀಲ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಬೆಳಗಾವಿ ಪ್ರಾಂತೀಯ ಕಛೇರಿಯ ಕಟ್ಟಡ ನಿರ್ಮಾಣದ ವಿಚಾರ ಕೆಲವು ವರ್ಷಗಳ ಹಿಂದೆ ನಡೆದಿತ್ತು, ಅದು ಈಗಿನ ಪ್ರಸ್ತುತ ಆಡಳಿತ ಮಂಡಲಿಯವರಿಂದ ಪೂರ್ಣಗೊಳ್ಳುತ್ತಿರುವುದು ತುಂಬ ಸಂತೋಷದ ಸಂಗತಿ ಎಂದು ಹೇಳಿದರು. ಕಟ್ಟಡ ನಿರ್ಮಾಣಕ್ಕೆ ಶುಭವನ್ನು ಕೋರಿದರು.

**ಅಧ್ಯಕ್ಷರ ಭಾಷಣ :** ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಮಾನ್ಯರು ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ ಬೆಳಗಾವಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡದ ನಿರ್ಮಾಣಕ್ಕೆ ಶುಭ ಹಾರೈಸಿದರು ಮತ್ತು ಜಿಲ್ಲಾ ಒಕ್ಕೂಟಗಳ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಿಂದ ಸಹಕಾರಿಗಳಿಗೆ ಅನುಕೂಲಕರವಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲ ಗಣ್ಯರು ಕಟ್ಟಡ ನಿರ್ಮಾಣಕ್ಕೆ ಶುಭವನ್ನು ಹಾರೈಸಿದರು. ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಹೆಚ್.ವಿ.ರಾಜೀವ್, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ರಂಗಪ್ಪಯ್ಯ ದೇಶಪಾಂಡೆ, ಶ್ರೀ ಮಾರುತಿ ಬಿ.ಕಲಾಲ, ಶ್ರೀ ಗುರುನಗೌಡ ಎನ್ ಪಾಟೀಲ, ಶ್ರೀ ವಾಯ್.ಟಿ.ಪಾಟೀಲ, ಶ್ರೀ ಜಿ.ನಂಜನಗೌಡ, ಶ್ರೀ ಸಿದ್ರಾಮಪ್ಪ ಉಪ್ಪಿನ, ಶ್ರೀ ಆರ್. ತಿಮ್ಮಯ್ಯಶೆಟ್ಟಿ, ಶ್ರೀ ಬಿ. ಎಸ್. ಗುಂಡುರಾವ್, ಶ್ರೀ ಎ. ಆರ್. ಪ್ರಸನ್ನಕುಮಾರ, ಶ್ರೀ ಸಂಜೀವ ಮಹಾಜನ ಶ್ರೀ ಜಿ. ಶ್ರೀಧರ, ಶ್ರೀ ಮಂಜುನಾಥ, ಶ್ರೀ ಚಂದ್ರಕಾಂತ ಪಡಚಣ್ಣನವರ, ಶ್ರೀಮತಿ ಸರಸ್ವತಿ ಎನ್ ರವಿ ಹಾಗೂ ವೃತ್ತಿಪರ ನಿರ್ದೇಶಕರುಗಳಾದ ಶ್ರೀ ಎಂ. ಜಿ. ಪಾಟೀಲ ಹಾಗೂ ಶ್ರೀ ಬಿ. ರಾಜಶೇಖರ್ ರವರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಹಕಾರಿಗಳು

ವಂದನಾರ್ಪಣೆಯನ್ನು ಶ್ರೀಮತಿ ಸರಸ್ವತಿ ಎನ್ ರವಿ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಇವರು ನಡೆಸಿಕೊಟ್ಟರು.

# ಆದಾಯ ತೆರಿಗೆ ಬಾಧಿತ ಪ್ರಾಥಮಿಕ ಸಹಕಾರ ಸಂಸ್ಥೆಗಳ / ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರ ಕಾರ್ಯಯೋಜನಾ ಸಭೆ





**ಬೆಂಗಳೂರು** : ದಿನಾಂಕ : 10.01.2019ರಂದು ನಗರದ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಪ್ರಾಥಮಿಕ ಸಹಕಾರ ಸಂಸ್ಥೆಗಳ/ಸೌಹಾರ್ದ ಸಹಕಾರಿ ಸಂಸ್ಥೆಗಳ ಮೇಲೆ ಆದಾಯ ತೆರಿಗೆ ಇಲಾಖೆಯವರು ಸತತವಾಗಿ ನೀಡುತ್ತಿರುವ ನೋಟೀಸ್ ಹಾಗೂ ಆದೇಶಗಳಿಂದ ಪೀಡಿತರಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಸುಮಾರು 200ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳಿಂದ 400ಕ್ಕೂ ಹೆಚ್ಚು ಪ್ರತಿನಿಧಿಗಳು ಆಗಮಿಸಿ ತಮ್ಮ ಅವಗಾಹನೆಯನ್ನು ಸಭೆಗೆ ತಿಳಿಸಿ ಇದಕ್ಕೆ ನಿರ್ದಿಷ್ಟ ಕಾರ್ಯಯೋಜನೆಯ ಅಗತ್ಯವಿದೆ ಅದಕ್ಕಾಗಿ ಈ ಸಭೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಸ್ವಾಗತ ಕೋರಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಮೇಲೆ ಅನಗತ್ಯವಾಗಿ ನೋಟೀಸ್ ನೀಡುವುದು, ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂದು ವ್ಯಾಖ್ಯಾನಿಸಿ ಆದಾಯ ತೆರಿಗೆ ಪಾವತಿಸುವಂತೆ ಆದೇಶ ಹೊರಡಿಸಿವ ಕಾರ್ಯಗಳಿಂದ ಸೌಹಾರ್ದ ಸಹಕಾರಿಗಳು ಹೆಚ್ಚಿನ ತೊಂದರೆಗೆ ಒಳಗಾಗಿದ್ದಾರೆ. ಇದರ ಜೊತೆಗೆ ಆದಾಯ ತೆರಿಗೆ ಇಲಾಖೆಯವರು ಸೌಹಾರ್ದ ಸಹಕಾರಿ ಸಂಘಗಳೆಂದು ವ್ಯಾಖ್ಯಾನಿಸುವ ಕುರಿತು ಸೌಹಾರ್ದ ಸಹಕಾರಿಯ ಕಾಯ್ದೆಯಲ್ಲಿ ತಿದ್ದುಪಡಿಗೆ ಸುಗ್ರೀವಾಜ್ಞೆಯನ್ನು ತಂದು ಸೌಹಾರ್ದ ಸಹಕಾರಿ ಸಂಸ್ಥೆಗಳು ಸೌಹಾರ್ದ ಸಹಕಾರಿ ಸಂಘ ಎಂದು ತಿದ್ದುಪಡಿ ಮಾಡುವುದಕ್ಕೆ ಮನವಿಯನ್ನು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮಾನ್ಯ ಸಹಕಾರ ಸಚಿವರಿಗೆ ಸಲ್ಲಿಸಲಾಗಿದೆ. ಅವರುಗಳನ್ನು ಭೇಟಿ ಮಾಡಿ ವಿವರಿಸಲಾಗಿದೆ. ಇದರ ಬಗ್ಗೆ ಅವರೂ ಸಹ ಒಪ್ಪಿದ್ದಾರೆ, ಇದರ ಜೊತೆಗೆ ಸರ್ಕಾರದ ಅನೇಕ ಪ್ರಮುಖ ಸಚಿವರನ್ನು ಮತ್ತು ಶಾಸಕರುಗಳಿಂದ ಪತ್ರಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸುವ ಕ್ರಮವಿಡಲಾಗಿದೆ ಎಂದು ತಿಳಿಸಿದರು.

ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್, ಸನ್ನದು ಲೆಕ್ಕಪರಿಶೋಧಕರಾದ ಮಧುಕರ ಹೆಗಡೆ ಹಾಗೂ ರಾಷ್ಟ್ರೀಯ ಸಹಕಾರ ಭಾರತಿಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಜ್ಯೋತಿಂದ್ರ ಬಾಯಿ ಮೆಹತಾ, ಹಿರಿಯ ಸಹಕಾರಿ ಹಾಗೂ ಆರ್.ಬಿ.ಐ.ನ ನಿರ್ದೇಶಕರಾದ ಶ್ರೀ ಸತೀಶ ಮರಾಠೆ, ಇವರುಗಳ ನಿಯೋಗ ಕೇಂದ್ರದ ಹಣಕಾಸು ಇಲಾಖೆಯ ರಾಜ್ಯ ಸಚಿವರಾದ ಶ್ರೀ ಶಿವಪ್ರತಾಪ್ ಶುಕ್ಲ, ಬಿ.ಜೆ.ಪಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಅಮಿತ್ ಶಾ, ಸಿಬಿಡಿಟಿಯ ಅಧ್ಯಕ್ಷರಾದ ಶ್ರೀ ಸುಶೀಲ್ ಚಂದ್ರ ಇವರುಗಳನ್ನು ಭೇಟಿ ಮಾಡಿ ಈ ತೊಂದರೆಗಳನ್ನು ಅವರುಗಳ ಗಮನಕ್ಕೆ ತರಲಾಗಿದೆ ಮತ್ತು ಅವರುಗಳು ಈ ತೊಂದರೆಗಳಿಗೆ ಶೀಘ್ರದಲ್ಲೆಯೇ ಪರಿಹಾರ ಒದಗಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಸೌಹಾರ್ದ ಸಹಕಾರಿಗಳು ಧೃತಿಗೆಡಬೇಕಾದ ಅವಶ್ಯಕತೆ ಇಲ್ಲ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿಮ್ಮೊಂದಿಗೆ ಯಾವಾಗಲೂ ಸ್ಪಂಧಿಸುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ರವರು ಮಾತನಾಡಿ ದಿನಾಂಕ 11.01.2019ರಂದು ಸಹಕಾರ ಭಾರತಿಯ ಸ್ಥಾಪನಾ ದಿನ. ಸಹಕಾರ ಭಾರತಿ ಸ್ಥಾಪನೆಯಾಗಿ 40 ವರ್ಷಗಳು ಕಳೆದಿವೆ. ಶ್ರೀಯುತ ಲಕ್ಷ್ಮಣರಾವ್ ಇನಾಂದಾರ್ ಇವರ ನೇತೃತ್ವದಲ್ಲಿ ರಾಷ್ಟ್ರದ ಸಹಕಾರ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂಧಿಸಿವ ಸಹಕಾರ ಆಂದೋಲನ ಪ್ರಗತಿಪರ ಪೂರಕವಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಚಿಂತನೆ, ಅತ್ಯಂತ ಪ್ರಮುಖವಾಗಿ ಸಹಕಾರಿಗಳನ್ನು ಸಂಸ್ಕಾರವಂತರನ್ನಾಗಿ ಮಾಡಿ ವ್ಯಕ್ತಿ ನಿರ್ಮಾಣ ಮಾಡುವುದು ಈ ಸಂಸ್ಥೆಯ ಮೂಲ ಉದ್ದೇಶ ಎಂದು ತಿಳಿಸುತ್ತಾ ರಾಜ್ಯದ ಸೌಹಾರ್ದ ಸಹಕಾರಿಗಳ ಜ್ವಲಂತ ಸಮಸ್ಯೆಗಳನ್ನು ಅನೇಕ ಬಾರಿ ಕೇಂದ್ರದ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ಈ ಬಾರಿಯ ಭೇಟಿ ಅತ್ಯಂತ ಅನುಕೂಲಕರವಾಗಿದೆ ಎಂದು ತಿಳಿಸಿದರು.

ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಭಾಗವಹಿಸಿದ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳು ತಮ್ಮ ತಮ್ಮ ಅಹವಾಲುಗಳನ್ನು ಮುಕ್ತವಾಗಿ ಹಂಚಿಕೊಂಡು ಕಾರ್ಯಯೋಜನೆ ಸಿದ್ದಪಡಿಸಲು ಸಹಕರಿಸಲು ಕೋರಿದರು.

ಸಭೆಯಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರಾದ ಶ್ರೀ ಗಂಗಾಧರಯ್ಯ, ಶ್ರೀ ಪ್ರಸನ್ನಕುಮಾರ್, ಶ್ರೀ ಸಂಜೀವ ಮಹಾಜನ್, ಶ್ರೀ ವೈ.ಟಿ.ಪಾಟೀಲ್, ಶ್ರೀಮತಿ ಸರಸ್ವತಿ, ಶ್ರೀ ಬಿ.ಎಸ್. ಗುಂಡುರಾವ್, ಶ್ರೀ ಬಿ.ರಾಜಶೇಖರ್ ಇವರುಗಳಲ್ಲದೆ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಮಧುಕರ್ ಹೆಗಡೆ, ಶ್ರೀ ಉಮೇಶ್ ಶೆಟ್ಟಿ, ಶ್ರೀ ಬಾಹುಬಲಿ ಗೌರಾಜ್, ಶ್ರೀ ಬಾಲಸುಬ್ರಮಣ್ಯ, ಹಾಗೂ ಹಿರಿಯ ವಕೀಲರುಗಳಾದ ಶ್ರೀ ಮಲ್ಲಾರೆಡ್ಡಿ, ಸಹಕಾರ ಇಲಾಖೆಯ (ನಿ) ಅಪರ ನಿಬಂಧಕರಾದ ಶ್ರೀ ಹುಚ್ಚಾಚ್ಚಾರಿ, ನಿವೃತ್ತ

ಜಂಟಿ ಆದಾಯ ತೆರಿಗೆ ಆಯುಕ್ತರು ಶ್ರೀ ಮರೆನ್ನಾ ಇವರುಗಳು ಉಪಸ್ಥಿತರಿದ್ದು ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ಮಂಡಿಸಿದ ಅವಗಾಹನೆಗಳಿಗೆ ಸೂಕ್ತ ಪರಿಹಾರರೋಪಾಯಗಳನ್ನು ನೀಡಿದರು.

**ಸಭೆಯಲ್ಲಿ ತೆಗೆದುಕೊಂಡ ಕಾರ್ಯಯೋಜನೆಯ ಪ್ರಮುಖ ಅಂಶಗಳು**

- ಸೌಹಾರ್ದ ಸಹಕಾರಿಗಳು – ಸಹಕಾರ ಸಂಘಗಳು ಒಂದೇ ಎಂದು ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿ ಆಗಬೇಕು.
- ಸಿಬಿಡಿಟಿಯಿಂದ ಆದ್ಯತೆ ಮೇರೆಗೆ ಸ್ಪಷ್ಟತೆಯನ್ನು ಪಡೆದು ಎಲ್ಲಾ ಸಹಕಾರಿಗಳಿಗೆ ಮಾಹಿತಿಯನ್ನು ನೀಡುವುದು.
- ಸಂಯುಕ್ತ ಸಹಕಾರಿಯು ಆದಾಯ ತೆರಿಗೆ ಇಲಾಖೆಯ ಸಮಸ್ಯೆಗೆ ಪರಿಹಾರ ಒದಗಿಸಲು ಸೂಕ್ತ ಕ್ರಮವಿಡುವುದು. ಇದಕ್ಕೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಹೋರಾಟ ಮಾಡುವುದು ಇದಕ್ಕೆ ರಾಜ್ಯ ಎಲ್ಲಾ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಕೈಜೊಡಿಸುವುದು.
- ಸೌಹಾರ್ದ ಕಾಯ್ದೆಗೆ ಸುಗ್ರಿವಾಜ್ಞೆಯ ಮೂಲಕ ತಿದ್ದುಪಡಿಗೆ ಕ್ರಮವಿಡುವುದು.
- ಸೌಹಾರ್ದ ಸಂಸ್ಥೆಗಳಿಗೆ ಬಂದಿರುವ ನೋಟೀಸ್ ಮತ್ತು ಆದೇಶಗಳಿಗೆ ಸೂಕ್ತವಾದ ಕಾನೂನು ಕ್ರಮವಿಡಲು ಸಲಹೆ ನೀಡುವುದು.
- ವಕೀಲರ ಹಾಗೂ ಸನ್ನದು ಲೆಕ್ಕಪರಿಶೋಧಕರ ಜಿಲ್ಲಾವಾರು ಪಟ್ಟಿಗಳನ್ನು ಸಿದ್ದಪಡಿಸುವುದು ಹಾಗೂ ಅವರುಗಳ ಮಾರ್ಗದರ್ಶನ ಪಡೆಯುವುದು.
- ಸಹಸದಸ್ಯರು ಮತ್ತು ನಾಮ ಮಾತ್ರ ಸದಸ್ಯರುಗಳ ಜೊತೆ ವ್ಯವಹರಿಸುವ ಕುರಿತು ಕಾಯ್ದೆಯಲ್ಲಿ ಅವಕಾಶವಿರುವಂತೆ ಸಹಕಾರಿಗಳು ತಮ್ಮ ಉಪವಿಧಿಗಳನ್ನು ತಿದ್ದುಪಡಿಮಾಡಿಕೊಂಡು ಇವುಗಳು ವ್ಯವಹಾರಗಳಲ್ಲ, ಸೇವೆಗಳು ಎಂದು ಪರಿಗಣಿಸಿ ಅವುಗಳ ಪ್ರತ್ಯೇಕ ಖಾತೆಗಳನ್ನು ನಿರ್ವಹಿಸುವುದು.
- ಸದ್ಯಸ್ಯರುಗಳಲ್ಲದವರ ಜೊತೆಗೆ ವ್ಯವಹಾರ ಮಾಡುವುದರ ಬಗ್ಗೆ ಅಂದರೆ, ಇ–ಸ್ಟಾಂಪಿಂಗ್, ಏರ್ ಟಿಕೇಟ್, ಬಸ್ ಟಿಕೇಟ್ ಮುಂತಾದವುಗಳ ಬಗ್ಗೆ ಪ್ರತ್ಯೇಕ ಖಾತೆಗಳನ್ನು ನಿರ್ವಹಿಸುವುದು
- ಮೇಲಿನ ಬೇಡಿಕೆಗಳು ಈಡೇರದಿದ್ದಲ್ಲಿ ರಾಜ್ಯಾದ್ಯಂತ ಸಹಕಾರಿಗಳು ಹೋರಾಟ ಮಾಡುವುದು.

## ಆಡಳಿತ ಪರಿಣಿತಿ ತರಬೇತಿ - ಮೈಸೂರು ವಿಭಾಗ




**ದಕ್ಷಿಣ ಕನ್ನಡ** : ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳಿಗಾಗಿ ಹಮ್ಮಿಕೊಂಡಿರುವ ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮವು ದಿನಾಂಕ : 29.01.2019ರಂದು ಮಂಗಳೂರಿನ ಹೋಟೆಲ್ ಶ್ರೀನಿವಾಸ್‌ನ ಮಂಗಳಾ ಸಭಾಂಗಣದಲ್ಲಿ ನಡೆಯಿತು. ಗಾರ್ಡನ್ ರೆಸ್ಟೋರೆಂಟ್‌ನಲ್ಲಿ ನಡೆಯಬೇಕಾದ ಕಾರ್ಯಕ್ರಮವು ತಾಂತ್ರಿಕ ಕಾರಣ (ನ್ಯಾಯಲಯದ ಆದೇಶದಂತೆ ಹೋಟೆಲ್ ಮುಚ್ಚಿರುವುದರಿಂದ) ದಿಂದಾಗಿ ಶ್ರೀನಿವಾಸ ಹೋಟೆಲ್‌ಗೆ ಸ್ಥಳಾಂತರಿಸಲಾಯಿತು.

ಆಡಳಿತ ಪರಿಣತಿ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಂಗಳೂರಿನ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಆಪರೇಟಿವ್‌ನ ಅಧ್ಯಕ್ಷರಾದ ಶ್ರೀ ಜೈರಾಜ್ ರೈ ಇವರು ನೆರವೇರಿಸಿದ್ದರು. ಬಳಿಕ ಮಾತನಾಡಿದ ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಿಗೂ ತರಬೇತಿಯ ಅಗತ್ಯವಿದೆ. ತರಬೇತಿಯಿಂದ ಮಾತ್ರ ಬದಲಾವಣೆಗೆ ಒಗ್ಗಿಕೊಳ್ಳಲು ಸಾಧ್ಯ ಎಂದು ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಂಗಳೂರಿನ ವಿಶ್ವಕರ್ಮ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್ಯ ಇವರು ಭಾಗವಹಿಸಿ ಸಂಯುಕ್ತ ಸಹಕಾರಿಯು ತರಬೇತಿ ಕಾರ್ಯಕ್ರಮವನ್ನು ಉತ್ತಮ ರೀತಿಯಲ್ಲಿ ಆಯೋಜಿಸಿಕೊಂಡು ಬರುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ನಿರ್ದೇಶಕರುಗಳು ಭಾಗವಹಿಸಿರುವುದು ಇದಕ್ಕೆ ಸಾಕ್ಷಿ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ಮಂಗಳೂರಿನ ಒಡಿಯೂರು ಶ್ರೀ ವಿವಿದೋದ್ಧೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಇವರು ಸಹಕಾರಿಯ ನಿರ್ದೇಶಕರುಗಳು ಸೇವಾ ಮನೋಭಾವದಿಂದ ಸಹಕಾರಿಯಲ್ಲಿ ತೋಡಗಿಸಿಕೊಂಡಾಗ ಮಾತ್ರ ಸಹಕಾರಿಯು ಯಶಸ್ವಿಯಾಗಲು ಸಾಧ್ಯ ಎಂದು ತಿಳಿಸಿದರು. ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು. ಶ್ರೀ ವಿಜಯ್ ಬಿ.ಎಸ್ ಇವರು ನಿರೂಪಿಸಿ, ವಂದಿಸಿದರು. ಉದ್ಘಾಟಕ ಕಾರ್ಯಕ್ರಮದ ನಂತರದಲ್ಲಿ ತರಬೇತಿ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಸಹಕಾರಿಗಳ ಅಪರ ನಿಬಂಧಕರು (ನಿವೃತ್ತ) ಶ್ರೀ ಎಚ್.ಎಸ್.ನಾಗರಾಜಯ್ಯ ಇವರು ಸಹಕಾರಿಯ ನಿರ್ದೇಶಕರುಗಳ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು. ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 52 ಸಂಸ್ಥೆಯಿಂದ 85 ಜನ ನಿರ್ದೇಶಕರುಗಳು ಭಾಗವಹಿಸಿದ್ದರು.



**ಬೆಂಗಳೂರು** : ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ತೋಟಗಾಂ ಜಮಾಂಗ್ ಅವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಭೇಟಿ ನೀಡಿ ಹೊಸ ವರ್ಷದ ಶುಭಾಶಯವನ್ನು ತಿಳಿಸಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ಕುರಿತು ಚರ್ಚಿಸಿದರು.



**ಬೆಂಗಳೂರು** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಯನ್ನು ಫೆಬ್ರವರಿ ತಿಂಗಳಲ್ಲಿ ನಡೆಯುವ ಅಧಿವೇಶನದಲ್ಲಿ ಮಾಡಿಕೊಡಲು ಸಹಕಾರಿಗಳ ನಿಬಂಧಕರಾದ ಶ್ರೀಮತಿ ಡಾ. ಎನ್ ಮಂಜುಳ ರವರೊಂದಿಗೆ ಚರ್ಚಿಸಿ ಮನವಿ ಸಲ್ಲಿಸಿದರು.

## ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 70ನೇ ಗಣರಾಜ್ಯೋತ್ಸವ ದಿನಾಚರಣೆ ಆಚರಣೆ

70ನೇ ಗಣರಾಜ್ಯೋತ್ಸವದ ಅಂಗವಾಗಿ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.


ಕೇಂದ್ರ ಕಛೇರಿ


ಕಲಬುರಗಿ ಪ್ರಾಂತೀಯ ಕಛೇರಿ


ಮೈಸೂರು ಪ್ರಾಂತೀಯ ಕಛೇರಿ


ಬೆಳಗಾವಿ ಪ್ರಾಂತೀಯ ಕಛೇರಿ


ಬೀದರ ಜಿಲ್ಲಾ ಸಂಪರ್ಕ ಕಛೇರಿ


ಕೋಲಾರ ಜಿಲ್ಲಾ ಸಂಪರ್ಕ ಕಛೇರಿ

## ದಾವಾ ಪಂಚಾಯ್ತಿ ನ್ಯಾಯಾಲಯ ಎಬಿನ್ ಖಾತೆ ಮತ್ತು ಅಮಲ್ಜಾರಿ ಬ್ಯಾಂಕ್ ಖಾತೆಗಳ ಸಂಖ್ಯೆ

**ಸಹಕಾರಿಗಳ ಗಮನಕ್ಕೆ** : ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯದಲ್ಲಿ ದಾವೆಯನ್ನು ಹೂಡುವ ಸಲುವಾಗಿ ಈ ಹಿಂದೆ ಹೊಂದಿದಂತಹ ಸಿಂಡಿಕೇಟ್ ಬ್ಯಾಂಕ್‌ನ ಉಳಿತಾಯ ಖಾತೆಗಳು ಅಂದರೆ ಎಬಿನ್ ಖಾತೆ ಸಂಖ್ಯೆ 04242010120551 ಮತ್ತು ಅಮಲ್ಜಾರಿ ಶುಲ್ಕ ಪಾವತಿಸುವ ಖಾತೆ ಸಂಖ್ಯೆ 04242010123239 ಬದಲಾವಣೆಗೊಂಡಿದ್ದು ಪ್ರಸ್ತುತ ಚಾಲ್ತಿ ಖಾತೆಯನ್ನು ಹೊಂದಿದ್ದು ತಮ್ಮ ಗಮನಕ್ಕೆ ಈ ಮೂಲಕ ತರಬಯಸುತ್ತಾ ಪ್ರಸ್ತುತ ಚಾಲ್ತಿ ಖಾತೆಯ ವಿವರಗಳು ಈ ಕೆಳಗಿನಂತಿವೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯಲ್ಲಿ ದಾವೆಯನ್ನು ಹೂಡುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., ಎಂಬ ಹೆಸರಿನಲ್ಲಿ ದಾವಾ ಶುಲ್ಕವನ್ನು (ABN fees only) ಮಾತ್ರ ಖಾತೆ ಸಂಖ್ಯೆ: 04241010005443, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ, ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ (441) ನ್ಯಾಯಾಲಯಲ್ಲಿ ಅಮಲ್ಜಾರಿಯನ್ನು ದಾಖಲಿಸುವ ಸೌಹಾರ್ದ ಸಹಕಾರಿಗಳು ಸಿಂಡಿಕೇಟ್ ಬ್ಯಾಂಕ್‌ನಲ್ಲಿ Karnataka state souharda federal co operative ltd., Executive petition Or KSSFCL Executive petition ಎಂಬ ಹೆಸರಿನಲ್ಲಿ ಅಮಲ್ಜಾರಿ ಶುಲ್ಕವನ್ನು (EP fees only) ಮಾತ್ರ ಖಾತೆ ಸಂಖ್ಯೆ: 04241010005462, Ifsc code : SYNB0000424 ಶಾಖೆ ಮಲ್ಲೇಶ್ವರಂನಲ್ಲಿ ಹೊಂದಿದ್ದು ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸಲು ಕೋರಿದೆ.

ದಾವಾ ಶುಲ್ಕವನ್ನು ಪಾವತಿಸಿದಂತಹ ಸೌಹಾರ್ದ ಸಹಕಾರಿಗಳು ಪ್ರಾಂತೀಯವಾರು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ನೀಡಿ ಸಹಕರಿಸಲು ಕೋರಿದೆ.

**ಬೆಳಗಾವಿ ಪ್ರಾಂತ :** ರಾಚಯ್ಯ ಹಿರೇಮಠ, ದೂ.ಸಂ. : 8884460278

**ಕಲಬುರಗಿ ಪ್ರಾಂತ :** ಶ್ರೀಧರ, ದೂ.ಸಂ. : 9513566601

**ಬೆಂಗಳೂರು ಪ್ರಾಂತ :** ಶ್ರೀಧರ ಮಟೋಳ್ಳಿ, ದೂ.ಸಂ. : 8548049598

**ಮೈಸೂರು ಪ್ರಾಂತ :** ಬಲರಾಮ್ ಎನ್, ದೂ.ಸಂ. : 8884460273

ಅಮಲ್ಜಾರಿ ಶುಲ್ಕವನ್ನು ಪಾವತಿಸಿದಂತಹ ಸೌಹಾರ್ದ ಸಹಕಾರಿಗಳು ಪ್ರಾಂತೀಯವಾರು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಮಾಹಿತಿಯನ್ನು ನೀಡಿ ಸಹಕರಿಸಲು ಕೋರಿದೆ

**ಬೆಳಗಾವಿ ಮತ್ತು ಕಲಬುರಗಿ ಪ್ರಾಂತಗಳು :** ವಿನೋದ ಹೆಚ್.ಎ. 8884466730

**ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು :** ದರ್ಶನ್ ಕೆ 8884460265

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಆಚರಣೆ



ಚಿತ್ರದುರ್ಗ : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್‌ನಲ್ಲಿ 70ನೇ ಗಣರಾಜ್ಯೋತ್ಸವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಸಿಬ್ಬಂದಿಗಳಿಗೆ 5 ಲಕ್ಷ ರೂ ಗಳ ವಿಮಾ ಪಾಲಿಸಿಯ ಹೆಲ್ತ್ ಕಾರ್ಡ್‌ಗಳನ್ನು ಬ್ಯಾಂಕಿನ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್ ಆರ್ ಲಕ್ಷ್ಮೀಕಾಂತ ರೆಡ್ಡಿಯವರು ಸಿಬ್ಬಂದಿಗಳಿಗೆ ವಿತರಿಸಿದರು.



ಘಟಪ್ರಭಾ : ಶ್ರೀ ದಾನೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಿಂದ ಗಣರಾಜ್ಯೋತ್ಸವ ದಿನಾಚರಣೆ ಆಚರಣೆ.



ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾದ್ ಸಹಕಾರಿ ನಿ., ಕೊಪ್ಪಳ ಸಹಕಾರಿ ಅಧ್ಯಕ್ಷರಾದ ಶ್ರೀಯುತ ನಿಜಗುಣಪ್ಪ ಎಸ್ ಶೆಟ್ಟರ ರವರು ಧ್ವಜಾರೋಹಣವನ್ನು ನೇರವೆರಿಸಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಅನಿಲಕುಮಾರ ವಿ ನಾಲ್ವಾಡ ಮತ್ತು ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿಗಳು ಮತ್ತು ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.



ಬಾಗಲಕೋಟ : ಶ್ರೀ ಘಟಪ್ರಭಾ ಪತ್ತಿನ ಸೌಹಾರ್ದ ಸಹಕಾರಿ ನಿ., ಮುಧೋಳ 70ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ನೇರವೆರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಸಿಂಧನೂರು : ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಮತ್ತು ದಿನ ನಿತ್ಯ ಠೇವಣಿ ಸಂಗ್ರಹಕಾರರು ಉಪಸ್ಥಿತರಿದ್ದರು.



ಮೋತ್ನಾಳ್ ಪತ್ತಿನ ಸೌಹಾರ್ದ ಸಹಕಾರಿ ನಿ., ಗಣರಾಜ್ಯೋತ್ಸವ ಆಚರಣೆಯಲ್ಲಿ ಅಧ್ಯಕ್ಷರಾದ ಶ್ರೀ ಮೂರ್ತಯ್ಯ ಶೆಟ್ಟಿ ಕೆ., ಮುಖ್ಯ ಕಾರ್ಯನಿರ್ವಾಹಕರು ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಸಂಗ್ರಹಕಾರರು ಉಪಸ್ಥಿತರಿದ್ದರು.



ಯರಗಟ್ಟಿ : ಶ್ರೀ ಕಡಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿಯಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಆಚರಣೆ.



ಬೈಲಹೊಂಗಲ : ಕಿತ್ತೂರ ರಾಣಿ ಚನ್ನಮ್ಮ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ವಿಜೃಂಭಣೆಯಿಂದ 70 ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕರು ಹಾಗೂ ಅಧ್ಯಕ್ಷರು ಹಾಗೂ ಕೆ.ಎಲ್.ಇ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಎಸ್. ಸಾಧುನವರ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮತ್ತು ದೇಶವನ್ನು ಒಟ್ಟುಗೂಡಿಸಿದ ಸರದಾರ ವಲ್ಲಭಭಾಯಿ ಪಟೇಲರನ್ನು ಸ್ಮರಿಸಿದರು, ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.



ಬೆಲ್ಲದ ಬಾಗೇವಾಡಿ : ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ, ಬೆಲ್ಲದ ಬಾಗೇವಾಡಿಯ ಪ್ರಧಾನ ಕಚೇರಿಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಸತ್ತೆಪ್ಪಾ ಮುನ್ನೋಳಿ ಇವರು ಧ್ವಜಾರೋಹಣ ಮಾಡುವದರ ಮೂಲಕ 70ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣ ಸಮಯದಲ್ಲಿ ಬ್ಯಾಂಕಿನ ಎಲ್ಲ ಆಡಳಿತ ಮಂಡಳಿ ಸದಸ್ಯರು, ಆಡಳಿತ ಸಲಹೆಗಾರರು, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯ ವಿದ್ಯಾರ್ಥಿನಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ಘಟಪ್ರಭಾ : ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಧುಪದಾಳ, ಘಟಪ್ರಭಾ 70ನೇ ಗಣರಾಜ್ಯೋತ್ಸವದ ಅಂಗವಾಗಿ ಆಡಳಿತ ಮಂಡಳಿಯವರಿಂದ ಧ್ವಜಾರೋಹಣ ನೇರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಚಿಕ್ಕೋಡಿ : ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿಯಲ್ಲಿ 70ನೇ ಗಣರಾಜ್ಯೋತ್ಸವ ಸಮಾರಂಭವು ದಿನಾಂಕ 26.01.2019 ರಂದು ಮುಂಜಾನೆ 8.00ಗಂಟೆಗೆ ಸಹಕಾರಿಯ ನಿರ್ದೇಶಕರಾದ ಶ್ರೀ ಹೇಮಂತ ಹಂಪಣ್ಣವರ ಇವರು ಪೂಜಾ ಕಾರ್ಯಕ್ರಮ ನೇರವೆರಿಸಿ, ಧ್ವಜಾರೋಹಣವನ್ನು ನೇರವೆರಿಸಿದರು. ಈ ಸಂದರ್ಭದಲ್ಲಿ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಗದೀಶ ಎಮ್ ಕವಟಗಿಮಠ ಹಾಗೂ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಬಿ ಮೂಗೇರಿ, ನಿರ್ದೇಶಕರಾದ ಸಂಜಯ ಗಿಡವೀರ, ಯಲ್ರೀಸ್ವಾಮಿಗೌಡಾ ಇಟಗೌನಿ, ರಮೇಶ ಕುಡತರಕರ, ಪ್ರವೀಣ ಕಾಂಬಳೆ, ಶ್ರೀಧರ ದಿಕ್ಷಿತ, ಶಿವಜಾತ ಮಿರ್ಜೆ, ರಾಜಕುಮಾರ ಹಿರೇಮಠ, ಮನೋಜಕುಮಾರ ಸಮ್ಮತಶೆಟ್ಟಿ, ಸಹಕಾರಿ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಮ್. ಬಿ. ಬಡಿಗೇರ, ಸಿಬ್ಬಂದಿ ವರ್ಗದವರು ಹಾಗೂ ಶಾಲಾ ಬಾಲಕರ ಉಪಸ್ಥಿತಿಯಲ್ಲಿ ವಿಜ್ರಂಭಣೆಯಿಂದ ಆಚರಿಸಲಾಯಿತು.





**ಕೊಪ್ಪಳ :** ದಿನಾಂಕ : 11.01.2019 ರಂದು ಗಂಗಾವತಿ ನಗರದ ಶ್ರೀ ಚನ್ನಬಸವಸ್ವಾಮಿ ಕಲ್ಯಾಣ ಮಂಟಪದಲ್ಲಿ ಕೊಪ್ಪಳ ಜಿಲ್ಲಾ ಸಹಕಾರ ಭಾರತಿ ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರ ಸಂಯುಕ್ತ ಆಶ್ರಯದಲ್ಲಿ ದಿ॥ ಲಕ್ಷ್ಮಣರಾವ್ ಇನಾಂದಾರ್ ಜೀ ಸ್ಥಾಪಿಸಿದಂತಹ ಸಹಕಾರ ಭಾರತಿ ಸಂಸ್ಥಾಪನಾ ದಿನಾಚರಣೆ ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉದ್ಘಾಟನಾ ಕಾರ್ಯಕ್ರಮ ಮತ್ತು ನೂತನವಾಗಿ ಸಹಕಾರ ಭಾರತೀಯ ರಾಷ್ಟ್ರೀಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಶ್ರೀ ರಮೇಶ ವೈದ್ಯ ಜೀ ರವರಿಗೆ ಕೊಪ್ಪಳ ಜಿಲ್ಲಾ ನಿರ್ದೇಶಕರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ, ರಾಯಚೂರು ಜಿಲ್ಲೆಯ ನಿರ್ದೇಶಕರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಹಾಗೂ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಶೇಖರ ಬಿ. ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ. ಪತ್ತಾರ್ ಮತ್ತು ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್. ಹೆಚ್ ಹಾಗೂ ಕೊಪ್ಪಳ ಜಿಲ್ಲೆಯ ಸಂಸದರು, ಶಾಸಕರು, ಉಪ ನಿಬಂಧಕರಾದ ಶ್ರೀ ಎಂ.ಪಿ. ಶೆಲ್ಲಿಕೇರಿ ಮತ್ತು ಎಲ್ಲಾ ಸಹಕಾರಿಗಳ ಸಮ್ಮುಖದಲ್ಲಿ ಗೌರವ ಸಮರ್ಪಣೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

# ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಪ್ರಾಂತೀಯ ಕಛೇರಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಿಂದ ನುಡಿನಮನ


ಕೇಂದ್ರ ಕಛೇರಿ


ಬೆಳಗಾವಿ ಪ್ರಾಂತೀಯ ಕಛೇರಿ


ಮೈಸೂರು ಪ್ರಾಂತೀಯ ಕಛೇರಿ


ಕಲಬುರಗಿ ಪ್ರಾಂತೀಯ ಕಛೇರಿ


ಬೆಂಗಳೂರು ಪ್ರಾಂತೀಯ ಕಛೇರಿ


ರಾಯಚೂರು ಜಿಲ್ಲಾ ಸಂಪರ್ಕ ಕಛೇರಿ


ಬೀದರ ಜಿಲ್ಲಾ ಸಂಪರ್ಕ ಕಛೇರಿ


ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿ

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2018-19ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ವಿವರಗಳು

... ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ

| ಕ್ರ. ಸಂ. | ಜಿಲ್ಲೆ/ತಾಲ್ಲೂಕು | ಸ್ಥಳ | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಮುಖ್ಯಕಾರ್ಯ ನಿರ್ವಾಹಕರ ಸಂಖ್ಯೆ ಹಾಗೂ ಇತರರು |
|---|---|---|---|---|
| 1 | ತುಮಕೂರು | ತುಮಕೂರು | 12 | 14 |
| 2 | ಶಿವಮೊಗ್ಗ | ತೀರ್ಥಹಳ್ಳಿ | 24 | 24 |
| 3 | ಶಿವಮೊಗ್ಗ | ಸೊರಬ | 24 | 28 |
| 4 | ಶಿವಮೊಗ್ಗ | ಶಿವಮೊಗ್ಗ | 29 | 38 |
| 5 | ಚಿತ್ರದುರ್ಗ | ಚಳ್ಳಕೆರೆ | 20 | 20 |
| 6 | ಚಿತ್ರದುರ್ಗ | ಮರ್ಚೆಂಟ್ ಸೌಹಾರ್ದ ಸಹಕಾರ ಬ್ಯಾಂಕ್, ಚಿತ್ರದುರ್ಗ | 12 | 12 |
| 7 | ದಾವಣಗೆರೆ | ಅಪೂರ್ವ ಹೋಟೆಲ್, ದಾವಣಗೆರೆ | 38 | 38 |
| 8 | ದಾವಣಗೆರೆ | ನವಜ್ಯೋತಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಸಭಾಂಗಣ, ಹರಪ್ಪನಹಳ್ಳಿ | 17 | 23 |
| 9 | ಬೀದರ | ಶಾರದಾ ರೋಡ್ ಸೆಟ್. ಪ್ರತಾಪ ನಗರ, ಬೀದರ | 65 | 95 |
| 10 | ಬಳ್ಳಾರಿ | ಹೋಟೆಲ್ ಮಲ್ಲಿಗೆ, ಹೊಸಪೇಟೆ. | 90 | 110 |
| 11 | ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹೋಟಲ್ ಶುಭಶ್ರೀ, ವಿಜಯಪುರ | 63 | 70 |
| 12 | ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹೋಟಲ್ ಶುಭಶ್ರೀ, ವಿಜಯಪುರ | 60 | 75 |
| 13 | ವಿಜಯಪುರ ಜಿಲ್ಲೆಯ ಸಿಂದಗಿ, ಇಂಡಿ, ಬ.ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹೋಟಲ್ ಶುಭಶ್ರೀ, ವಿಜಯಪುರ | 84 | 108 |
| 14 | ಬೆಳಗಾವಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹೋಟಲ್ ಮಧುಬನ್, ಬೆಳಗಾವಿ | 46 | 52 |
| 15 | ಬೆಳಗಾವಿ ಹಾಗೂ ಖಾನಾಪೂ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹೋಟಲ್ ಮಧುಬನ್, ಬೆಳಗಾವಿ | 34 | 40 |
| 16 | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಶ್ರೀ ಸಾಯಿ ಭವನ, ಸಂಕೇಶ್ವರ | 108 | 124 |
| 17 | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಹುಕ್ಕೇರಿ | 62 | 79 |
| 18 | ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಗೋಕಾಕ | 110 | 140 |
| 19 | ಬೆಳಗಾವಿ ಜಿಲ್ಲೆಯ ಅಥಣ, ಚಿಕ್ಕೋಡಿ ಹಾಗೂ ರಾಯಾಭಾಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಸಿ.ಎಲ್ ಇ. ಪಿ.ಯು. ಕಾಲೇಜ ಸಭಾಂಗಣ, ಚಿಕ್ಕೋಡಿ. | 128 | 143 |
| 20 | ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಸವದತ್ತಿ, ಚನ್ನಮ್ಮನ ಕಿತ್ತೂರು ಹಾಗೂ ರಾಮದುರ್ಗ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು | ಗಣಾಚಾರಿ ಕಾಲೇಜ ಸಭಾಭವನ, ಬೈಲಹೊಂಗಲ | 54 | 63 |

2018-19ನೇ ಸಾಲಿನ ಒಟ್ಟು 47 ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳು, 2443 ಭಾಗವಹಿಸಿದ್ದ ಸೌಹಾರ್ದ ಸಹಕಾರಿಗಳ ಸಂಖ್ಯೆ ಹಾಗೂ 2759 ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರರು ಭಾಗವಹಿಸಿದ್ದರು.

# ಪ್ರಬಂಧ ಸ್ವರ್ಧೆ ವಿಜೇತರು

ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 65ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ವಜರೋಹಣವನ್ನು ನೇರವೇರಿಸಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ರಾಷ್ಟ್ರದಾದ್ಯಂತ ಆಚರಿಸುತ್ತಿರುವ ಅಖಿಲ ಭಾರತ ಸಹಕಾರ ಸಪ್ತಾಹ ಸಹಕಾರಿಗಳಿಗೆ ಒಂದು ಹೊಸ ಚೈತನ್ಯವನ್ನು ಮೂಡಿಸುವಂತಹ ಕಾರ್ಯಕ್ರಮವಾಗಿದೆ. ಇದೇ ಸಂದರ್ಭದಲ್ಲಿ ಎಲ್ಲಾ ಸಿಬ್ಬಂದಿವರ್ಗದವರಿಗೆ ಈ ಏಳು ದಿನಗಳಿಗೆ ಮೀಸಲಾಗಿರುವ ಏಳು ವಿಷಯಗಳ ಬಗ್ಗೆ ಪ್ರಬಂಧ ಬರೆಯಲು ಸೂಚಿಸಿದರು. ಉತ್ತಮ ಪ್ರಬಂಧಗಳಿಗೆ ಬಹುಮಾನವಾಗಿ 3000/–, 2000/–, 1000/– ಗಳ ಮೊದಲನೇ, ಎರಡನೇ, ಮೂರನೇಯ ನಗದು ಬಹುಮಾನವನ್ನು ಸಂಯುಕ್ತ ಸಹಕಾರಿ ವತಿಯಿಂದ ಕೊಡಲಾಗುವುದೆಂದು ತಿಳಿಸಿದ್ದರು. ದಿನಾಂಕ 26.01.2019ರಲ್ಲಿ ನಡೆದ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಪ್ರಬಂದ ಸ್ವರ್ಧೆಯ ವಿಜೇತರಿಗೆ ಬಹುಮಾನವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ ಪಾಟೀಲ ರವರು ವಿತರಿಸಿದರು.

**ಪ್ರಥಮ ಬಹುಮಾನ**



ಶ್ರೀ ಪಾಲರಾಜ ಎ.

**ದ್ವಿತೀಯ ಬಹುಮಾನ**



ಶ್ರೀಮತಿ ಸವಿತ ಎನ್.ಇ.

**ತೃತೀಯ ಬಹುಮಾನ**



ಶ್ರೀ ವಿಜಯ್ ಬಿ.ಎಸ್.

**ಸಮಾಧಾನಕರ ಬಹುಮಾನ**



ಶ್ರೀ ಆನಂದರಾಯ

**ಸಮಾಧಾನಕರ ಬಹುಮಾನ**



ಕುಮಾರಿ ರೇಣುಕ ಎಂ.ವಿ.

## ಪ್ರವರ್ತಕರ ಸಭೆಗಳು



ಬೆಂಗಳೂರು : ಕಾರ್ಡ್ ರಸ್ತೆ ನಿವಾಸಿಗಳ ಸಂಘದ ವತಿಯಿಂದ ವಿಜಯನಗರದಲ್ಲಿ ಹೊಸ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಾಯ್.ಟಿ. ಪಾಟೀಲ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭಾಗವಹಿಸಿ ಸೌಹಾರ್ದ ಸಹಕಾರಿ ಕಾಯ್ದೆ ಬಗ್ಗೆ ಮಾಹಿತಿ ನೀಡಿದರು.



ರಾಮನಗರ : ಎಲ್ಲೋ & ರೆಡ್ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಅಮಿತ್ ರವರ ಉಪಸ್ಥಿತಿಯಲ್ಲಿ ಪ್ರವರ್ತಕರ ಸಭೆಯು ನಡೆಯಿತು.



ಚಾಮರಾಜನಗರ : ಉದ್ದೇಶಿತ ಸೀಟಿ ನರಸಿಂಹ ಸೌಹಾರ್ದ ಸಹಕಾರಿ ನಿಯಮಿತ ಮೈಸೂರು ಹಾಗೂ ಶ್ರೀ ಮುರುಘರಾಜೇಂದ್ರ ಮಠ, ಮರಿಯಾಲ ಚಾಮರಾಜನಗರ ಜಿಲ್ಲೆಯಲ್ಲಿ ಪ್ರವರ್ತಕರ ಸಭೆಯನ್ನು ನಡೆಸಲಾಯಿತು.



ಉದ್ದೇಶಿತ ರೇಣುಕಾಂಬಾ ಸೌಹಾರ್ದ ಸಹಕಾರಿ ನಿಯಮಿತ ಮಂಡ್ಯ ಸದರಿ ಸಹಕಾರಿಯನ್ನು ಪ್ರಾರಂಭಿಸಲು ಪ್ರವರ್ತಕರ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ 30 ಜನ ಪ್ರವರ್ತಕರು ಉಪಸ್ಥಿತರಿದ್ದರು.



ಮಾಗಡಿ: ಉದ್ದೇಶಿತ ಶ್ರೀ ಕಂಠೇಶ್ವರ ಸೌಹಾರ್ದ ಸಹಕಾರಿಯ ಪ್ರವರ್ತಕರ ಸಭೆ

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರಗಳು ಸೌಹಾರ್ದ ಸಹಕಾರಿಗಳ ಭೇಟಿ



ಚಾಮರಾಜನಗರ : ಚಾಮರಾಜನಗರ ವಿರಕ್ತ ಮಠದ
ಅಧ್ಯಕ್ಷರಾದ ಚೆನ್ನಬಸವ ಸ್ವಾಮೀಜಿಯವರ ಭೇಟಿ



ಚಾಮರಾಜನಗರ : ಚಾಮರಾಜನಗರದ
ಸಿದ್ದಮಲ್ಲೇಶ್ವರ ಮಠಕ್ಕೆ ಭೇಟಿ



ಚಾಮರಾಜನಗರ : ಚಾಮರಾಜನಗರಕ್ಕೆ ಭೇಟಿ ಸಂದರ್ಭದಲ್ಲಿ
ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾನ್ಯ ಅಧ್ಯಕ್ಷರು.



ಚಾಮರಾಜನಗರ : ಚಾಮರಾಜನಗರದಲ್ಲಿ ಮಾನ್ಯ
ಅಧ್ಯಕ್ಷರು ಪ್ರವರ್ತಕರ ಸಭೆಯನ್ನು ಉದ್ಘಾಟಿಸಿದರು.



ಚಾಮರಾಜನಗರ : ರೇನಾ
ಸೌಹಾರ್ದ ಸಹಕಾರಿಗೆ ಭೇಟಿ.



ಚಾಮರಾಜನಗರ : ಚಾಮರಾಜನಗರದ
ಶ್ರೀ ಮುರಘ ರಾಜೇಂದ್ರ ಮಠ, ಮರಿಯಾಲ ಭೇಟಿ.



ಚಾಮರಾಜನಗರ :
ಸಂಗಮ ಸೌಹಾರ್ದ ಸಹಕಾರಿಗೆ ಭೇಟಿ.



ಮೈಸೂರು : ದಿನಾಂಕ : 31.01.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಹಾಗೂ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ಉದ್ದೇಶಿತ ಕಲ್ಯಾಣಿ ಮಹಿಳಾ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಗೆ ಭೇಟಿ ನೀಡಲಾಯಿತು.




ಮೈಸೂರು: ದಿನಾಂಕ : 31.01.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಹಾಗೂ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ಹೆಬ್ಬಾಳು ಕೈಗಾರಿಕಾ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಗೆ ಭೇಟಿ ನೀಡಲಾಯಿತು.



ಮೈಸೂರು: ದಿನಾಂಕ : 31.01.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಹಾಗೂ ಮಾನ್ಯ ನಿರ್ದೇಶಕರಾದ ಹೆಚ್ ವಿ ರಾಜೀವ್‌ರವರು ಶಾರದಾ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಗೆ ಭೇಟಿ ನೀಡಲಾಯಿತು.



ಚಾಮರಾಜನಗರ : ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿಗೆ ಭೇಟಿ.



ಚಾಮರಾಜನಗರ : ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಸಹಕಾರಿಗೆ ಭೇಟಿ



ಮೈಸೂರು : ದಿನಾಂಕ : 31.01.2019ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಹಾಗೂ ಮಾನ್ಯ ನಿರ್ದೇಶಕರಾದ ಹೆಚ್ ವಿ ರಾಜೀವ್‌ರವರು ವಜ್ರಗಿರಿ ಸೌಹಾರ್ದ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಲಿ., ಮೈಸೂರು ಸಹಕಾರಿಗೆ ಭೇಟಿ ನೀಡಲಾಯಿತು. ಸಹಕಾರಿಯ ನೂತನ ನಿರ್ದೇಶಕರುಗಳಿಗೆ ಚುನಾವಣಾ ಪ್ರಮಾಣ ಪತ್ರವನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ವಿತರಿಸಿದರು.

## NAFCUB ಆಯ್ಕೆ



ನವದೆಹಲಿ : ರಾಷ್ಟ್ರೀಯ ಪಟ್ಟಣ ಬ್ಯಾಂಕುಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ದಿನಾಂಕ 03.02.2019 ನಡೆದ ಚುನಾವಣೆಯಲ್ಲಿ ಓಂಕಅಗ ಜ್ಯೋತಿಂದ್ರ ಭಾಯಿ ಮೆಹತಾ ಅಧ್ಯಕ್ಷರಾಗಿ ಪುನರ್‌ಆಯ್ಕೆ, ಉಪಾಧ್ಯಕ್ಷರುಗಳಾಗಿ ಶ್ರೀ ಕೆ.ಕೆ ಶರ್ಮಾ ಹಾಗೂ ವಿಧ್ಯಾಧರ ಅನಸ್ಕರ ಮತ್ತು ನಿರ್ದೇಶಕರುಗಳಾಗಿ ಕರ್ನಾಟಕದ ಹಿರಿಯ ಸಹಕಾರಿ ಶ್ರೀ ಹೆಚ್. ಕೆ ಪಾಟೀಲ, ರಿಸರ್ವ್ ಬ್ಯಾಂಕ್ ನಿರ್ದೇಶಕ ಶ್ರೀ ಸತೀಶ ಮರಾಠೆ, ಶ್ರೀ ಉದಯ್ ಜ್ಯೋಶಿ, ಮುಂತಾದವರು ಆಯ್ಕೆಯಾಗಿದ್ದಾರೆ.

# ದಿ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ತರಬೇತಿ ಶಿಬಿರ

**ಬೆಂಗಳೂರು** : ದಿನಾಂಕ : 12/01/2019 ಮತ್ತು 13/01/2019 ರಂದು ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೊ–ಆಪರೇಟಿವ್ ಲಿಮಿಟೆಡ್. ಸದರಿ ಸಹಕಾರಿಯ ಆಡಳಿತದಲ್ಲಿ ತೊಡಗಿರುವ ಆಡಳಿತ ಮಂಡಳಿ ಸದಸ್ಯರಿಗೆ, ಶಾಖಾ ಸಮಿತಿ ಸದಸ್ಯರಿಗೆ, ಕಾನೂನು ಸಲಹೆಗಾರರಿಗೆ ಹಾಗೂ ವ್ಯವಸ್ಥಾಪಕರಿಗೆ ಎರಡು ದಿನಗಳ ತರಬೇತಿ ಶಿಬಿರವನ್ನು ಬೆಂಗಳೂರಿನ ಆಡಳಿತ ಕಛೇರಿ ಕಟ್ಟಡ ಪಾವಗಡ ಸೌಹಾರ್ದ ಸೌಧದಲ್ಲಿ ನೆರವೇರಿಸಲಾಯಿತು.

ತರಬೇತಿ ಶಿಬಿರದ ಉದ್ಘಾಟಕರಾಗಿ ಶ್ರೀ ಶರಣಗೌಡ ಜಿ ಪಾಟೀಲ್ ರವರು, ವ್ಯವಸ್ಥಾಪಕ ನಿರ್ದೇಶಕರು, ಸಂಯುಕ್ತ ಸಹಕಾರಿ, ವೈ. ಟಿ ಪಾಟೀಲ್, ನಿರ್ದೇಶಕರು, ಸಂಯುಕ್ತ ಸಹಕಾರಿ, ಶ್ರೀ ನಾರಾಯಣ ಹೆಗಡೆರವರು, ಬೆಂಗಳೂರು ಪ್ರಾಂತೀಯ ಅಧಿಕಾರಿ, ಸಂಯುಕ್ತ ಸಹಕಾರಿ, ಬೆಂಗಳೂರು ಉಪಸ್ಥಿತರಿದ್ದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಪ್ರಸಾದ ರೆಡ್ಡಿರವರು, ಉಪ ನಿಬಂಧಕರು, ನ್ಯಾಯಾದೀಶರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಹಾಗೂ ಮದುಕರ್ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಹೆಚ್ ನಾಗರಾಜಯ್ಯ, ನಿವೃತ ಅಪರ ನಿಬಂಧಕರು ಇವರುಗಳು ಭಾಗವಹಿಸಿದ್ದರು.

ಸಮಾರೋಪದ ನುಡಿಗಳನ್ನು ಬೆಂಗಳೂರು ಪ್ರಾಂತದ, ಜಂಟಿ ನಿಬಂಧಕರಾದ ಶ್ರೀ ನರಸಿಂಹ ಮೂರ್ತಿರವರು ನೆರವೇರಿಸಿದರು.



ಶ್ರೀ ನರಸಿಂಹ ಮೂರ್ತಿರವರು, ಜಂಟಿ ನಿಬಂಧಕರು, ಬೆಂಗಳೂರು. ಪ್ರಾಂತ ಇವರಿಗೆ ಸನ್ಮಾನ.



ಶ್ರೀ ಪ್ರಸಾದ ರೆಡ್ಡಿರವರು, ಉಪ ನಿಬಂಧಕರು, ನ್ಯಾಯಾಧೀಶರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇವರಿಗೆ ಸನ್ಮಾನ.



ಚಾಮರಾಜನಗರ : ಚಾಮರಾಜನಗರ ಉದ್ದೇಶಿತ ಸೌಹಾರ್ದ ಸಹಕಾರಿ ಒಕ್ಕೂಟದ ವತಿಯಿಂದ ನಡೆದ ಉಚಿತ ಆರೋಗ್ಯ ಶಿಬಿರವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಉದ್ಘಾಟಿಸಿದರು.



**ಚಿತ್ರದುರ್ಗ** : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ನೂತನ ಐ.ಯು.ಡಿ.ಪಿ. ಶಾಖೆಯ ಕಟ್ಟಡದ ಭೂಮಿ ಪೂಜೆಯನ್ನು ನಗರದ ಐ.ಯು.ಡಿ.ಪಿ ಲೇಔಟ್‌ನಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಲಕ್ಷ್ಮೀಕಾಂತ ರೆಡ್ಡಿ ರವರು ನೇರವೇರಿಸಿದರು.




**ಮೈಸೂರು** : ಪ್ರಗತಿ ಪರಿವರ್ತನ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 24.01.2019ರಂದು ಗುರುವಾರ ಸಂಜೆ 06.00 ಗಂಟೆಗೆ ಜಯನಿವಾಸ, ನಂ.1082, ನರಸರಾಜ ರಸ್ತೆ, ಚಾಮರಾಜಪುರಂ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಸದರಿ ಸಹಕಾರಿಯ ನೂತನ ಕಛೇರಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹೆಚ್.ವಿ. ರಾಜೀವ್‌ರವರು, ಪ್ರಾಂತೀಯ ಅಧಿಕಾರಿಯಾದ ಶ್ರೀ ವೈ. ಕುಮಾರ್‌ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಮತ್ತು ಚಂದ್ರಶೇಖರಯ್ಯರವರು ಉಪಸ್ಥಿತರಿದ್ದರು.

# ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟದ ಕಾರ್ಯಕ್ರಮ

**ಶಿವಮೊಗ್ಗ :** ಶಿವಮೊಗ್ಗ ಜಿಲ್ಲೆಯ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟ, ನಿಯಮಿತ ವತಿಯಿಂದ ಸಹಕಾರಿಗಳಿಗೆ ಜಿ.ಎಸ್.ಟಿ., ಆದಾಯ ತೆರಿಗೆ ವಿಷಯ, ಹಣಕಾಸು ನಿರ್ವಹಣೆ & ಲಾಭದಾಯಕತೆ ಹಾಗೂ ಬಂಡವಾಳೇತರ ವಿಷಯದ ಕುರಿತು ತರಬೇತಿ ಶಿಬಿರವನ್ನು ದಿನಾಂಕ : 02-01-2019 ರಂದು 'ನವ್ಯಶ್ರೀ ಸಭಾಂಗಣ' ಶಿವಮೊಗ್ಗ ಇಲ್ಲಿ ಜರುಗಿತು.

ಜಿ.ಎಸ್.ಟಿ., ಆದಾಯ ತೆರಿಗೆ ವಿಷಯದ ಕುರಿತು ಶ್ರೀ ಬಿ.ವಿ. ರವೀಂದ್ರನಾಥ್, ಲೆಕ್ಕಪರಿಶೋಧಕರು ಮತ್ತು ಹಣಕಾಸು ನಿರ್ವಹಣೆ & ಲಾಭದಾಯಕತೆ ಹಾಗೂ ಬಂಡವಾಳೇತರ ವಿಷಯದ ಕುರಿತು ಶ್ರೀ ಮಹಾಬಲಗಿರಿಯವರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಸಹಕಾರಿಗಳಿಗೆ ತರಬೇತಿಯನ್ನು ನೀಡಿದರು.

ಈ ತರಬೇತಿ ಶಿಬಿರದಲ್ಲಿ ಸುಮಾರು 70 ಮಂದಿ ಸಹಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಪ್ರಸನ್ನಕುಮಾರ್, ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಜ್ಞಾನೇಶ್ವರ್ ಮತ್ತು ನಿರ್ದೇಶಕರುಗಳು ಹಾಜರಿದ್ದರು. ಕಾರ್ಯಕ್ರಮವನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ರವಿಕುಮಾರ್‌ರವರು ನಿರೂಪಿಸಿದರು. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಜರಿದ್ದರು.

ಉಚಿತ ನೇತ್ರ ತಪಾಸಣಾ ಮತ್ತು ಚಿಕಿತ್ಸಾ ಶಿಬಿರವು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟ, ನಿಯಮಿತ ಶಿವಮೊಗ್ಗ ಇವರ ನೇತೃತ್ವದಲ್ಲಿ ಶಂಕರ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ ಹಾಗೂ ಇತರೆ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ : 06-01-2019ರ ಭಾನುವಾರದಂದು ಸರ್ಕಾರಿ ಪ್ರೌಢಶಾಲೆ, ಪಿಳ್ಳಂಗಿರಿಯಲ್ಲಿ ಜರುಗಿತು. ಈ ಶಿಬಿರದಲ್ಲಿ ಪಿಳ್ಳಂಗಿರಿ ಗ್ರಾಮಪಂಚಾಯಿತಿಯ ಸುತ್ತಮುತ್ತಲಿನ ಗ್ರಾಮದ 250-300 ಜನರು ಭಾಗವಹಿಸಿ, ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು. ಇದರಲ್ಲಿ 70 ಜನರನ್ನು ಉಚಿತವಾಗಿ ನೇತ್ರ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು.

ಈ ಶಿಬಿರದಲ್ಲಿ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟ, ನಿಯಮಿತ., ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಬಿ.ಎಸ್. ಅಶ್ವತ್ಥರವರು, ಉಪಾಧ್ಯಕ್ಷರಾದ ಮತ್ತು ಶಿವಮೊಗ್ಗ ಮಹಾನಗರಪಾಲಿಕೆಯ ಸದಸ್ಯರಾದ ಶ್ರೀ ಜ್ಞಾನೇಶ್ವರ್‌ರವರು, ನಿರ್ದೇಶಕರಾದ ಶ್ರೀ ಸುರೇಶ್, ಶಂಕರ ಕಣ್ಣಿನ ಆಸ್ಪತ್ರೆಯ ಸಮನ್ವಯ ಅಧಿಕಾರಿಯಾದ ಶ್ರೀ ವೆಂಕಟೇಶ್ ಮತ್ತು ನೇತ್ರವೈದ್ಯರು, ಇತರೆ ಸೌಹಾರ್ದ ಸಹಕಾರಿಯ ಅಧ್ಯಕ್ಷರುಗಳು, ಸಿಬ್ಬಂದಿಗಳು, ಸೌಹಾರ್ದ ಸಂಯೋಜಕರಾದ ಶಶಿಕುಮಾರ್. ಎಸ್. ರವರು ಭಾಗವಹಿಸಿದ್ದರು.



## ಶಾಖೆ ಉದ್ಘಾಟನೆ

ಉತ್ತರ ಕನ್ನಡ: ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ, ಹೊನ್ನಾವರ ಇದರ 8ನೇ ಶಾಖೆಯು ಹೊನ್ನಾವರ ತಾಲೂಕಿನ ಹೆರಂಗಡಿ ಗ್ರಾಮದ ಅಳ್ಳಂಕಿಯಲ್ಲಿ ದಿನಾಂಕ : 30.11.2018ರಂದು ಲಕ್ಷ್ಮಿ ಪೂಜೆಯೊಂದಿಗೆ ಪ್ರಾರಂಭವಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ಜಿ. ಶಂಕರರವರು ಮಾತನಾಡಿ ಜಿಲ್ಲೆಯಾದ್ಯಂತ ನಮ್ಮ 7 ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು ಇದಿಗ 8ನೇ ಶಾಖೆಯಾಗಿ ಅಳ್ಳಂಕಿ, ಹೆರಂಗಡಿ ಗ್ರಾಮದಲ್ಲಿ ಇಂದಿನಿಂದ ಕಾರ್ಯಾರಂಭವಾಗಿದೆ. ಸದಸ್ಯ ಗ್ರಾಹಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಸ್ಥೆಯು ಉತ್ತಮ ಸೇವೆಯನ್ನು ಜಿಲ್ಲಾದ್ಯಂತ ನೀಡುವದರೊಂದಿಗೆ ಸಾರ್ವಜನಿಕ ಪ್ರಶಂಸೆಯನ್ನು ಪಡೆದಿದೆಯೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ವಿ.ಎಸ್. ಕಿಮಾನಿಕರ್, ನಿರ್ದೇಶಕರಾದ ಜಿ.ಎಸ್.ಭಟ್, ಜಿ.ಆರ್.ಹೆಗಡೆ, ಎಸ್.ಜಿ.ಭಟ್, ಪಾತ್ರೋನ್ ಫರ್ನಾಂಡಿಸ್, ಲಿಫರ್ಡ ರೊಡ್ರಿಗ್ಸ್, ಮಾರುತಿ ಗೌಡ, ಎಲ್. ಜೆ. ಪಟಗಾರ, ಶಿರಸಿ ಶಾಖೆ ಬಿಡಿಸಿಯ ಮಾಂತೇಶ ಹಾದಿಮನಿ, ಜಿ. ಎಲ್. ಗೌಡ, ಮಾಣೇಶ್ವರ ಹರಿಕಾಂತ, ಜನರಲ್ ಮೆನೇಜರ್ ಮಹೇಶ ಶೆಟ್ಟಿ, ಎ.ಜಿ.ಎಂ ಎಡ್ವಿನ್ ರೆಬೆಲ್ಲೊ, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್, ಆಂತರಿಕ ಲೆಕ್ಕಪರಿಶೋಧಕ ಎಸ್.ಎನ್. ಭಟ್ ಹಾಗೂ ಸಹಕಾರಿಯ ಹೊನ್ನಾವರ, ಕುಮಟಾ, ಶಿರಾಲಿ ಶಾಖೆ ಮೆನೇಜರ್ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವಿಶ್ವಮಾನವ ಸ್ವಾಮಿ ವಿವೇಕಾನಂದರ 156ನೇ ಜನ್ಮ ದಿನಾಚರಣೆ ವಿಶೇಷ ಕಾರ್ಯಕ್ರಮ



**ಬೀದರ :** ದಿನಾಂಕ 12.01.2019 ರಂದು ಬೆಳಿಗ್ಗೆ 12 ಗಂಟೆಗೆ ಭಾರತ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ ಸಹಕಾರಿ ಕಛೇರಿಯಲ್ಲಿ ವಿಶ್ವಮಾನವ ಸ್ವಾಮಿ ವಿವೇಕಾನಂದರ 156ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ನಂದಾ ವಿವೇಕಾನಂದ ಅವರು, ಉಪಾಧ್ಯಕ್ಷರಾದ ಶ್ರೀ ಡಾ. ಅಣ್ಣರಾವ ನವದಗೇರಿ ಮತ್ತು ಉಪಸ್ಥಿತರಿದ್ದ ಗಣ್ಯವ್ಯಕ್ತಿಗಳಾದ ಶ್ರೀ ಇರಶೆಟ್ಟಿ ಖ್ಯಾಮ ಡಾ. ಸಂಗಮೇಶ ವಡಗಾಂವೆ, ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ, ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿಯವರು ಸೇರಿ ಸ್ವಾಮಿ ವಿವೇಕಾನಂದರವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾಯಕ್ರಮವನ್ನು ಆಚರಿಸಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಹಿರಿಯ ಸಹಕಾರಿಯವರಾದ ಶ್ರೀ ರಾಜಶೇಖರ ನಾಗಮೂರ್ತಿ ಇವರು ಸ್ವಾಮಿ ವಿವೇಕನಂದರವರ ಜೀವನ ಮತ್ತು ಆದರ್ಶ ಕುರಿತು ಉಪನ್ಯಾಸ ನೀಡಿದರು. ಅದೇ ರೀತಿ ಇನ್ನೋರ್ವ ಸಹಕಾರಿಗಳಾದಂತಹ ಶ್ರೀ ಜಗನ್ನಾಥ ಕರಂಜೆ ಇವರು ಮಾತನಾಡಿ ಸ್ವಾಮಿ ವಿವೇಕಾನಂದವರು ಸನಾತನ ಧರ್ಮದ ಪುನರ್ ಉದ್ಧಾರದ ಸಾಂಸ್ಕೃತಿಕ ಪ್ರತಿರೂಪನಾಗಿದ್ದು ಭಾರತವನ್ನು ವಿಶ್ವದ ದೃಷ್ಟಿಕೋನದಲ್ಲಿ ನಮ್ಮ ಪರಂಪರೆಯ ಅತ್ಯದ್ಭುತ ಪರಿಕಲ್ಪನೆಯ ವೈಜ್ಞಾನಿಕ ದೃಷ್ಟಿ ನೀಡಿದ ಚೇತನ ಪರುಷರಾಗಿದ್ದು ಅವರ ಆದರ್ಶ ಇಡೀ ಮನುಕುಲಕ್ಕೆ ಅವಶ್ಯಕತೆಯಿದೆ ಇಂದು ತಿಳಿಸಿದರು.

ಕಾರ್ಯಕ್ರಮ ಅಧ್ಯಕ್ಷತೆವಹಿಸಿದಂತಹ ನಮ್ಮ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂದಾ ವಿವೇಕಾನಂದಾರವರು ಮಾತನಾಡಿ ವಿವೇಕಾನಂದರ ಜೀವನ ವ್ಯಕ್ತಿಗತ ಜೀವನದ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದು, ಬಡತನದಿಂದ ಈ ಹಂತದ ವರೆಗೆ ತಲುಪಲು ಸ್ವಾಮಿ ವಿವೇಕಾನಂದರಿಂದ ಪ್ರಭಾವಿತರಾಗಿದ್ದುರೆಂದು ನುಡಿದರು. ನಮ್ಮ ತಂದೆಯವರು ಸ್ವಾಮಿ ವಿವೇಕಾನಂದರ ಜೀವನ ಮತ್ತು ಹೋರಾಟದ ಪ್ರೇರಣೆಯಿಂದ ನನ್ನ ನಾಮವನ್ನು ವಿವೇಕಾನಂದಾಯೆಂದು ಇಟ್ಟಿರುತ್ತಾರೆಂದು ಈ ಸಂದರ್ಭದಲ್ಲಿ ತಿಳಿಸಿದರು.

## "ಯುವ ಜನರ ಏಕೈಕ ಆದರ್ಶ ಸ್ವಾಮಿ ವಿವೇಕಾನಂದರು" - ಸ್ವಾಮಿ ಧೀರಾನಂದಜೀ ಮಹಾರಾಜ್




"ಸ್ವಾಮಿ ವಿವೇಕಾನಂದರು ಬಾಲಕನಾಗಿದ್ದಾಗ ತಮ್ಮ ತಾಯಿ ತಂದೆ ಹೇಳಿದ ಬುದ್ಧಿಮಾತುಗಳನ್ನು ತಮ್ಮ ಜೀವನದುದ್ದಕ್ಕೂ ಪರಿಪಾಲಿಸುತ್ತಿದ್ದರು. ಸೋದರಿ ನಿವೇದಿತಾ ಹೇಳಿರುವಂತೆ ವಿವೇಕಾನಂದರ ಪ್ರತಿ ಉಸಿರಿನಲ್ಲಿ ಭಾರತ ಕೇಳಿಬರುತ್ತಿತ್ತು, ಅವರು ಸ್ವಯಂ ಭಾರತವೇ ಆಗಿದ್ದರು. ಸ್ವಾಮಿ ವಿವೇಕಾನಂದರು ಹಗಲು ರಾತ್ರಿ ಭಾರತದ ದೀನ ಜನರ ಏಳಿಗೆಗಾಗಿ ಚಿಂತಿಸುತ್ತಿದ್ದರು. ಅಪಾರವಾದ ದೇಶಾಭಿಮಾನ ಹೊಂದಿದ್ದ ಸ್ವಾಮಿ ವಿವೇಕಾನಂದರು ಅನ್ನಾಹಾರ ತೊರೆದು ಜನರ ಉದ್ಧಾರಕ್ಕಾಗಿ ದೇಶದುದ್ದಕ್ಕೂ ಸಂಚರಿಸಿ ಅತಿಕಡಿಮೆ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದರು. ಈ ಕಾರಣಕ್ಕಾಗಿ ಸ್ವಾಮಿ ವಿವೇಕಾನಂದರು ಯುವ ಜನರ ಏಕೈಕ ಆದರ್ಶವಾದಿಯಾಗಿದ್ದಾರೆ" ಎಂದು ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಧೀರಾನಂಜಿ ಮಹಾರಾಜ್‌ರವರು ಹೇಳಿದರು.

ಅವರು ತುಮಕೂರಿನ ನಿರ್ಭಯ ಯೂತ್ಸ್ ಫೆಡರೇಷನ್ ಸಂಸ್ಥೆಯು ಜಿಲ್ಲಾ ಗ್ರಂಥಾಲಯ ಆವರಣದಲ್ಲಿ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 157ನೇ ಜನ್ಮದಿನೋತ್ಸವ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಪ್ರಯುಕ್ತ ಶೋಭಾಯಾತ್ರೆಯನ್ನು ಉದ್ಘಾಟಿಸಿ ಮಾತನಾಡುತ್ತಾ "ಸ್ವಾಮಿ ವಿವೇಕಾನಂದರು ಅಪಾರ ಬುದ್ಧಿಮತ್ತೆಯನ್ನು ಹೊಂದಿದ್ದರು, ಮಹಾತ್ಮ ಗಾಂಧಿಯವರು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಸಂದೇಶವನ್ನು ಓದಿದ ಮೇಲೆ ನನ್ನ ರಾಷ್ಟ್ರಭಕ್ತಿ ಸಾವಿರಪಟ್ಟು ಜಾಸ್ತಿಯಾಯಿತು ಎಂದಿದ್ದಾರೆ. ಮಕ್ಕಳು ಸ್ವಾಮಿ ವಿವೇಕಾನಂದರ ಜೀವನವನ್ನು ಅರ್ಥಮಾಡಿಕೊಂಡರೆ ಭಾರತದ ಮಹಿಮೆ ತಿಳಿಯುತ್ತದೆ. ಸ್ವಾಮಿ ವಿವೇಕಾನಂದ ಚಿಂತನೆಗಳಿಂದ ಸುಭಾಷ್ ಚಂದ್ರಬೋಸ್, ರವೀಂದ್ರನಾಥ ಠಾಗೂರ್ ಚಕ್ರವರ್ತಿ ರಾಜಗೋಪಾಲಾಚಾರಿ, ಅಬ್ದುಲ್ ಕಲಾಂ, ಕುವೆಂಪು, ಚಂದ್ರಶೇಕರ್ ಆಜಾದ್, ಭಗತ್‌ಸಿಂಗ್, ಸಾವರ್‌ಕರ್, ಟಾಟಾ ಮುಂತಾದವರು ಪ್ರಭಾವಿತರಾಗಿ ತಮ್ಮ ಜೀವನದಲ್ಲಿ ಪರಿವರ್ತನೆಗೊಂಡು ಶ್ರೇಷ್ಠ ವ್ಯಕ್ತಿಗಳಾಗಿ ರೂಪುಗೊಂಡರು. ನೀವೆಲ್ಲಾ ಸ್ವಾಮಿ ವಿವೇಕಾನಂದರ ಜೀವನವನ್ನು ಅರ್ಥಮಾಡಿಕೊಂಡರೆ ಇನ್ನೊಬ್ಬ ವಿವೇಕಾನಂದರಾಗಬಹುದು" ಎಂದು ಹೇಳಿದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಭಾರತೀಯ ಸೇನೆಯ ಅಧಿಕಾರಿ ಕರ್ನಲ್ ಮಹೇಶ್ವರ್‌ರವರು ಮಾತನಾಡುತ್ತಾ "ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ ಈ ಮೂರು ಅಮೃತ ವಾಕ್ಯಗಳು ಪ್ರತಿಯೊಬ್ಬರಿಗೂ ಬಹುಮುಖ್ಯ. ಈ ನುಡಿಗಳನ್ನು ಅಕ್ಷರಶಃ ಪರಿಪಾಲಿಸುತ್ತಾರೊ ಅವರು ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಗಳಾಗುತ್ತಾರೆ. ಸ್ವಾಮಿ ವಿವೇಕಾನಂದರು ತಮ್ಮ ಜೀವನದಲ್ಲಿ ಎಲ್ಲಾ ಕಲೆಗಳನ್ನು ಕರಗತ ಮಾಡಿಕೊಂಡಿದ್ದರು. ದೀನರನ್ನು ಕಂಡರೆ ಮರುಗಿ ತಮ್ಮ ಕೈಯಲ್ಲಿದ್ದುದನ್ನು ದಾನ ಮಾಡುತ್ತಿದ್ದರು. ನರೇಂದ್ರನಿಗೆ ಗುರು ಪರಮಹಂಸರು ಸಿಕ್ಕ ಹಾಗೆ ಎಲ್ಲರಿಗೂ ಸಿಕ್ಕರೆ ಜೀವನದಲ್ಲಿ ಅದ್ಭುತ ಸಾಧನೆ ಮಾಡಬಹುದು. ನಾನು ಸೈನ್ಯಕ್ಕೆ ಸೇರಿ ದೇಶಸೇವೆ ಮಾಡಲು ಮೂಲ ಪ್ರೇರೇಪಣೆ ಹಾಗೂ ಆದರ್ಶವೇ ಸ್ವಾಮಿ ವಿವೇಕಾನಂದರು" ಎಂದು ಹೇಳಿದರು.

ಇದೇ ಸಮಾರಂಭದಲ್ಲಿ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ನೇತ್ರತಜ್ಞರಾದ ಡಾ|| ಮಂಜುನಾಥ್‌ರವರು ನೇತ್ರದಾನದ ಮಹತ್ವವನ್ನು ವಿವರಿಸಿದರು. ಸಮಾರಂಭದಲ್ಲಿ ಕೊರಟಗೆರೆ ತಾಲ್ಲೂಕಿನ ಹನುಮಂತನಗರದ ಡಾ|| ನಾಗೇಂದ್ರಸ್ವಾಮೀಜಿ, ನಿರ್ಭಯ ಯೂತ್ಸ್ ಫೆಡರೇಷನ್‌ನ ಗಗನ್ ಅಬ್ಬಿನಹೊಳೆ, ಪ್ರೊ|| ಮಹಾದೇವಪ್ರಸಾದ್, ಚಂದನ್, ಪವನ್, ಕರಣ್ ಮುಂತಾದವರು ಉಪಸ್ಥಿತರಿದ್ದರು. ಶ್ರೀಮತಿ ನವ್ಯ ಪ್ರಾರ್ಥಿಸಿದರು, ದಯಾನಂದ ಸ್ವಾಗತಿಸಿದರು, ಶಿಕ್ಷಕ ರಾಘವೇಂದ್ರಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು ಪ್ರೊ|| ಮಹಾದೇವ ಪ್ರಸಾದ್ ವಂದಿಸಿದರು. ಸಮಾರಂಭಕ್ಕೆ ಮುನ್ನ ಬಿ.ಹೆಚ್. ರಸ್ತೆ, ಎಂ.ಜಿ. ರಸ್ತೆ, ಸ್ವಾಮಿ ವಿವೇಕಾನಂದ ರಸ್ತೆ, ಅಶೋಕ ರಸ್ತೆ ಮೂಲಕ ಆನೆಯ ಮೇಲೆ ಸ್ವಾಮಿ ವಿವೇಕಾನಂದರ ಭಾವಚಿತ್ರದ ಶೋಭಾಯಾತ್ರೆಯು ಸುಮಾರು 600 ವಿದ್ಯಾರ್ಥಿಗಳು ಈ ಮೂಲಕ ಯಶಸ್ವಿಯಾಗಿ ನಡೆಯಿತು.

# ವಿವೇಕವಾಣಿ – ವಿದ್ಯೆಗೆ ವಿನಯವೇ ಭೂಷಣ



ಭಾರತ ಜಗತ್ತಿನ ಎಲ್ಲಾ ರಾಷ್ಟ್ರಗಳಿಗಿಂತ ಆರ್ಥಿಕತೆಯ ದಿಗಂತದಲ್ಲಿ ಕೊಂಡೊಯ್ದಿರುವ ಹಿಂದಿನ ಶಕ್ತಿ ನಮ್ಮ ಸನಾತನ ಸಂಸ್ಕೃತಿ ಪರಂಪರೆ, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎನ್ನುವ ಹಾಗೆ ಗುರುವಿಗೆ ತಲೆಬಾಗದಿದ್ದರೆ, ಗುರುವಿನ ಆರ್ಶೀವಾದವಿಲ್ಲದಿದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಈ ಜಗತ್ತು ಕಂಡ ಅದಮ್ಯ ಚೇತನ ಸ್ವಾಮಿ ವಿವೇಕಾನಂದರು ಅದೆಷ್ಟೋ ಸ್ಪೂರ್ತಿವಾಣಿಗಳಲ್ಲಿ ಇದೂ ಒಂದು ಮೃಗಸದೃಶನಾದವನನ್ನು ಮನಿಷ್ಯನನ್ನಾಗಿ ಮಾಡುವ, ಮನಿಷ್ಯನನ್ನು ದೇವರನ್ನಾಗಿ ಮಾಡುವ ಉದಾತ್ತ ಚಿಂತನೆಯ ಹರಿಕಾರ ವಿವೇಕಾನಂದರು.

ದೇಶವನ್ನು ಮುನ್ನೆಡೆಸಲು ಸಶಕ್ತವಾದ ಯುವಪಡೆಯನ್ನು ನಿರ್ಮಿಸುವುದೇ ನನ್ನ ಗುರಿ ಎನ್ನುತ್ತಿದ್ದರು ವೀರ ಸನ್ಯಾಸಿ ಸ್ವಾಮಿ ವಿವೇಕಾಂನದರು ಮಾನಸಿಕ ದೈಹಿಕ, ಶೈಕ್ಷಣಿಕವಾಗಿ, ಆಧ್ಯಾತ್ಮಿಕ, ನೈತಿಕ, ಸಾಮಾಜಿಕ ಎಂದೂ ಶಕ್ತಿ ಕಳೆದುಕೊಳ್ಳಬಾರದು ಎಂದು ಯುವಕರಿಗೆ ಕರೆ ನೀಡಿದ್ದರು. ನಾವು ಕೇವಲ ಶಿಕ್ಷಣ ಪಡೆದರೆ ಸಾಲದು ಅದರೊಂದಿಗೆ ವಿನಯವು  ಬಹಳ ಮುಖ್ಯವಾದದ್ದು. "ವಿದ್ಯಾ ವಿನಯೇನ ಶೋಭತೆ".

ಒಬ್ಬ ರಾಜನಿದ್ದ ಆತನ ಆಸ್ಥಾನದಲ್ಲಿ ಒಬ್ಬ ಪಂಡಿತ ತಾನೆ ಹೆಚ್ಚು ಬುದ್ಧಿವಂತ ಎಂಬ ವಿಪರೀತ ಅಹಂಕಾರದಿಂದ ಇತರ ಪಂಡಿತರನ್ನು ಜನರನ್ನು ಅವಮಾನಿಸುತ್ತಿದ್ದ. ಈ ಪಂಡಿತನ ನಡವಳಿಕೆಯಿಂದ ಬೇಸತ್ತ ಎಷ್ಟೋ ಜನರು ಹಾಗೂ ಪಂಡಿತರು ಬೇರೆ ರಾಜ್ಯಗಳಿಗೆ ವಲಸೆ ಹೋದರು. ಇದೇ ಸಮಯದಲ್ಲಿ ವಿಜಯಗುರು ಎಂಬುವವನು ರಾಜಾಶ್ರಯ ಕೇಳಿ ಬಂದನು. ಎಂದಿನಂತೆ ಪಂಡಿತನು ಇವನನ್ನು ಏನೇನೋ ಪ್ರಶ್ನೆಗಳನ್ನು ಕೇಳಿ ಅವಮಾನಿಸಿ ಕಳುಹಿಸಿದನು. ವಿಜಯಗುರು ಒಂದು ಉಪಾಯ ಮಾಡಿ ರಾಜನ್ನನ ಭೇಟಿಯಾಗಲು ಅಗಸನ ವೇಷದಲ್ಲಿ ಬಂದು ಕೆಲಸಕ್ಕೆ ಸೇರಿದನು ಕ್ರಮೇಣ ದಿನಗಳಾದ ನಂತರ ಇವನ ಜಾಣ್ಮೆ ಮಹಾರಾಣಿಗೆ ತಿಳಿಯಿತು. ಆಗ ಮಹಾರಾಣಿಯು ಬಳಿ ಅಗಸನ ವೇಷದಲ್ಲಿಯೇ ಬಂದು ನಡೆದ ವಿಷಯವನ್ನು ತಿಳಿಸುತ್ತಾನೆ. ಮಾರನೆ ದಿನ ಮಹಾರಾಣಿಯು ಅಗಸನ ವೇಷದಲ್ಲಿರುವ ವಿಜಯಗುರುನನ್ನೂ ಆಸ್ಥಾನಕ್ಕೆ ಕರೆದುಕೊಂಡು ಬಂದು ಹೀಗೆ ಹೇಳುತ್ತಾಳೆ. ಇವನು ತುಂಬಾ ಪಂಡಿತರೆಂದು ಹೇಳುತ್ತಿದ್ದಾನೆ. ನಮ್ಮ ಪಂಡಿತರನ್ನು ಸೋಲಿಸದರೆ ಮಾತ್ರ ಜಾಣನೆಂದು ಒಪ್ಪಿಕೊಳ್ಳುತ್ತೇನೆ ಎಂದು ಪಂಥ ಕಟ್ಟಿ ಕರೆತಂದಿದ್ದೇನೆ.

ಆಗಲಿ ಮಹಾರಾಣಿ. ಹೇ ಅಗಸ ನಿನ್ನ ಪ್ರಶ್ನೆಗಳು ಏನಿವೆ ಬೇಗ ಬೇಗ ಕೇಳು ನಿನ್ನೊಂದಿಗೆ ಕಾಲಹರಣ ಮಾಡಲು ನನಗೆ ಸಮಯವಿಲ್ಲ ಎಂದು ಜಂಭದಿಂದ ಅಹಂಕಾರದಿಂದ ಹೇಳಿದ ಪಂಡಿತ. ಹೀಗೆ ಪ್ರಶ್ನೆಗಳನ್ನೂ ಕೇಳುತ್ತಾ ಗುಣಗಳಲ್ಲಿ ಉತ್ತಮವಾಗಿರುವುದು ಯಾವುದು? ಎಂದು ಕೇಳುತ್ತಾನೆ. ಅದಕ್ಕುತ್ತರವಾಗಿ ನನ್ನ ತರ ಪಂಡಿತ ಶಾಸ್ತ್ರಗಳನ್ನು ಕಲಿತು ನನ್ನ ಹಾಗೆ ಪಂಡಿತನಾಗಿ ಶೋಭಿಸುವುದು ಎಂದನು ತಪ್ಪು ಪಂಡಿತರೇ, ಸರಿಯಾದ ಉತ್ತರ ಸೌಜನ್ಯ ಎಷ್ಟೇ ವಿದ್ಯೆ ಕಲಿತರೂ ಸೌಜನ್ಯ ವಿನಯಗಳಿಲ್ಲದಿದ್ದರೆ ವಿದ್ಯೆ ನಿರರ್ಥಕವೆನಿಸುತ್ತದೆ ಎಂದನು ಕೊನೆಯ ಪ್ರಶ್ನೆ ಮಹಾ ಪಂಡಿತರೇ ಎಷ್ಟು ಹಂಚಿದರು ಖರ್ಚಾಗದೆ ಹೆಚ್ಚಾಗುವ ನಿಜವಾದ ಆಸ್ತಿಯಾವುದು? ಎಂದನು ಇದಕ್ಕೆ ತಬ್ಬಿಬಾದ ಪಂಡಿತ ವಿಜಯಗುರು ಪಂಡಿತರೇ ನಿಜವಾದ ಆಸ್ತಿಯೆಂದರೆ ವಿದ್ಯೆ ಮತ್ತು ಸಂತೋಷ. ಎಷ್ಟು ಜನರಿಗೆ ಹಂಚಿದರೂ ವಿದ್ಯೆ ಮತ್ತು ಸಂತೋಷ ಖರ್ಚಾಗದು ಹೆಚ್ಚುತ್ತಲೆ ಇರುತ್ತದೆ. ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಪಂಡಿತರನ್ನು ಸೋಲಿಸುತ್ತಾನೆ. ನಂತರ ಮಹಾರಾಜರಿಗೆ ಪಂಡಿತ ಅಹಂಕಾರದಿಂದ ನಡೆದುಕೊಳ್ಳುವ ಬಗ್ಗೆ ತಿಳಿಸುತ್ತಾನೆ. ಮಹಾರಾಜ ಪಂಡಿತರಿಗೆ ಬುದ್ಧಿಹೇಳಿ ಬದಲಾಗಲು ಅವಕಾಶ ಕಲ್ಪಿಸುತ್ತಾನೆ. ಇನ್ನೂ ಮುಂದೆ ರಾಜಾಶ್ರಯವನ್ನು ಬೇಡಿಬಂದ ಜನರಿಗೆ ಅವಕಾಶನೀಡಿ ಪುರಸ್ಕರಿಸಬೇಕೆಂದು ಆಜ್ಞೆ ನೀಡುತ್ತಾರೆ. ನಂತರ ವಿಜಯಗುರುವಿಗೆ ಸನ್ಮಾನ ಪುರಸ್ಕಾರಗಳನ್ನು ಮಾಡಿ ಅಭಿನಂಧಿಸುತ್ತಾರೆ.

ಈ ಜಗತ್ತೇನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದೇ ಇರುವ ವ್ಯಾಯಾಮ ಶಾಲೆ. ವಿಶ್ವದ ಅನೇಕ ಮಂದಿ ಇಂದು ಭಾರತ ಶಿಕ್ಷಣ, ಸಂಸ್ಕೃತಿ, ನಮ್ಮ ಪರಂಪರೆಯ ಬಗ್ಗೆ ಗೌರವದಿಂದ ಕಾಣಲು ಹಾಗೂ ಅದರ ಬಗ್ಗೆ ಅಧ್ಯಯನ ಮಾಡಲು ಮುಂದಾಗುತ್ತಿರುವಾಗ ನಾವಿನ್ನೂ ಜಾಗೃತರಾಗಬೇಕು. ನಮ್ಮಲ್ಲಿ ವಿದ್ಯೆ ಶಿಕ್ಷಣ ಅತ್ಯುತ್ತಮವಾಗಿರಬೇಕು. ಅದನ್ನು ಉಳಿಸೋಣ ಬೆಳೆಸೋಣ ಸ್ವಾಮಿ ವಿವೇಕನಂದರ ವಾಣಿಗಳು ನಮಗೆ ಆದರ್ಶವಾಗಲಿ.

– ಶ್ರೀಮತಿ ಸವಿತ ಎನ್.ಇ.

## 6ನೇ ವಾರ್ಷಿಕೋತ್ಸವ

**ಬೆಳಗಾವಿ :** ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇದರ 6ನೇ ವಾರ್ಷಿಕೋತ್ಸವ ಪೂಜಾ ಸಮಾರಂಭವೂ ಬುಧವಾರ ದಿನಾಂಕ 16.01.2019ರಂದು ಮುಂಜಾನೆ 9.30 ಗಂಟೆಗೆ, ಚಿಕ್ಕೋಡಿ ಪಟ್ಟಣದ ಡಾ. ಪ್ರಭಾಕರ ಕೋರೆ ನಗರದಲ್ಲಿರುವ ಸಹಕಾರಿಯ ಕಛೇರಿಯಲ್ಲಿ ಜರುಗಿತು.

ಸದರಿ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯರು ಹಾಗೂ ವಿಧಾನ ಪರಿಷತ್ ಪ್ರತಿಪಕ್ಷದ ಮುಖ್ಯ ಸಚೇತಕರಾದ ಸನ್ಮಾನ ಶ್ರೀ ಮಹಾಂತೇಶ ಎಮ್ ಕವಟಗಿಮಠ ಇವರ ಉಪಸ್ಥಿತಿಯಲ್ಲಿ ಪೂಜಾ ಕಾರ್ಯಕ್ರಮವು ಜರುಗಿತು. ಈ ಸಂಭರ್ದದಲ್ಲಿ ಸದರಿಯವರಿಗೆ ನಮ್ಮ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹುಟ್ಟು ಹಬ್ಬದ ಶುಭಾಶಯ ಕೋರಲಾಯಿತು.

ಸದರಿ ಸಮಾರಂಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ ಹಾಗೂ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಮತ್ತು ಸಹಕಾರಿ ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ಹಾಗೂ ನಿರ್ದೇಶಕರಾದ ಸಂಜಯ ಗಿಡವೀರ, ಲೋಕಪ್ಪಾ ದುಂಬಾಳಿ, ಯರ್ರಿಸ್ವಾಮಿಗೌಡ ಈಟಗೌನಿ, ಹೇಮಂತ ಹಂಪಣ್ಣನವರ, ಶ್ರೀಧರ ದಿಕ್ಷಿತ, ಶಿವಜಾತ ಮಿರ್ಜೆ, ಪ್ರವೀಣ ಕಾಂಬಳೆ, ರಾಘವೇಂದ್ರ ಡಂಬಳ, ರಾಜಕುಮಾರ ಹಿರೇಮಠ, ಸಂಜಯ ಶಿಂತ್ರೆ, ಮನೋಜಕುಮಾರ ಸಮ್ಮನಶೆಟ್ಟಿ, ಚಂದ್ರಕಾಂತ ಬುರಡ ಹಾಗೂ ಸಹಕಾರಿಯ ಸದಸ್ಯರು, ಠೇವುದಾರರು, ಹಿತೈಸಿಗಳು ಮತ್ತು ಸಹಕಾರಿಯ ಮುಖ್ಯ ಕಾರ್ಯ ನಿರ್ವಾಹಕರಾದ ಶ್ರೀ ಎಮ್. ಬಿ. ಬಡಿಗೇರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಸಹಕಾರ ಭಾರತಿ ಸಂಸ್ಥಾಪನಾ ದಿನಾಚರಣೆ

**ಉಡುಪಿ :** ಸಹಕಾರ ಭಾರತಿಯ ಬ್ರಹ್ಮಾವರ ತಾಲೂಕಿನ ಸಹಕಾರ ಭಾರತಿ ಸಂಸ್ಥಾಪನಾ ದಿನಾಚರಣೆಯನ್ನು ಕೋಡಿ ಕನ್ಯಾಣದ ರಾಮಾಂಜನೇಯ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಇಲ್ಲಿನ ಸಭಾಂಗಣದಲ್ಲಿ ಜನವರಿ 11ನೇ ತಾರೀಖಿನಂದು ಜರುಗಿತು.

ಉದ್ಘಾಟನೆಯನ್ನು ಆಸ್ತಿಕ್ ಶಾಸ್ತ್ರಿ ಇವರು ನೆರವೇರಿಸಿ ಸಹಕಾರಿ ತತ್ವವು ಹಿಂದಿನಿಂದ ಬಂದ ಪರಂಪರೆ ಎಂದರು ಈ ಸಂದರ್ಭ ಮಾತನಾಡಿದ ಉಡುಪಿ ಜಿಲ್ಲೆಯ ಸಂಘಟನಾ ಪ್ರಮುಖರಾದ ಶ್ರೀ ಮಂಜುನಾಥ್ ಎಸ್. ಕೆ ಇವರು ಸಹಕಾರಿ ಎನ್ನುವುದು ಕಲ್ಪವೃಕ್ಷ ಇದು ಯಾರ ಸ್ವತ್ತೂ ಅಲ್ಲ ಇದು ಸಾರ್ವಜನಿಕ ಆಸ್ತಿ ಎಂದರು. ಕಾರ್ಯಕ್ರಮದಲ್ಲಿ ಬ್ರಹ್ಮಾವರ ತಾಲ್ಲೂಕಿನ ಸಹಕಾರ ಭಾರತಿಯ ಅಧ್ಯಕ್ಷರಾದ ಅಶೋಕ್ ಪ್ರಭು, ಪ್ರಧಾನ ಕಾರ್ಯದರ್ಶಿ ಸತೀಶ್ ನಾಯ್ಕ್, ರಾಮಾಂಜನೇಯ ಸೌಹಾರ್ದದ ಉಪಾಧ್ಯಕ್ಷರಾದ ಮಹಾಬಲ ಕುಂದರ್, ಇತರ ಸಹಕಾರಿಗಳಾದ ಅಣ್ಣಪ್ಪ ಕುಂದರ್, ಮಹಾಬಲ ಕುಂದರ್, ಪ್ರಭಾಕರ ಮೆಂಡನ್, ಜಗನ್ನಾಥ ಅಮೀನ್, ಭಾಸ್ಕರ ಕಾಂಚನ್, ದಯಾನಂದ ಕರ್ಕೇರ, ಲಕ್ಷ್ಮಣ ಖಾರ್ವಿ, ರಾಘವೇಂದ್ರ ಸುವರ್ಣ, ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ವಿಜಯ್ ಬಿ.ಎಸ್, ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ಸಿ.ಇ.ಓ ಭುವನೇಶ್ ಪ್ರಭು ಉಪಸ್ಥಿತರಿದ್ದರು. ಕಾರ್ಯಕ್ರಮ ನಿರೂಪಣೆಯನ್ನು ರಾಮಾಂಜನೇಯ ಸೌಹಾರ್ದ ಸಿ.ಇ.ಓ ರಾಘವೇಂದ್ರ ಕರ್ಕೇರ ಇವರು ನೆರವೇರಿಸಿ ವಂದಿಸಿದರು.





## ಗ್ರಾಹಕರ ಸಭೆ

**ಬೈಂದೂರು :** ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಗೋಳಿಹೊಳೆ ಶಾಖೆ ಮೂರನೇ ವರ್ಷಕ್ಕೆ ಪದಾರ್ಪಣೆ ಮಾಡಿದ ಸಂದರ್ಭ ಶಾಖೆಯ ಆವರಣದಲ್ಲಿ ಆಯೋಜಿಸಲಾದ ಗ್ರಾಹಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಆರ್ಥಿಕ ಸಂಸ್ಥೆಗಳ ಶಾಖೆಗಳನ್ನು ಗ್ರಾಮೀಣ ಭಾಗದಲ್ಲಿ ತೆರೆಯುವುದರಿಂದ ನಿಜವಾಗಿಯೂ ಜನಸೇವೆ ಮಾಡಿದಂತಾಗುವುದು. ಈ ನಿಟ್ಟಿನಲಿ ನಮ್ಮ ಸಂಸ್ಥೆ ಉತ್ತಮ ಸೇವೆ ನೀಡುತ್ತಾ ಬಂದಿದ್ದು, ಇನ್ನು ಹೆಚ್ಚಿನ ಸೇವೆ ನೀಡಲು ಕೂಡ ಬದ್ಧವಾಗಿದೆ ಎಂದರು. ಗ್ರಾಮೀಣ ಭಾಗದ ಜನರ ಆರ್ಥಿಕ ಅಗತ್ಯತೆಗಳನ್ನು ಅರಿತು ಸೇವೆ ನೀಡಿದಾಗ ಸಂಸ್ಥೆ ಯಶಸ್ಸನ್ನು ಸಾಧಿಸುವುದಲ್ಲದೇ ಗ್ರಾಮೀಣ ಭಾಗದ ಆರ್ಥಿಕ ಪ್ರಗತಿಯಲ್ಲಿಯೂ ಭಾಗಿಯಾದಂತಾಗುತ್ತದೆ ಎಂದು ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಅಧ್ಯಕ್ಷ ಎಸ್. ರಾಜು ಪೂಜಾರಿ ಹೇಳಿದರು. ಈ ಸಂದರ್ಭ ಏಳಜಿತ, ಮೂರೂರು ಭಾಗದ ಕೊರಗ ಸಮುದಾಯದ ಮಕ್ಕಳಿಗೆ ಬಟ್ಟೆ ಹಾಗೂ ಲಕ್ಕಿ ಡ್ರಾ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

## ಸುಕೋ ಬ್ಯಾಂಕ್‌ನ ಕಾರ್ಯಕ್ರಮ : ಪ್ರಗತಿಪರ ರೈತರಿಗೆ ಮತ್ತು ಶಾಂತಿಯುತ ರಾಷ್ಟ್ರಕ್ಕಾಗಿ ಸುಸ್ಥಿರ ಕೃಷಿ



**ಬಳ್ಳಾರಿ :** ಸುಕೋ ಬ್ಯಾಂಕ್ ಇತ್ತೀಚಿಗೆ ಅದರ ರಜತ ವರ್ಷದ ಮಹೋತ್ಸವವನ್ನು ಆಚರಿಸಿಕೊಂಡಿತು. ಸುಕೋ ಬ್ಯಾಂಕಿನ ಧ್ಯೇಯವಾಕ್ಯ "ಸುಸ್ಥಿರ ಕೃಷಿ"ಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. "ರೈತರು ಸವಾಲುಗಳು ಮತ್ತು ಬರಗಾಲದ ಸಂಕಷ್ಟಗಳನ್ನು ಎದುರಿಸಿದ ಹಾಗೂ ಬರ ಗೆದ್ದ ರೈತರೊಂದಿಗೆ ಬಳ್ಳಾರಿಯ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಚರ್ಚೆಯಿಂದ ಆಯ್ದ ಅಂಶಗಳನ್ನು ಕೃಷಿ ಸಚಿವ ಶ್ರೀ ಶಿವಶಂಕರ ರೆಡ್ಡಿಯವರ ಮುಂದೆ ಪ್ರಸ್ತುತಪಡಿಸಲಾಯಿತು.



### ಸುಸ್ಥಿರ ಕೃಷಿಗಾಗಿ ಓಟ – ಸಾವಿರದ ಓಟ

ನವ ನವೀನ ವಿಧಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಮಡು ಯಶಸ್ವಿಯಾದ ಉತ್ಸಾಹಿ ರೈತರನ್ನು ಸನ್ಮಾನಿಸುವ ಸುಕೃತಾ ಕೃಷಿ ಪ್ರಶಸ್ತಿ ವಿತರಣಾ ಸಮಾರಂಭದ ಪೂರ್ವದಲ್ಲಿ ಮ್ಯಾರಥಾನ್ ಓಟವನ್ನು ಆಯೋಜಿಸಲಾಗಿತ್ತು, ಮ್ಯಾರಥನ್ ಅನ್ನು ಬಳ್ಳಾರಿ ಶ್ರೀ ಕನಕ ದುರ್ಗಮ್ಮ ದೇವಸ್ಥಾನದಲ್ಲಿ ಸುಸ್ಥಿರ ಕೃಷಿಯ ಧ್ಯೇಯವಾಕ್ಯದೊಂದಿಗೆ ಆಯೋಜಿಸಲಾಯಿತು. ಸುಕೃತ ಪ್ರಶಸ್ತಿ ವಿಜೇತರಾದ ಶ್ರೀ ಧರ್ಮರೆಡ್ಡಿ ಮತ್ತು ಶ್ರೀ ಅಜ್ಜಪ್ಪ ಅವರಿಂದ ಬೆಳಿಗ್ಗೆ 6.15ಕ್ಕೆ ಪ್ರಾರಂಭವಾಯಿತು. ಸುಮಾರು 700ಕ್ಕೂ ಹೆಚ್ಚು ಜನರು ಓಟದಲ್ಲಿ ಭಾಗವಹಿಸಿದರು.

## ವಿಜಯ ಸೌಹಾರ್ದ ಸಹಕಾರಿಯ ಮೂರು ಶಾಖೆಗಳ ಉದ್ಘಾಟನೆ

**ಮುಧೋಳ :** ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿಯ ಯರಗಟ್ಟಿ ಶಾಖೆಯ ಉದ್ಘಾಟನೆಯನ್ನು ಶಾಸಕ ಆನಂದ ಮಾಮನಿ ರಾಮದುರ್ಗ ಶಾಖೆಯ ಉದ್ಘಾಟನೆಯನ್ನು ಶಾಸಕ ಮಹದೇವಪ್ಪ ಯಾದವಾಡ ಹಾಗೂ ಕಂಕಣವಾಡಿ ಶಾಖೆಯ ಉದ್ಘಾಟನೆಯನ್ನು ರಾಯಬಾಗ ಶಾಸಕ ದುರ್ಯೋಧನ ಐಹೊಳ್ಳಿ ಉದ್ಘಾಟಿಸಿದರು. ಮೂರೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷ ಮತ್ತು ವಿಧಾನ ಪರಿಷತ್ ಸದಸ್ಯ ಹಣಮಂತ ರುದ್ರಪ್ಪ ನಿರಾಣಿ ವಹಿಸಿದ್ದರು.

ಕಂಕನವಾಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಣಮಂತ ನಿರಾಣಿ ಅವರು ಮಾತನಾಡಿ 2007ರಲ್ಲಿ ಆರಂಭವಾದ ನಿರಾಣಿ ಸಮೂಹದ ಅಂಗ ಸಂಸ್ಥೆಯಾದ ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ 37 ಶಾಖೆಗಳನ್ನು ಹೊಂದಿದೆ. ಎಲ್ಲ ಶಾಖೆಗಳಲ್ಲಿ ಸ್ಥಳೀಯ ಯುವಕರಿಗೆ ಉದ್ಯೋಗ ನೀಡಲಾಗಿದೆ. ನಿರಾಣಿ ಸಮೂಹ ಅನೇಕ ಜನಪರ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ. ಕಬ್ಬು ಪೂರೈಸುವ ರೈತರಿಗೆ ನೆರವಾಗಲು ಅಪಘಾತ ವಿಮಾಯೋಜನೆ ಕಾರ್ಯರೂಪಕ್ಕೆ ತರಲಾಗಿದೆ. ಇದರಿಂದ ಸುಮಾರು 30 ಸಾವಿರ ರೈತ ಕುಟುಂಬಗಳಿಗೆ



ಅನುಕೂಲವಾಗುವದು ಎಂದು ಹೇಳಿದರು.

ಬ್ಯಾಂಕ್ ಒಟ್ಟು 100 ಶಾಖೆಗಳನ್ನು ಸ್ಥಾಪಿಸುವ ಗುರಿ ಹೊಂದಿದೆ. ಈ ತಿಂಗಳ ಕೊನೆಯಲ್ಲಿ ವಿಜಯಪುರ, ನಿಡಗುಂದಿ, ಚಿಕ್ಕೋಡಿ ಮತ್ತು ಜಮಖಂಡಿಯಲ್ಲಿ ಎರಡನೇ ಹಂತದಲ್ಲಿ ಶಾಖೆಯನ್ನು ಆರಂಭಿಸಲಾಗುವುದು ಎಂದು ನಿರಾಣಿ ರವರು ತಿಳಿಸಿದರು. ಬ್ಯಾಂಕಿನ ನಿರ್ದೇಶಕರಾದ ರಾಚಪ್ಪ ಕರೆಹೊನ್ನ ಮತ್ತು ಇಬ್ರಾಹಿಂ ಸಾರವಾನ ಅವರು ಉಪಸ್ಥಿತರಿದ್ದರು. ಆರಂಭದಲ್ಲಿ ಬ್ಯಾಂಕಿನ ಜನರಲ್ ಮ್ಯಾನೇಜರರಾದ ಜಿ.ಎಂ.ವೈದ್ಯ ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು. ಡಿಜಿಎಂ ಎಂ.ಎಚ್.ಪತ್ತೆನ್ನವರ ವಂದಿಸಿದರು.



**ಕೊಪ್ಪಳ :** ಶ್ರೀ ಮಂಜುಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ. ಸದರಿ ಸಹಕಾರಿಯ ಕಛೇರಿಯಲ್ಲಿ ಶ್ರೀ ಸಿದ್ದಗಂಗೆಯ ಮಹಾಯೋಗಿ ಡಾ. ಶಿವಕುಮಾರ ಮಹಾಸ್ವಾಮಿಗಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರಯ್ಯ .ಅ. ಹಿರೇಮಠ, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಮೌನಾಚರಣೆಯನ್ನು ಮಾಡುವುದರ ಮೂಲಕ ಶ್ರೀಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

# ಅಧ್ಯಕ್ಷರು - ಉಪಾಧ್ಯಕ್ಷರ ಆಯ್ಕೆ

### ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ



ಶ್ರೀ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ
ಅಧ್ಯಕ್ಷರು



ಶ್ರೀ ಷಡಕ್ಷರಿ ಬಸವರಾಜು ಮೂಗೇರಿ
ಉಪಾಧ್ಯಕ್ಷರು

### ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ, ಬೆಲ್ಲದ ಬಾಗೇವಾಡಿ.



ಶ್ರೀ ಮೋಹನ ಸ. ಮುನ್ನೋಳಿ
ಅಧ್ಯಕ್ಷರು



ಶ್ರೀ ಮುರಗೇಶ ಬ. ಕತ್ತಿ
ಉಪಾಧ್ಯಕ್ಷರು

### ಗೌಳಿಗರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ, ಹೊಸಪೇಟೆ.



ಶ್ರೀ ಗೌಳಿ ರುದ್ರಪ್ಪ
ಅಧ್ಯಕ್ಷರು



ಶ್ರೀ ಜಿ.ಎ ನಾಗಪ್ಪ
ಉಪಾಧ್ಯಕ್ಷರು

### ಅರಿಹಂತ ಅರ್ಬನ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ.



ಶ್ರೀ ರಾಮಣ್ಣಾ ನಾಗಪ್ಪಾ ಗೋಟೂರಿ
ಅಧ್ಯಕ್ಷರು



ಶ್ರೀ ಭೂಪಾಲ ಪಾರ್ಶ್ವನಾಥ ಚೌಗಲಾ
ಉಪಾಧ್ಯಕ್ಷರು

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 4,830 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 2563 ಪ್ರಕರಣಗಳು ಸೇರಿದಂತೆ ಒಟ್ಟು 7393 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 3,834 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,248 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 178 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 920 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 833 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 73 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 69 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 691 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# ರೈತರ ಆದಾಯವನ್ನು ದ್ವಿಗುಣಗೊಳಿಸವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಕುರಿತು ಕಾರ್ಯಾಗಾರ



ಕೇರಳದ ತಿಶೂರ್‌ನಲ್ಲಿ ಇಂಡಿಯನ್ ಸೂಸೈಟಿ ಫಾರ್ ಸ್ಟಡೀಸ್ ಇನ್ ಕೋ-ಆಪರೇಟಿವ್ ಪುನಾ ಹಾಗೂ ಕೇರಳದ ಕೃಷಿವಿದ್ಯಾಲಯದಲ್ಲಿ ನಡೆದ ರೈತರ ಆದಾಯವನ್ನು ದ್ವಿಗುಣಗೊಳಿಸವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ್ ಶ್ರೀ ಪ್ರಸನ್ನಕುಮಾರ, ಶ್ರೀ ಎಂ.ಜಿ. ಪಾಟೀಲ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಅಧಿಕಾರಿಗಳಾದ ಶ್ರೀ ಗುರುಪ್ರಸಾದ ಬಂಗೇರ ಮತ್ತು ವೀರಶೆಟ್ಟಿ ಯವರು ಭಾಗವಹಿಸಿದ್ದರು.

## ಸಹಕಾರ ಭಾರತಿಯ ಅಭ್ಯಾಸ ವರ್ಗ ಕಾರ್ಯಕ್ರಮ



**ಮೈಸೂರೂ :** ಸಹಕಾರ ಭಾರತಿಯ ಅಭ್ಯಾಸ ವರ್ಗ ಕಾರ್ಯಕ್ರಮವನ್ನು ದಿನಾಂಕ : 31.01.2019ರಂದು ಗುರುವಾರ ಬೆಳಿಗ್ಗೆ 10.30 ಗಂಟೆಗೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಮೈಸೂರು ಲೋಕಲ್ ಸೆಂಟರ್), ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹೆಚ್ ವಿ ರಾಜೀವ್‌ರವರು, ಸಹಕಾರ ಭಾರತಿಯ ಪ್ರಮುಖರು ಹಾಗೂ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.




**ಬೆಂಗಳೂರು :** ಜನನಿಧಿ ಸೌಹಾರ್ದ ಸಹಕಾರಿಯಿಂದ ಗಣರಾಜ್ಯೋತ್ಸವ ಆಚರಣೆ ಹಾಗೂ ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ನುಡಿನಮನ.



**ಗಂಗಾವತಿ :** ಖುಷಿ ಪತ್ತಿನ ಸೌಹಾರ್ದ ಸಹಕಾರಿಯಿಂದ ನಡೆದಾಡುವ ದೇವರು, ತ್ರಿವಿಧ ದಾಸೋಹಿಗಳಾದ ಪದ್ಮಭೂಷಣ ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಆನಂದ ಕೊಟ್ರಪ್ಪ ಅಕ್ಕಿ, ಉಪಾಧ್ಯಕ್ಷರಾದ ಶ್ರೀ ಸೋಮಶೇಖರ ಸಿಂಗವಾಳ, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ನುಡಿನಮವನ್ನು ಸಲ್ಲಿಸಿದರು.



## ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶಿವಕುಮಾರ ಮಹಾಸ್ವಾಮೀಜಿಯವರು ಮತ್ತು ಸಹಕಾರ ಚಳುವಳಿ

ರಾಷ್ಟ್ರದಲ್ಲಿಯೇ ಒಂದು ಐತಿಹಾಸಿಕ ದಾಖಲೆ ನಿರ್ಮಿಸಿದ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರು ಲಿಂಗೈಕ್ಯರಾಗಿದ್ದರೂ ಸಹ ಅವರು ರಾಷ್ಟ್ರಕ್ಕೆ ನೀಡಿದ ಸಂದೇಶ ಹಾಗೂ ಸಾಧನೆಗಳು ಸರ್ವರಿಗೂ ಮಾದರಿ ಎನಿಸಿದೆ. ಪೂಜ್ಯ ಸ್ವಾಮೀಜಿಯವರು ಎಸ್.ಐ.ಟಿಯ ಆವರಣದಲ್ಲಿ ಎಸ್.ಐ.ಟಿ ವಿದ್ಯಾಸಂಸ್ಥೆಗಳ ನೌಕರರ ಸೌಹಾರ್ದ ಸಹಕಾರಿಯ ಗೌರವ ಅಧ್ಯಕ್ಷರಾಗಿ ಮಹಾಪೋಷಕರಾಗಿ ಸಹಕಾರಿ ಕ್ಷೇತ್ರದ ಬಗ್ಗೆ ಬಲವಾದ ನಿಷ್ಠೆ ಹೊಂದಿದ್ದರು. ಪ್ರತಿ ವರ್ಷ ಬಿರ್ಲಾ ಆಡಿಟೋರಿಯಂನಲ್ಲಿ ಜರುಗಿದ ವಾರ್ಷಿಕ ಮಹಾಸಭೆಯಲ್ಲಿ ದಿವ್ಯಸಾನಿಧ್ಯ ವಹಿಸಿ ಸಂದೇಶ ನೀಡಿ ಸಹಕಾರಿ ಚಳುವಳಿಯಲ್ಲಿ ನೈತಿಕತೆ ಮತ್ತು ಪ್ರಾಮಾಣಿಕತೆ ಅತ್ಯಂತ ಅವಶ್ಯಕ ಮತ್ತು ಯಶಸ್ಸಿನ ಅಡಿಗಲ್ಲು ಎಂದು ಪ್ರತಿಪಾದಿಸಿದ್ದರು. ಅಲ್ಲದೆ ಎಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿರುವ ಸಹಕಾರಿ ಚಳುವಳಿಯಲ್ಲಿ ಪ್ರಾಮಾಣಿಕ ಹಾಗೂ ದಕ್ಷ ನಾಯಕತ್ವ ಬರಬೇಕೆಂದು ಸಂದೇಶ ನೀಡಿದ್ದರು. ಎಸ್.ಐ.ಟಿ ವಿದ್ಯಾಸಂಸ್ಥೆಗಳ ನೌಕರರ ಸೌಹಾರ್ದ ಪತ್ತಿನ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಅವರ ಸಂದೇಶವನ್ನು ಅನೇಕ ಬಾರಿ ಕೇಳಿ ಸಂತಸಪಟ್ಟಿದ್ದೇನೆ.

ಅಲ್ಲದೆ ತುಮಕೂರಿನ ಶ್ರೀ ಸಿದ್ಧಗಂಗಾ ಪಟ್ಟಣ ಸಹಕಾರ ಬ್ಯಾಂಕಿನ ಸ್ಥಾಪನೆಯ ಹಿಂದೆ ಪ್ರೇರಕ ಶಕ್ತಿಯಾಗಿ ಬ್ಯಾಂಕು ಬೆಳೆಯಲು ಬ್ಯಾಂಕಿನ ನಿರ್ದೇಶಕ ಮಂಡಳಿಗೆ ಕಾಲಕಾಲಕ್ಕೆ ಸಂದೇಶ ಮತ್ತು ಆಶೀರ್ವಚನ ನೀಡುತ್ತಿದ್ದರು. ಒಟ್ಟಾರೆ ಲಿಂಗೈಕ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರು ಸಹಕಾರಿ ಚಳುವಳಿಯ ಬಗ್ಗೆ ಅಚಲ ವಿಶ್ವಾಸ ಹಾಗೂ ಗೌರವ ಹೊಂದಿದ್ದರು. ಇದು ಸಹಕಾರಿಗಳಿಗೆ ಒಂದು ಸ್ಫೂರ್ತಿದಾಯಕ ಮತ್ತು ಅನುಕರಣೀಯ.

**– ಶಂಕರ್ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು.**

# ಸಹಕಾರ ಇಲಾಖೆಯ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಘ (ರಿ.)

ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು – 52.

## ನೂತನ ಆಡಳಿತ ಮಂಡಳಿ ಸದಸ್ಯರು

### ಪದಾಧಿಕಾರಿಗಳು



ಶ್ರೀ ಕೆ.ಎಸ್. ನವೀನ್
ಅಧ್ಯಕ್ಷರು



ಶ್ರೀ ಡಿ. ಪಾಂಡುರಂಗ ಗರಗ್
ಉಪಾಧ್ಯಕ್ಷರು



ಶ್ರೀ ಕೆ.ಡಿ. ಮಾದಯ್ಯ
ಕಾರ್ಯದರ್ಶಿ



ಶ್ರೀ ರಾಮಾಕೃಷ್ಣಯ್ಯ
ಸಹಾಯಕ ಕಾರ್ಯದರ್ಶಿ



ಶ್ರೀ ಟಿ.ಎಸ್. ಸುಕುಮಾರ್
ಖಜಾಂಚಿ

### ಆಡಳಿತ ಮಂಡಳಿ ನಿರ್ದೇಶಕರು



ಶ್ರೀ ಐ.ಎಸ್. ಗಿರಡ್ಡಿ



ಶ್ರೀಮತಿ ಎಂ.ಎನ್. ಉಮಾ



ಶ್ರೀ ಎನ್. ವೆಂಕಟೇಶ್



ಡಾ. ಸುರೇಶ್‌ಗೌಡ



ಶ್ರೀ ಎಂ.ಪಿ. ಮಂಜುನಾಥ್



ಶ್ರೀ ಕಿಶೋರ್ ಜೋಷಿ



ಶ್ರೀ ಹೆಚ್.ಪಿ. ಸದಾಶಿವ



ಶ್ರೀ ಎನ್. ಸರಸ್ವತಮ್ಮ



ಶ್ರೀ ವಿ. ಹೇಮಲತಾ



ಶ್ರೀಮತಿ ಗೀತಾ ಕರುಣಾಕರ ಬಾಬು
ಪದನಿಮಿತ್ತ ನಿರ್ದೇಶಕರು

# ಪ್ರಾಥಮಿಕ ಪಟ್ಟಣ ಸಹಕಾರ ಬ್ಯಾಂಕ್‌ಗಳಿಂದ ಸಣ್ಣ ಹಣಕಾಸು ಬ್ಯಾಂಕ್‌ಗಳು ಠೇವಣಿಗಳನ್ನು ಸ್ವೀಕರಿಸುವ ಬಗ್ಗೆ ಆರ್.ಬಿ.ಐ. ಸುತ್ತೋಲೆ

भारतीय रिज़र्व बैंक
RESERVE BANK OF INDIA
www.rbi.org.in

DCBS. (BG) / No. 1712/06.02.324/2018-19 January 29, 2019

**The Chief Executive Officers of**
**All Primary (Urban) Co-operative Banks of Karnataka**

Madam/ Dear Sir,

**Acceptance of deposits from Primary (Urban) Co-operative Banks (UCBs) by Small Finance Banks (SFBs)**

We have been receiving references from Urban Co-operative Banks seeking clarification whether UCBs can place deposits with SFBs.

2. The matter has been examined and it is clarified that UCBs may place deposits with scheduled SFBs within the prudential interbank exposure / interbank counter party limits prescribed in Para 7 of our circular DCBR.BPD. (PCB).Cir.No.8/16.20.000/2015-16 dated November 19, 2015.

Yours faithfully

(Malay Biswas)
Assistant General Manger

सहकारी बैंक पर्यवेक्षण विभाग, 10/3/8, नृपतुंगा रोड, बेंगलूर 560 001
Department of Co-operative Bank Supervision, 10/3/8, Nrupathunga Road, Bengaluru-560001
Telephone: 22180312, Fax: 080-22237874 / 22293668 E-mail: dcbsbengaluruic@rbi.org.in

# ಸಹಕಾರ ಸಂಘಗಳಲ್ಲಿ ಪರಿಶಿಷ್ಟರಿಗೆ ಮತದಾನದ ಹಕ್ಕು – ಪದಾಧಿಕಾರಿಗಳ ಆಯ್ಕೆಯಲ್ಲಿ ಮೀಸಲಾತಿ

ಸಿ.ಎನ್.ಪರಶಿವಮೂರ್ತಿ

ವಿಧಾನ ಮಂಡಳದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ – ವರದಿಯನ್ನು ವಿಧಾನ ಮಂಡಳಕ್ಕೆ ಸಲ್ಲಿಸಿ, ಈ ಕೆಳಕಂಡ ಶಿಫಾರಸ್ ಮಾಡಿದೆ. – ವಿಜಯವಾಣಿಯ 19.12.2018ರ 9ನೇ ಪುಟದ ವರದಿ.

"ಸಹಕಾರ ಸಂಘಗಳಲ್ಲಿ ಪರಿಶಿಷ್ಟಜಾತಿ ಮತ್ತು ವರ್ಗದ ಪ್ರತಿಯೊಬ್ಬ ಷೇರುದಾರರಿಗೂ ಮತದಾನದ ಹಕ್ಕು ನೀಡಲು ಕ್ರಮಗೊಳ್ಳುವಂತೆ ಕರ್ನಾಟಕ ವಿಧಾನ ಮಂಡಳಿ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಶಿಫಾರಸ್ಸು ಮಾಡಿದೆ. ಸಮಿತಿ ಅಧ್ಯಕ್ಷ ಹೆಚ್.ಕೆ. ಕುಮಾರಸ್ವಾಮಿ ಮಂಗಳವಾರ ಸದನದಲ್ಲಿ ವರದಿ ಮಂಡಿಸಿದ್ದು ಸ್ಥಳೀಯ ಸಂಸ್ಥೆಗಳ ಮಾದರಿಯಲ್ಲಿಯೇ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳಲ್ಲಿ, ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳಿಗೆ ಮೀಸಲಾತಿ ಕಲ್ಪಿಸಲು ಸಹಕಾರ ಕಾನೂನಿಗೆ ತಿದ್ದುಪಡಿ ತರಬೇಕು ಎಂದು ಹೇಳಿದೆ. ಪ್ರಸ್ತುತ ಸಹಕಾರ ಸಂಘಗಳು ಮತ್ತು ಬ್ಯಾಂಕುಗಳ, ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಪರಿಶಿಷ್ಟರಿಗೆ ಮೀಸಲಾತಿ ಇರುವುದಿಲ್ಲ. ಹಾಗಾಗಿ ಸಹಕಾರ ಕಾನೂನಿಗೆ ತಿದ್ದುಪಡಿತಂದು ಮೀಸಲಾತಿ ಕಲ್ಪಿಸಬೇಕು ಎಂದು ಸಮಿತಿ ಅಭಿಪ್ರಾಯಪಟ್ಟಿದೆ."

ಸಹಕಾರ ಸಂಸ್ಥೆಗಳು ಸರ್ಕಾರಿ ಸಂಸ್ಥೆಗಳಲ್ಲ ಮತ್ತು ಸ್ಥಳೀಯ ಸಂಸ್ಥೆಗಳು ಸರ್ಕಾರದಿಂದ ಪೂರ್ಣ ಪ್ರಮಾಣದ ಹಣಕಾಸು ಪಡೆಯುವ ಸಂಸ್ಥೆಗಳು. ಸಹಕಾರ ಸಂಸ್ಥೆಗಳಿಗೆ ಸದಸ್ಯರು ಕೂಡಿಸಿದ ಹಣದ ಪೂರೈಕೆ ಅಗತ್ಯ. ಸಹಕಾರ ಸಂಸ್ಥೆಯ ಮೂಲ ಉದ್ದೇಶ, ಸಮಾನಮನಸ್ಕ ವ್ಯಕ್ತಿಗಳು ತಮ್ಮ ಅತ್ಯಲ್ಪ ಸಂಪನ್ಮೂಲ ಕ್ರೋಢೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗಾಗಿ ರಚಿಸಿಕೊಂಡ ಒಂದು ಸಂಸ್ಥೆ ಹಾಗೂ ಸದಸ್ಯರ ಅವಶ್ಯಕತೆ ಪೂರೈಸಲು ರಚಿಸಿಕೊಂಡ ಒಂದು ಸಂಸ್ಥೆ. ಇದರಲ್ಲಿ ಜಾತಿ ಆಧಾರದ ಮೇಲೆ ಸದಸ್ಯತ್ವ ನೀಡುವುದಿಲ್ಲ. ಇದಕ್ಕೆ ಪೂರಕವಾಗಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಕಲಂ.16 ಮತ್ತು 17ರಲ್ಲಿ ಸದಸ್ಯತ್ವಕ್ಕೆ ಅರ್ಹತೆ ಮತ್ತು ಅನರ್ಹತೆ ನಿಗದಿ ಪಡಿಸಿದೆ ಮತ್ತು ಮತ ನೀಡುವ ಹಕ್ಕನ್ನು ಕಲಂ.20ರಲ್ಲಿ ನಿಗದಿ ಪಡಿಸಿದೆ. ಕರ್ನಾಟಕ ಸೌಹಾರ್ದ ಕಾಯಿದೆಯ ಕಲಂ.20, 20ಎ ಮತ್ತು 20ಬಿ ನಲ್ಲಿ ಅವಕಾಶ ಕಲ್ಪಿಸಿದೆ. ಸೌಹಾರ್ದ ಕಾಯಿದೆ ಕಲಂ.4 (1)(ಬಿ)ರಲ್ಲಿ ಈ ಕೆಳಕಂಡಂತೆ ಸೇರಿಸಿದೆ.

"ಸಹಕಾರಿ ಮೂಲ ತತ್ವಗಳಿಗನುಸಾರವಾಗಿ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೂಲಕ ತನ್ನ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಪ್ರರೋಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸುತ್ತಿದ್ದ ಹೊರತು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸತಕ್ಕದ್ದಲ್ಲ."

ಇದರ ಅರ್ಥೈಸುವಿಕೆ ಎಂದರೆ, ಸದಸ್ಯರಾಗಲು ಆರ್ಥಿಕ ಬೆಳವಣಿಗೆ ಮುಖ್ಯವಾಗಬೇಕು. ಮಂಡಳಿ ಆಯ್ಕೆಯಲ್ಲಿ ಅರ್ಹ ಎಲ್ಲಾ ಸದಸ್ಯರಿಗೆ ಅಗತ್ಯವೆನಿಸಿದ ವ್ಯಕ್ತಿ ಪದಾಧಿಕಾರಿಯಾಗುತ್ತಾನೆ.

ಸರ್ಕಾರದಿಂದ ಸಹಾಯ ಧನ ಪಡೆಯಲಾರದ ಸಂಸ್ಥೆಗಳಲ್ಲಿ ನಿರ್ದೇಶಕತನದ ಮೀಸಲಾತಿ ಬಗ್ಗೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದಲ್ಲಿ ಇನ್ನೂ ಯಾವುದೇ ಅಂತಿಮ ತೀರ್ಪು ಹೊರಬಿದ್ದಿಲ್ಲ. ಆದರೆ ಏಳನೇ ಸಹಕಾರ ತತ್ವವನ್ನು ಸಾಮಾಜಿಕ ಕಳಕಳಿ ಎಂಬ ನೀತಿಗೆ ಎಲ್ಲಾ ವರ್ಗದ ಜನರಿಗೆ ಸಹಕಾರ ಸಂಸ್ಥೆಗಳಲ್ಲಿ ಅವಕಾಶ ಕಲ್ಪಿಸಬೇಕೆಂಬ ನೀತಿ ಪೂರಕವೆಂದರೂ, ಪದಾಧಿಕಾರಿಗಳನ್ನು ಮೀಸಲಿಡುವ ನೀತಿ, ನ್ಯಾಯಾಲಯದ ಪರಾಮರ್ಷೆಗೆ ಒಳಪಟ್ಟ ನಂತರ ಚಿಂತಿಸಬೇಕು ಅಥವಾ ಈ ಪ್ರಶ್ನೆಯನ್ನು ರಾಷ್ಟ್ರಪತಿಗಳ ಮುಖಾಂತರ ಶ್ರೇಷ್ಠ ನ್ಯಾಯಾಲಯದ ಅಭಿಪ್ರಾಯ ಕೇಳಲು ಪ್ರಸ್ತಾವನೆ ನೀಡಿ ಕ್ರಮಜರುಗಿಸುವುದು ಸೂಕ್ತವಲ್ಲವೇ?

97ನೇ ಸಂವಿಧಾನ ತಿದ್ದುಪಡಿಯಲ್ಲಿ ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ/ಪಂಗಡಕ್ಕೆ ವ್ಯಕ್ತಿಗತ ಸದಸ್ಯರೇ ಇರುವ ಸಹಕಾರ ಸಂಸ್ಥೆಗಳಲ್ಲಿ ಮೀಸಲಾತಿ ನಿಗದಿ ಪಡಿಸಿದೆ. ಆದರೆ ಪದಾಧಿಕಾರಿಗಳಲ್ಲಿ ಮೀಸಲಾಗಿ ಬಗ್ಗೆ ಉಲ್ಲೇಖಿಸಿಲ್ಲ. ಅಂದರೆ ರಾಜ್ಯ ಸರ್ಕಾರ ಕಾಯಿದೆ ರಚಿಸುವಾಗ ಪದಾಧಿಕಾರಿಗಳಿಗೆ ಮೀಸಲಾತಿ ನೀಡಲು ಸಂವಿಧಾನಾತ್ಮಕ ಅಡೆತಡೆಗಳಲ್ಲಿದಿದ್ದರೂ, ಸಹಕಾರ ಸಂಸ್ಥೆಗಳು ಸರ್ಕಾರದಿಂದಲೇ ನಡೆಯುತ್ತಿಲ್ಲ. ಆದ್ದರಿಂದ ಸರ್ಕಾರದ ಪ್ರತ್ಯಕ್ಷ/ಪರೋಕ್ಷ ಸಹಾಯ ಧನ ಪಡೆಯಲಾರದ ಸಹಕಾರ ಸಂಸ್ಥೆಗಳಿಗೆ ಪದಾಧಿಕಾರಿಗಳಲ್ಲಿ ಮೀಸಲಾತಿ ನೀಡುವ ಬಗ್ಗೆ ವಿಧಾನ ಮಂಡಳದ ಉಪಸಮಿತಿ ಶಿಫಾರಸ್ ಮಾಡಿರುವ ಬಗ್ಗೆ, ವಿಮರ್ಷೆ ಅವಶ್ಯಕ. ಈಗಾಗಲೇ ಹೇಳಿದಂತೆ, ಲೋಕ ಸಭೆ, ವಿಧಾನ ಸಭೆ, ಸ್ಥಳೀಯ ಸಂಸ್ಥೆಗಳು ಮತ್ತು ನಗರ ಸಭೆಗಳಲ್ಲಿ ಮಹಿಳೆಯರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿ ನೀಡಲು ಅವಕಾಶ ಕಲ್ಪಿಸಿದೆ. ಅದಕ್ಕೆ ಮೂಲ ಕಾರಣ ಈ ಸಂಸ್ಥೆಗಳೆಲ್ಲವೂ ಸರ್ಕಾರದ ಸಂಸ್ಥೆಗಳು ಮತ್ತು ಅವುಗಳ ನಿರ್ವಹಣೆಗೆ ಸರ್ಕಾರದಿಂದಲೇ ಹಣ ಖರ್ಚು ಮಾಡಲಾಗುತ್ತಿದೆ. ಈ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳು ಮತ್ತು ಮೀಸಲಾತಿಗೆ ಸಾರ್ವಜನಿಕರು ಪ್ರಶ್ನಿಸುವಂತಿಲ್ಲ. ಆದರೆ ಸಹಕಾರ ಸಂಸ್ಥೆಗಳಲ್ಲಿ ಪದಾಧಿಕಾರಿಗಳಲ್ಲಿ ಮೀಸಲಾತಿ ನೀಡಿದರೆ ಅದನ್ನು ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶ ಇದೆ. ಸಹಕಾರ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳಿಗೆ ಸಮಾನಾಂತರವಾಗಿ ನೋಡತಕ್ಕದ್ದಲ್ಲ. ಈ ಸಂಸ್ಥೆಗಳು ಸಮಾನ ಮನಸ್ಕರು, ತಮ್ಮ ಅತ್ಯಲ್ಪ ಸಂಪನ್ಮೂಲವನ್ನು ಕ್ರೋಢೀಕರಿಸಿ, ತಮ್ಮ ಆರ್ಥಿಕ ಬೆಳವಣಿಗೆಗೆ ರಚಿಸಿಕೊಂಡ ಸಂಸ್ಥೆಗಳು. ಎಲ್ಲಾ ಸದಸ್ಯರನ್ನು ಸಮಾನಾಂತರವಾಗಿ ನೋಡಬೇಕಾದ ಕರ್ತವ್ಯ ಮಂಡಳಿ ಮತ್ತು ಸಾಮಾನ್ಯ ಸಭೆಯ ಜವಾಬ್ದಾರಿ.

ಈ ಉಪಸಮಿತಿಯ ಶಿಫಾರಸ್ ರಾಜಕೀಯ ಲಾಭ ಪಡೆಯಲು ಮತ್ತು ಆವರ್ಗದ ಸದಸ್ಯರನ್ನು ಓಲೈಸಲು ರೂಪಿಸಿದ ನೀತಿ. ಈಗ ಚುನಾವಣೆ ನಡೆಯುವ ಪದ್ಧತಿಯಲ್ಲಿ ಒಂದು ಸಹಕಾರ ಸಂಸ್ಥೆಯ ಸದಸ್ಯರು ತಮ್ಮ ತಮ್ಮಲ್ಲಿಯೇ ಆಯ್ಕೆ ಮಾಡುವ ಬದಲು, ಎಲ್ಲಾ ಸದಸ್ಯರೂ ಕನಿಷ್ಠ 13 ಸದಸ್ಯರ ಮಂಡಳಿ, ರಚನೆಗೆ ಮತ ಚಲಾಯಿಸುತ್ತಾರೆ. ಮಹಿಳೆಯರು/ಪ.ಜಾ ಮತ್ತು ಪಂಗಡ ಹಾಗೂ ಹಿಂದುಳಿದ ವರ್ಗದ ಸದಸ್ಯರಿದ್ದರೂ, ಅವರಲ್ಲಿರೊ 13 ಮಂಡಳಿ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಒಬ್ಬ ಸದಸ್ಯನಿಗೆ ಒಂದು ಮತ ಎಂಬ ಸಹಕಾರ ತತ್ವಕ್ಕೆ ವಿರುವುದಾಗಿ 13 ಮತ ಚಲಾಯಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಪದಾಧಿಕಾರಿಗಳಲ್ಲಿ ಮೀಸಲಾತಿ ನೀಡಿದರೆ ಅದರಲ್ಲೂ

ಗ್ರಾಮಾಂತರ ಪ್ರದೇಶದಲ್ಲಿ, ದಿನನಿತ್ಯ ಸಂಘರ್ಷಗಳು ಏರ್ಪಟ್ಟು – ಸಹಕಾರ ಸಂಸ್ಥೆ ನಡೆಯದಂತೆ ಮಾಡಲು ಅವಕಾಶ ಇದೆ. ಸ್ಥಳೀಯ ಸಂಸ್ಥೆಗಳು ಶೇ.100 ರಷ್ಟು ಸರ್ಕಾರದ ಹಣದಿಂದ ನಡೆಯುವ ಸಂಸ್ಥೆಗಳು. ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿದ್ದಂತೆ ಮೀಸಲಾತಿ ನೀಡಲು ಅವಕಾಶ ಇದೆ. ಇದು ಸಂವಿಧಾನದಲ್ಲಿ ನಿಗದಿ ಪಡಿಸಿದೆ. ಅದಕ್ಕೆ ಕೇಂದ್ರ ಸರ್ಕಾರ ಮೀಸಲಾತಿ ಪ್ರಮಾಣ, ಅದರಲ್ಲಿ ಮಹಿಳೆಯರಿಗಾಗಿ, ಹೆಚ್ಚಿಸಲು ಪ್ರಯತ್ನ ಈವರೆವಿಗೂ ಸಫಲವಾಗಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರ ಮೀಸಲಾತಿ ನೀಡಿದೆ, ಅದರಂತೆ 73/74ರ ಸಂವಿಧಾನ ತಿದ್ದುಪಡಿ ನಂತರ, ಇದು ಎಲ್ಲಾ ರಾಜ್ಯಗಳಲ್ಲೂ ಜಾರಿಯಾಗಿದೆ. ಆರೋಪ ಇರುವುದು ಮಹಿಳೆಯರಿಗೆ ಮೀಸಲಿಟ್ಟಿದ್ದರೂ ರಾಜ್ಯಭಾರ ಅವರ ಗಂಡಂದಿರೇ ಮಾಡುತ್ತಾರೆಂದು, ಅಥವಾ ಅವರ ಗಂಡಂದಿರ ನಿಯಂತ್ರಣದಲ್ಲಿ ಕೆಲಸ ಮಾಡುತ್ತಾರೆಂಬ ಆರೋಪ ಇದೆ.

ಇಲ್ಲಿ ಪರಿಗಣಿಸಬೇಕಾದ ಪ್ರಮುಖ ಅಂಶವೆಂದರೆ, ಸಹಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಸದಸ್ಯರ ಮತದಾನದ ಹಕ್ಕನ್ನು ನೀಡುವ ಬಗ್ಗೆ ಮತ್ತು ಪದಾಧಿಕಾರಿಗಳ ಆಯ್ಕೆಯಲ್ಲಿ ಮೀಸಲಾತಿ ನೀಡುವ ಬಗ್ಗೆ. ಸಹಕಾರ ಸಂಸ್ಥೆಗಳು ಸರ್ಕಾರದ ಸಂಸ್ಥೆಗಳಲ್ಲ. ಕೃಷಿ ಪತ್ತಿನ ಮತ್ತು ಸಂಸ್ಕರಣಾ ಸಂಸ್ಥೆಗಳನ್ನು ಹೊರತು ಪಡಿಸಿ, ಸರ್ಕಾರದ ಸಹಾಯ ಧನ ಅತಿ ಕಡಿಮೆ ಪ್ರಮಾಣ ಅಥವಾ ಇಲ್ಲವೇ ಇಲ್ಲವೆಂದು ತಿಳಿಯಬಹುದು. ಸಾಮಾಜಿಕ ನ್ಯಾಯ ತತ್ವವೆಂದು ಈ ಹಿಂದೆ ಶ್ರೀ ಹೆಚ್.ವಿಶ್ವನಾಥ್ ಮತ್ತು ಶ್ರೀ ಮಲ್ಲಿಕಾರ್ಜುನ ಖರ್ಗೆ ಸಹಕಾರಿ ಸಚಿವರಾಗಿದ್ದಾಗ ಪದಾಧಿಕಾರಿಗಳಲ್ಲಿ ಮೀಸಲಾತಿ ಬಗ್ಗೆ ಪ್ರಯತ್ನಿಸಿದರೂ ಅದು ಕಾರ್ಯ ಸಾಧ್ಯವಾಗಲಿಲ್ಲ. ಅದೇ ಪ್ರಯತ್ನದ ಮುಂದುವರಿದ ಭಾಗವೇ, ಈಗ ಈ ಸಮಿತಿಯ ವರದಿ.

ಪ್ರತಿಯೊಬ್ಬ ಸಹಕಾರ ಸಂಘದ ಸದಸ್ಯನಿಗೆ ಮತದಾನದ ಹಕ್ಕು ಪ್ರಾಪ್ತವಾಗುವುದು ಕೆಲವು ಷರತ್ತುಗಳನ್ನು ಪೂರೈಸಿದ್ದರೆ ಮಾತ್ರ ಅವುಗಳಲ್ಲಿ ಪ್ರಮುಖವಾಗಿ, ಸದಸ್ಯ ಸುಸ್ತಿದಾರನಿರತಕ್ಕದ್ದಲ್ಲ. ಎರಡನೆಯದಾಗಿ ಸಂಘದಲ್ಲಿ ಕನಿಷ್ಟ ಪ್ರಮಾಣದ ವ್ಯವಹಾರ ಭಾಗವಹಿಸಿರಬೇಕು. ಮೂರನೆಯದಾಗಿ ಕನಿಷ್ಟ ಪ್ರಮಾಣದ ಸಾಮಾನ್ಯ ಸಭೆಗಳ ಹಾಜರಾತಿ. ಈ ಅರ್ಹತೆಗಳನ್ನು ಗಳಿಸಿದ್ದರೆ ಮಾತ್ರ ಮತದಾನದ ಹಕ್ಕು ಪ್ರಾಪ್ತವಾಗುತ್ತದೆ. ಇದರಲ್ಲಿ ಮೀಸಲಾತಿ ವ್ಯಕ್ತಿಗಳಿಗೆ ವಿನಾಯ್ತಿ ನೀಡಲು ಅವಕಾಶವಿಲ್ಲ. ಅಂದರೆ ಪ್ರತಿಯೊಬ್ಬ ಸದಸ್ಯನಲ್ಲಿ ಮೇಲ್ಕಂಡ ಅರ್ಹತೆಗಳಿಸಿದರೆ, ಮತದಾನದ ಹಕ್ಕು ಪಡೆಯುತ್ತಾನೆ. ಇಲ್ಲವಾದರೆ ಮುಂದಿನ ಮೂರು ವರ್ಷಗಳು ಮತದಾನದ ಹಕ್ಕನ್ನು ಕಳೆದುಕ್ಕೊಳ್ಳುವುದರ ಜೊತೆಗೆ, ಸದಸ್ಯತ್ವ ಕಳೆದುಕ್ಕೊಳ್ಳುವ ಅವಕಾಶವನ್ನು ಕಾಯಿದೆಯಲ್ಲಿ ಸೇರಿಸಿದೆ.

ಈ ಹಿಂದೆ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಗೆ ಕಲಂ.29 ರನ್ವಯ ಮೂವರು ವ್ಯಕ್ತಿಗಳನ್ನು ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಇದರ ಜೊತೆಗೆ ಪ್ರತಿಯೊಂದು ಸಹಕಾರ ಸಂಘದ ಉಪನಿಯಮಗಳಲ್ಲಿ ಮೂರು ಸ್ಥಾನಗಳನ್ನು ಮೀಸಲಿಡಲು ಅವಕಾಶ ಕಲ್ಪಿಸಿತ್ತು. ಸರ್ಕಾರ ನಾಮ ನಿರ್ದೇಶನ ಮಾಡುವಾಗ ಒಂದು ಸ್ಥಾನ ಪರಿಶಿಷ್ಟ ಜಾತಿ/ಪಂಗಡ ಮತ್ತೊಂದು ಸ್ಥಾನ ಮಹಿಳೆಯರಿಗಾಗಿ ಮೀಸಲಿಡಲು ಅವಕಾಶವಿತ್ತು. ಈ ನಾಮ ನಿರ್ದೇಶನವನ್ನು 1998ರಲ್ಲಿ ಕಿತ್ತುಹಾಕಲಾಯಿತು ಮತ್ತು ಪ್ರತಿಯೊಂದು ಸಹಕಾರ ಸಂಘದ ಉಪನಿಯಮಗಳಲ್ಲಿ, ವ್ಯಕ್ತಿಗತ ಸದಸ್ಯರೇ ಇರುವಲ್ಲಿ, ಆದು ಸ್ಥಾನಗಳನ್ನು ಮೀಸಲಿಡುವಂತೆ ಕಲಂ.28ಎ ಮತ್ತು ಸೌಹಾರ್ದ ಕಾಯಿದೆಯಲ್ಲಿ ಆರು ಸ್ಥಾನ ಮೀಸಲಿಡುವಂತೆ ಅವಕಾಶ ಕಲ್ಪಿಸಿದೆ. ಸರ್ಕಾರದ ಸಹಾಯ ಧನ ಪಡೆಯದೇ ಇದ್ದರೂ, ಆರು ಸ್ಥಾನಗಳು ಮೀಸಲಿಡಬೇಕು. ಅಂದರೆ ಎರಡು ಸ್ಥಾನ ಮಹಿಳೆಯರಿಗಾಗಿ, ಎರಡು ಸ್ಥಾನ ಹಿಂದುಳಿದ ವರ್ಗ, ಒಂದು ಸ್ಥಾನ ಪರಿಶಿಷ್ಟ ಜಾತಿ ಮತ್ತು ಮತ್ತೊಂದು ಸ್ಥಾನ ಪರಿಶಿಷ್ಟ ವರ್ಗಕ್ಕೆ ಮೀಸಲಿಡಲಾಗಿದೆ.


ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳು ಮೀಸಲಾತಿ ಬಗ್ಗೆ ಮತ್ತು ಸರ್ಕಾರದ ಸಹಾಯ ಧನ ಪಡೆದ ಸಹಕಾರಿ ಸಂಸ್ಥೆಗೆ ಅನ್ವಯವಾಗುವಂತೆ ತೀರ್ಪಿತ್ತಿದ್ದರೂ – ಎಲ್ಲಾ ಸಹಕಾರ ಸಂಘಗಳು ಮೀಸಲಾತಿ ಅನ್ವಯಿಸಿಕೊಳ್ಳುತ್ತಿವೆ. ಇದನ್ನು ಸ್ಪಷ್ಟವಾಗಿ ಪ್ರಶ್ನಿಸಿಲ್ಲ. ನ್ಯಾಯಾಲಯ ತೀರ್ಪು ನೀಡುವ ತನಕ ಕನಿಷ್ಟ 13 ಸಂಖ್ಯೆಯ ನಿರ್ದೇಶಕರು ಪ್ರಾಥಮಿಕ ಸಂಸ್ಥೆಗಳಲ್ಲಿ ಇದ್ದರೆ ಆರು ಸ್ಥಾನಗಳು ಮೀಸಲಿರತಕ್ಕದ್ದು. ಅದರಲ್ಲಿ ಪ್ರಮುಖವಾಗಿ ಪರಿಶಿಷ್ಠ ಜಾತಿಗೆ ಒಂದು ಸ್ಥಾನ ಮತ್ತು ಪರಿಶಿಷ್ಟ ಪಂಗಡಕ್ಕೆ ಒಂದು ಸ್ಥಾನ ಮೀಸಲಿಡತಕ್ಕದ್ದು. (ಅಂತಹ ಸದಸ್ಯರು ಇದ್ದರೆ ಮೀಸಲಾತಿ ಎಂದು ಸ್ಪಷ್ಟ ಪಡಿಸಲಾಗಿದೆ) ಆದರೆ ಆ ಸ್ಥಾನಗಳನ್ನು ಬೇರೆ ವರ್ಗಕ್ಕೆ ವರ್ಗಾಯಿಸಲು ಅವಕಾಶವಿಲ್ಲ.

ಈ ವಿಮರ್ಷೆಯ ಉದ್ದೇಶ, ಮೀಸಲಾತಿ ವಿರೋಧ ಮಾಡುವ ಉದ್ದೇಶದಿಂದಲ್ಲಿ, ವ್ಯಕ್ತಿಗತ ಸದಸ್ಯರಿದ್ದಲ್ಲಿ ಮೀಸಲಾತಿ ಸಾಧ್ಯ. ಆದರೆ ಅಂತಹ ಸಂಸ್ಥೆಗಳಲ್ಲಿ ಸರ್ಕಾರದ ಭಾಗ ಇಲ್ಲವೆಂದೇ ಹೇಳಬೇಕು. 13 ಸಾವಿರ ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದ ಪಾಲು ಬಂಡವಾಳವಿಲ್ಲ. ಅದರಂತೆ ಕೃಷಿಯೇತರ, ಗೃಹ ನಿರ್ಮಾಣ, ಗಳಂತಹ ಸಂಸ್ಥೆಗಳಲ್ಲಿ ಸರ್ಕಾರದ ಪಾಲು ಇಲ್ಲ. ಇರುವುದು ಕೃಷಿ ಪತ್ತಿನ ಸಂಸ್ಥೆಗಳು, ಗ್ರಾಹಕ, ಮಾರಾಟ, ಸಂಸ್ಥೆಗೆ ಗುಡಿಕೈಗಾರಿಕೆ, ಮತ್ತಿತರ ಸಂಸ್ಥೆಗಳಲ್ಲಿ ಸರ್ಕಾರದ ಪಾಲು ಬಂಡವಾಳವಿದ್ದರೂ ಅವುಗಳ ಸಂಖ್ಯೆ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಸಹಕಾರ ಸಂಸ್ಥೆಗಳ ಆಡಳಿತದಲ್ಲಿ ಪದಾಧಿಕಾರಿಗಳಲ್ಲಿ ಮೀಸಲಾತಿ ಸೂಕ್ತ ಎಂಬುದನ್ನು, ಸಮಿತಿ ನೀಡಿದ ವರದಿ ಪರಿಶೀಲಿಸುವ ಸಂದರ್ಭದಲ್ಲಿ ವಿಮರ್ಷೆ ಅವಶ್ಯಕ.

ಇದಕ್ಕೆ ಪರಿಹಾರವೆಂದರೆ, ಸರ್ಕಾರ ಶೇ.50ಕ್ಕಿಂತ ಹೆಚ್ಚು ಪಾಲುಬಂಡವಾಳ / ಬಂಡವಾಳ ಹೂಡಿದ್ದರೆ, ಅಂತಹ ಸಂಸ್ಥೆಗಳಲ್ಲಿ ಮಂಡಳಿಯ ಪದಾಧಿಕಾರಿಗಳ ಸ್ಥಾನಕ್ಕೆ ಮೀಸಲಾತಿ ನೀಡಲು ಅವಕಾಶ ಕಲ್ಪಿಸಬಹುದು. ಕರ್ನಾಟಕ ಸೌಹಾರ್ದ ಕಾಯಿದೆಯಡಿ ನೋಂದಾಯಿತ ಸಹಕಾರಿಗೆ ಈ ಮೀಸಲಾತಿ ಅನ್ವಯಿಸಲಾಗದು, ಏಕೆಂದರೆ ಆ ಸಹಕಾರಿಗಳಿಗೆ ಸರ್ಕಾರದ ಪ್ರತ್ಯಕ್ಷ / ಪರೋಕ್ಷ ಸಹಾಯ ಧನ ಪಡೆಯಲು ಅವಕಾಶವಿಲ್ಲದೇ ಇರುವುದರಿಂದ. ಇಲ್ಲವಾದರೆ ಭಾರತ ಸಂವಿಧಾನಕ್ಕೆ ತಿದ್ದುಪಡಿ ತಂದು. ಯಾವುದೆ ಕಾಯಿದೆಯಡಿ ನೋಂದಾಯಿತ ಸಂಸ್ಥೆಗಳ ಪದಾಧಿಕಾರಿಗಳ ಆಯ್ಕೆಯಲ್ಲಿ ಮೀಸಲಾತಿ ಕಲ್ಪಿಸಲು ಅವಕಾಶ ನೀಡಬೇಕು. ಇದಕ್ಕೆ, ಅವಶ್ಯಕವಿದ್ದರೆ, ರಾಷ್ಟ್ರಪತಿಗಳ ಮುಖಾಂತರ ಶ್ರೇಷ್ಠ ನ್ಯಾಯಾಲಯಕ್ಕೆ ಒಂದು ಪ್ರಸ್ತಾವನೆ/ಮನವಿ ರವಾನಿಸಿ ಅಭಿಪ್ರಾಯ ಕೇಳಿ, ಆ ಹಿಂಬರಹದ ಆಧಾರದ ಮೇಲೆ, ಪದಾಧಿಕಾರಿಗಳ ಆಯ್ಕೆಯಲ್ಲಿ ಮೀಸಲಾತಿ ಕಲ್ಪಿಸುವುದು, ಆ ವರ್ಗದ ಸದಸ್ಯರಿಗೆ ಸಂವಿಧಾನಾತ್ಮಕ ಅಧಿಕಾರ ನೀಡಿದಂತಾಗುತ್ತದೆ ಮತ್ತು ಇದು ಒಂದು ಶಾಶ್ವತ ಪರಿಹಾರವಾಗುತ್ತದೆ.

# ಸೇವೆ ಸಲ್ಲಿಸುತ್ತಿರುವ ಸಹಕಾರಿಯಲ್ಲಿಯ ಸಿಬ್ಬಂದಿಯು ಅದೇ ಸಹಕಾರಿಯ ಸದಸ್ಯನಾಗಬಹುದೇ?

▸▸ **ಭಾವುರಾವ್ ಕುಲಕರ್ಣಿ,** ವ್ಯವಸ್ಥಾಪಕರು, ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು.



ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ತೊಂದರೆ ನಿವಾರಣೆಯನ್ನು ಕುರಿತು ಚರ್ಚಿಸಲು ಸಂಯುಕ್ತ ಸಹಕಾರಿಯು ಗುರುವಾರ, ಜನವರಿ 10, 2019 ರಂದು ಬೆಂಗಳೂರಲ್ಲಿ ಕಾರ್ಯಯೋಜನಾ ಸಭೆಯನ್ನು ಆಯೋಜಿಸಿ, ಸಹಕಾರಿಗಳು ಸಮಸ್ಯೆಗಳನ್ನು ಹೇಳಿಕೊಳ್ಳಲು ಉತ್ತಮ ವೇದಿಕೆಯನ್ನು ಕಲ್ಪಿಸಿತ್ತು. ಮತ್ತು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಆದಾಯ ತೆರಿಗೆ/ ಇಲಾಖೆಯಿಂದ ಆಗುತ್ತಿರುವ ತೊಂದರೆಗಳನ್ನು ನಿವಾರಣೆಗೊಳಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಮಾಹಿತಿಯನ್ನು ನೀಡಿದರು. ಸಂಯುಕ್ತ ಸಹಕಾರಿಯ ಪ್ರಯತ್ನಗಳು ಶೀಘ್ರ ಕಾರ್ಯ ರೂಪಕ್ಕೆ ಬರಲೆಂದು ಆಶೀಸೋಣ ಮತ್ತು ಸಂಯುಕ್ತ ಸಹಕಾರಿ ಆಡಳಿತ ಮಂಡಳಿಗೆ ಧನ್ಯವಾದಗಳನ್ನು ತಿಳಿಸೋಣ.

ಇದೇ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರೊಬ್ಬರು, ದಿನಿತ್ಯದ ವ್ಯವಹಾರಕ್ಕೆ ಸಂಬಂಧಿಸಿದ ಪ್ರಶ್ನೆಯೊಂದನ್ನು ಸಭೆಯ ಮುಂದಿಡುತ್ತಾರೆ. ಸಹಕಾರಿಯಲ್ಲಿ ಸೇವೆಯಲ್ಲಿರುವ ಸಿಬ್ಬಂದಿಗಳಿಗೆ ಸಾಲ ಕೊಡಲು ಆಗುತ್ತಿಲ್ಲ ಕಾರಣ ಅವರು ಸಹಕಾರಿಯ ಸದಸ್ಯರಲ್ಲ, ಸದಸ್ಯೇತರರೊಂದಿಗೆ ವ್ಯವಹರಿಸುವುದಕ್ಕೆ ಮತ್ತು ಸಿಬ್ಬಂದಿಗಳನ್ನು ಸಹಕಾರಿಯ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿಲ್ಲವೆಂದು ಬೇಸರ ವ್ಯಕ್ತಪಡಿಸುತ್ತ ಮುಂದುವರಿದು ಒಂದು ವೇಳೆ ಸಿಬ್ಬಂದಿಗಳು ಸದಸ್ಯರಾದರೆ, ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಸ್ಪರ್ಧಿಸಿ ನಿರ್ದೇಶಕ ಅಥವಾ ಪದಾಧಿಕಾರಿಯಾಗಿ ಚುನಾಯಿತರಾದರೆ ಹೇಗೆ ಎನ್ನುವ ಆತಂಕವು ಅವರ ಪ್ರಶ್ನೆಯಲ್ಲಿದೆ.

ಈ ಪ್ರಶ್ನೆಯಲ್ಲಿ ಸಿಬ್ಬಂದಿಗಳಿಗೆ ಸಾಲ ನೀಡಬೇಕೆನ್ನುವ ಕಾಳಜಿಯೂ ಇದೆ ಮತ್ತು ಸಿಬ್ಬಂದಿಗಳು ಸಹಕಾರಿಯ ಆಡಳಿತ ಮಂಡಳಿಯನ್ನು ಸೇರಿದರೆ ಹೇಗೆ ಎನ್ನುವ ಆತಂಕವು ಇದೆ. ಇನ್ನೂ ಆದಾಯ ತೆರಿಗೆ ಇಲಾಖೆಯವರಿಗೆ ಸೌಹಾರ್ದ ಸಹಕಾರಿಗಳ ಬಗ್ಗೆ ಅದೇನು ಪ್ರೀತಿಯೋ ಕಾಳಜಿಯೋ ಒಂದೂ ತಿಳಿಯುತ್ತಿಲ್ಲ. ಅವರೂ, ಸಿಬ್ಬಂದಿಗಳು ಸಹಕಾರಿಯ ಸದಸ್ಯರಲ್ಲ ಹೀಗಾಗಿ ಸಿಬ್ಬಂದಿಗಳಿಗೆ ನೀಡಿದ ಸಾಲದ ಮೇಲಿನ ಬಡ್ಡಿಗೆ ಆದಾಯ ತೆರಿಗೆ ಪಾವತಿಸಬೇಕೆಂದು ತಕರಾರು ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ.

ಈ ಮೂಲಕ, ಮೇಲಿನ ಪ್ರಶ್ನೆಗಳಿಗೆ ಸೂಕ್ತವಾದ ಮತ್ತು ಸಮಂಜಸವಾದ ಉತ್ತರವನ್ನು ಈ ಕೆಳಗಿನಂತೆ ಕಂಡುಕೊಳ್ಳೋಣವೇ?. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ, ಸಿಬ್ಬಂದಿಗಳನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳುವ ಅಥವಾ ನಿರ್ಬಂಧಿಸುವ ಬಗ್ಗೆ ಪ್ರತ್ಯೇಕವಾದ ಯಾವುದೇ ಸ್ಪಷ್ಟ ಉಲ್ಲೇಖವಿಲ್ಲ. ಕಾಯ್ದೆಯಲ್ಲಿ ಉಲ್ಲೇಖವಿಲ್ಲವೆಂದರೆ ಅಂಥ ವಿಷಯಗಳನ್ನು ನಿರ್ಬಂಧಿಸಲಾಗಿದೆ ಎಂದರ್ಥವಲ್ಲ. ಹಾಗಂತ ಪ್ರತಿಯೊಂದು ವಿಷಯಗಳನ್ನು ಕಾಯ್ದೆಯಲ್ಲಿ ಸೇರಿಸಲೂ ಆಗುವುದಿಲ್ಲ. ಇಂಥ ಸಂದರ್ಭದಲ್ಲಿ (When Act is Silent) ಸ್ಪಷ್ಟ ಉಲ್ಲೇಖವಿರದ ವಿಷಯಗಳ ಬಗ್ಗೆ ಕಾಯ್ದೆಯನ್ನು ಸಕಾರಾತ್ಮಕವಾಗಿ ಬಳಸಿಕೊಳ್ಳಬಹುದೆಂದು ಕಾನೂನು ತಜ್ಞರ ಅಭಿಪ್ರಾಯವಾಗಿದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ. 20ರಲ್ಲಿ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದಾದ ಮತ್ತು ಮುಂದುವರೆಸಬಹುದಾದ ವ್ಯಕ್ತಿಗಳು ಮತ್ತು ಅನರ್ಹತೆಗಳನ್ನು ಹೇಳಿದ್ದಾರೆ. ಮುಂದುವರಿದು, ಕಲಂ.20(1)(ಸಿ)ಯಲ್ಲಿ, "ಅವನು ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಅಂಥ ಇತರ ಷರತ್ತುಗಳನ್ನು ಪೂರೈಸದಿದ್ದಲ್ಲಿ, ಸಹಕಾರಿಯ ಸದಸ್ಯನನ್ನಾಗಿ ಸೇರಿಸಿಕೊಳ್ಳತಕ್ಕದ್ದಲ್ಲ" ಎಂದಿದೆ. ಅಂದರೆ, ಯಾವನೇ ವ್ಯಕ್ತಿಯನ್ನು ಸದಸ್ಯನನ್ನಾಗಿ ಸೇರಿಸಿಕೊಳ್ಳಲು ಕಾಯ್ದೆಯಲ್ಲಿರುವ ಉಪಬಂಧಗಳಿಗನುಗುಣವಾಗಿ, ಪೂರಕವಾಗಿ, ಕಾಯ್ದೆಯ ಆಶಯಗಳು ಉಲ್ಲಘಂನೆಯಾಗದ ರೀತಿಯಲ್ಲಿ ಇತರೆ ಷರತ್ತುಗಳನ್ನು ಸಹಕಾರಿಯ ಉಪವಿಧಿಯಲ್ಲಿ ನಿಗದಿಪಡಿಸಲು ಕಾಯ್ದೆಯಲ್ಲಿಯೇ ಅವಕಾಶ ಕಲ್ಪಿಸಿದಂತಾಯಿತಲ್ಲವೇ?. ಹೀಗಾಗಿ, ಪ್ರತಿಯೊಂದು ಸಹಕಾರಿಯ ಉಪವಿಧಿಯಲ್ಲಿ ಕಾಯ್ದೆಯ ಕಲಂ.20ಕ್ಕೆ ಪೂರಕವಾಗಿ ಒಂದು ಕಲಂ ಇದ್ದೇ ಇರುತ್ತದೆ. ಅದರಲ್ಲಿ "ಸಹಕಾರಿಯ ಸಿಬ್ಬಂದಿಯೂ ಸದಸ್ಯನಾಗಬಹುದು" ಎನ್ನುವ ಷರತ್ತನ್ನು ಸೇರ್ಪಡೆ ಮಾಡಿಕೊಳ್ಳಬೇಕು.

ಸಾಮಾನ್ಯವಾಗಿ ಎಲ್ಲಾ ಸಹಕಾರಿಗಳಲ್ಲಿ ಸಿಬ್ಬಂದಿಗಳಿಗೆ ಸಾಲ ನೀಡುವ ವ್ಯವಸ್ಥೆ ಇರುತ್ತದೆ. ಇದ್ದರು ಸರಿ ಇಲ್ಲದ್ದಿದ್ದರೂ ಸರಿ. ವೇತನ ಪಾವತಿಗಾಗಿ ಉಳಿತಾಯ ಖಾತೆ ಇರುತ್ತದೆ. ಕೆಲವೊಂದು ಸಹಕಾರಿಗಳಲ್ಲಿ ಸಿಬ್ಬಂದಿಗಳಿಂದ ಭದ್ರತಾ ಠೇವಣಿ ಪಡೆಯುತ್ತಾರೆ. ಈ ರೀತಿಯ ಠೇವಣಿ ವ್ಯವಹಾರಗಳೂ ಸದಸ್ಯರೊಂದಿಗಿರಬೇಕಾಗುತ್ತದೆ. ಹೀಗಾಗಿ ಸಿಬ್ಬಂದಿಗಳೂ ಸಹಕಾರಿಯ ಸದಸ್ಯರಾಗಿರಬೇಕಾದುದು ಕಡ್ಡಾಯವಾಗುತ್ತದೆ.

ಇನ್ನು ಸಿಬ್ಬಂದಿಯು ಸಹಕಾರಿಯ ಸದಸ್ಯನಾದ ಮೇಲೆ ಸುಮ್ಮನಿರುತ್ತಾನಾ?. ಅವನು ಸಹಕಾರಿಯ ಚುನಾವಣೆಯಲ್ಲಿ ಸ್ಪರ್ಧಿಸಿ ಆಡಳಿತ ಮಂಡಳಿಯ ಸದಸ್ಯನಾದರೆ ಹೇಗೆ ಎನ್ನುವ ಆತಂಕ!. ಹೌದು, ಸಿಬ್ಬಂದಿಯೂ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯನಾಗುವ ಸಾಧ್ಯತೆಗಳು ಇವೆ. ಹಾಗಾದರೆ, ಸಿಬ್ಬಂದಿಯು ಸಹಕಾರಿಯ ಆಡಳಿತ ಮಂಡಳಿಯ ಸದಸ್ಯನಾಗದಂತೆ ತಡೆಯುವುದು ಹೇಗೆ? ಈ ಸಮಸ್ಯೆಗೂ ಕಾಯ್ದೆಯಲ್ಲಿ ಅವಕಾಶವಿದೆ!.

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ.25ರಲ್ಲಿ ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆಗಳನ್ನು ಹೇಳಿದ್ದಾರೆ. ಮುಂದುವರಿದು, ಕಲಂ.25(1)(ಬಿ)ಯಲ್ಲಿ, "ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಇತರ ಯಾವುವೇ ಅನರ್ಹತೆಗಳಿಗೆ ಗುರಿಯಾಗಿದ್ದರೆ – ಅಂಥ ವ್ಯಕ್ತಿಯು ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು" ಎಂದಿದೆ.

ಮೇಲೆ ಕಲಂ.20ರ ಕುರಿತು ಚರ್ಚಿಸಿದ ಸಂಗತಿಗಳೇ ಕಲಂ.25ಕ್ಕೆ ಹೊಂದಾಣಿಕೆಯಾಗುವುದರಿಂದ ಅವೇ ಅಂಶಗಳನ್ನು ಅಳವಡಿಸಿಕೊಳ್ಳುವುದು. ಪ್ರತಿಯೊಂದು ಸಹಕಾರಿಯ ಉಪವಿಧಿಯಲ್ಲಿ ಕಾಯ್ದೆಯ ಕಲಂ.25 ಕ್ಕೆ ಪೂರಕವಾಗಿ ಒಂದು ಕಲಂ ಇದ್ದೇ ಇರುತ್ತದೆ. ಅದರಲ್ಲಿ "ಸಹಕಾರಿಯ ಹಾಲಿ ಮತ್ತು ಮಾಜಿ ಸಿಬ್ಬಂದಿಯಾಗಿರತಕ್ಕದ್ದಲ್ಲ" ಎನ್ನುವ ಷರತ್ತನ್ನು ಸೇರ್ಪಡೆ ಮಾಡಿಕೊಳ್ಳಬೇಕು. ಮುಂದುವರೆದು, "ಯಾವುದೇ ಸೌಹಾರ್ದ ಸಹಕಾರಿಯ ಅಥವಾ ಸಹಕಾರ ಸಂಘಗಳ ಹಾಲಿ ಅಥವಾ ಮಾಜಿ ಸಿಬ್ಬಂದಿಯಾಗಿರತಕ್ಕದ್ದಲ್ಲ" ಎನ್ನುವ ಷರತ್ತನ್ನೂ ಸೇರ್ಪಡೆ ಮಾಡಿಕೊಳ್ಳಬಹುದು. ಈ ಮೂಲಕ ಸಿಬ್ಬಂದಿಯನ್ನು ಸಹಕಾರಿಯ ಆಡಳಿತ ಮಂಡಳಿಯ ಸದಸ್ಯನಾಗದಂತೆ ಅನರ್ಹತೆಗೆ ಗುರಿಪಡಿಸಿದಂತಾಯಿತಲ್ಲವೇ? ಸಿಬ್ಬಂದಿಯು ಸಹಕಾರಿಯ ಆಡಳಿತ ಮಂಡಳಿಯ ಸದಸ್ಯನಾದರೆ ಹೇಗೆ? ಎನ್ನುವ ಪ್ರಶ್ನೆಗೆ ಉತ್ತರ ದೊರಕಿದಂತಾಯಿತ್ತಲ್ಲವೇ!.

**(ಇದು ಲೇಖಕರ ವೈಯಕ್ತಿಕ ಅಭಿಪ್ರಾಯ. ಸದರಿ ವಿಷಯಕ್ಕೆ ಬೇರೆ ಆಯಾಮಗಳು, ಸಾಧ್ಯತೆಗಳೂ ಇರಬಹುದು. ಆದ ಕಾರಣ, ಈ ವಿಷಯವನ್ನು ತಜ್ಞರೊಂದಿಗೆ ಚರ್ಚಿಸಿ ಅವರ ಅಭಿಪ್ರಾಯವನ್ನು ಪಡೆದು, ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅಗತ್ಯ ಮಾರ್ಪಾಡುಗಳೊಂದಿಗೆ, ಸಾಮಾನ್ಯ ಸಭೆಯಲ್ಲಿ ಮಂಡಿಸಿ ಉಪವಿಧಿ ತಿದ್ದುಪಡಿ ಮಾಡಿಕೊಳ್ಳಬಹುದು.)**

# ಸಾವಯುವ ಕೃಷಿ ಮತ್ತು ಶೂನ್ಯ ಬಂಡವಾಳದ ಕೃಷಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

**ಸಂಯುಕ್ತ ಸಹಕಾರಿಯು ತನ್ನ ಸಿಬ್ಬಂದಿಗಳಿಗೆ ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಪ್ರಬಂಧ**

ಪಾಲ್‌ರಾಜ್ ಎ.

**ಪೀಠಿಕೆ :** ಸಾವಯವ ಮತ್ತು ಶೂನ್ಯ ಬಂಡವಾಳ ಕೃಷಿಯು ಅರ್ಥಪೂರ್ಣವಾದ ಸಾಮಾಜಿಕ – ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಮುಂದುವರೆಯುತ್ತಿರುವ ಮತ್ತು ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತಿರುವುದು ಕಂಡುಬರುತ್ತಿದೆ. 21ನೇ ಶತಮಾನದಲ್ಲಿ ಪತ್ರಿ ಜನ ಸಾಮಾನ್ಯನು ತನ್ನ ದೈನಂದಿನ ಜೀವನದಲ್ಲಿ ಆಹಾರ ರೂಪದಲ್ಲಾಗಲಿ, ನೀರಿನ ರೂಪದಲ್ಲಾಗಲಿ ತನಗೆ ಅರಿವಿಲ್ಲದಂತೆ ವಿಷವನ್ನ ಸೇವಿಸುತ್ತಿರುತ್ತಾನೆ ಇದಕ್ಕೆ ಕಾರಣ ದೇಶದ ಜೀವನಾಡಿಯಾದ ಕೃಷಿಕರಿಗೆ ಸರಿಯಾದ ಮಾಗದರ್ಶನ ಮತ್ತು ತರಬೇತಿ ಇಲ್ಲದೆ ಇಳುವರಿ ಹೆಚ್ಚು ಮಾಡುವ ಉದ್ದೇಶದಿಂದ ಅತ್ಯಾಧುನಿಕ ತಂತ್ರಜ್ಞಾನ. ತಳಿಗಳು, ಕೀಟ ನಾಶಕ, ರಾಸಾಯನಿಕ ಗೊಬ್ಬರಗಳ ಅಸಮರ್ಪಕ ಮತ್ತು ಅತಿಯಾದ ಬಳಕೆ ಯಿಂದ ರೈತರು ಬೆಳೆಯುವ ಪ್ರತಿಯೊಂದು ಕೃಷಿ ಉತ್ಪನ್ನಗಳು ಸಹ ವಿಷಪೂರಿತ ವಾಗಿರುತ್ತದೆ. ಇದು ನಮ್ಮ ಅರೋಗ್ಯ ಮತ್ತು ಮುಂದಿನ ಪೀಳಿಗೆಗೂ ಇದರ ಪರಿಣಾಮ ತಪ್ಪಿದಲ್ಲ. ಈ ಅಂಶಗಳನ್ನು ಮನಗಂಡ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಹಲವಾರು ಸ್ವಯಂ ಸೇವಾ ಮತ್ತು ಸಹಕಾರ ಸಂಸ್ಥೆಗಳು ಸಾವಯುವ ಕೃಷಿ ಮತ್ತು ಶೂನ್ಯ ಬಂಡವಾಳ ಕೃಷಿಯ ಉತ್ತೇಜನಕ್ಕೆ ಹಲವು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂತಿರುತ್ತದೆ. ಆದರೆ ಅದು ಸಮರ್ಪಕ ಮತ್ತು ಮೂಲ ಮಟ್ಟದಲ್ಲಿ ಕೃಷಿಕರಿಗೆ ತಲುಪದಿರುವುದು ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಾವಯವ ತತ್ವಗಳನ್ನು ಅನ್ವಯಿಸುವುದರಿಂದ, ಅಂದರೆ ಸ್ಥಳೀಯ ಸಂಪನ್ಮೂಲಗಳ (ಸ್ಥಳೀಯ ಬೀಜ, ಗೊಬ್ಬರ) ದಕ್ಷ ನಿರ್ವಹಣೆಯಿಂದಾಗಿ ಕೃಷಿಕರಿಗೆ ಖರ್ಚುವೆಚ್ಚ ದಕ್ಷತೆ ಸಾಧ್ಯವಾಗುತ್ತದೆ. ಮತ್ತೊಂದು ರೀತಿಯಲ್ಲಿ, ಸ್ಥಳೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆಯು ಮಹತ್ತರವಾದ ಬೆಳವಣಿಗೆಯ ನಿರೀಕ್ಷೆ ಹೊಂದಿದೆ.

ಸಾವಯವ ಕೃಷಿ ಮತ್ತು ಶೂನ್ಯ ಬಂಡವಾಳ ಕೃಷಿಯು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಆದ್ದರಿಂದ ಈ ಕುರಿತು ಸಾವಯುವ ಕೃಷಿಯ ಸಾಮರ್ಥ್ಯ ವರ್ಧನೆಗೆ ಸಹಕಾರ ಸಂಸ್ಥೆಗಳು ಮುಖ್ಯ ಪಾತ್ರವಹಿಸುತ್ತವೆ. ಸಾವಯವ ಕೃಷಿಗೆ ಸಂಬಂಧಿಸಿದಂತೆ ತರಬೇತಿ ವಸ್ತುಗಳು ಮತ್ತು ತರಬೇತಿ ಕೋರ್ಸುಗಳ ಅಭಿವೃದ್ಧಿಯ ಕುರಿತು ಪ್ರಪಂಚದಾದ್ಯಂತ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಸಾವಯುವ ಕೃಷಿಯ ಅಭಿವೃದ್ಧಿಯ ಕುರಿತು ಸಹಕಾರ ಕ್ಷೇತ್ರದಲ್ಲಿ ಅಲ್ಪ ಪ್ರಾಮಾಣದಲ್ಲಿ ಬೆಳವಣಿಗೆ ಆಗುತಿದ್ದು ಇನ್ನೂ ಹೆಚ್ಚಿನ ತರಬೇತಿ ಪ್ರಾತೀಕ್ಷತೆಯನ್ನು ದೇಶದ ಜೀವನಾಡಿಯಾಗಿರುವ ರೈತರಿಗೆ ತಳಮಟ್ಟದಿಂದ ನೀಡಿದಲ್ಲಿ ಸಾವಯುವ ಕೃಷಿ ಮತ್ತು ಶೂನ್ಯ ಬಂಡವಾಳ ಕೃಷಿಯನ್ನು ಅಭಿವೃದ್ಧಿಯೆಡೆಗೆ ಮತ್ತು ಮುಂದಿನ ಪೀಳಿಗೆಯ ಕೃಷಿ ಉತ್ಪನ್ನಗಳನ್ನು ವಿಷ ಮುಕ್ತವಾಗಿಸಲು ಅವಕಾಶವನ್ನು ನೀಡಿದಂತ್ತಾಗುತ್ತದೆ.

**ಸಾವಯುವ ಚಳುವಳಿ :** ಸಾವಯವ ಚಳುವಳಿ 1930–1940 ರ ದಶಕದಲ್ಲಿ ಕೃಷಿ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು



ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು. ಕೃತಕ ಗೊಬ್ಬರಗಳನ್ನು ಮೊದಲು ಸೂಪರ್ ಫಾಸ್‌ಪೇಟ್ ಆನಂತರ ಅಮೋನಿಯದ ಉತ್ಪನ್ನಗಳಿಂದ ಭಾರಿ ಪ್ರಮಾಣದಲ್ಲಿ 18ನೆಯ ಶತಮಾನದಲ್ಲಿ ಉತ್ಪನ್ನ ಮಾಡಲಾಯಿತು. ಪ್ರಾರಂಭದಲ್ಲಿ ತಯಾರಾದ ಈ ಗೊಬ್ಬರಗಳು ಅಗ್ಗವಾಗಿ ದೊರೆಯುತ್ತಿದ್ದು ಶಕ್ತಿಯುತವಾಗಿಯೂ ಇದ್ದುದಲ್ಲದೆ ಸುಲಭವಾಗಿ ಸಾಗಾಣಿಕೆ ಮಾಡಲಾಗುತ್ತಿತ್ತು. ಇಂತಹುದೇ ಪ್ರಗತಿ 1940ರ ಸುಮಾರಿನಲ್ಲಿ ರಾಸಾಯನಿಕ ಕೀಟನಾಶಕಗಳಲ್ಲಿಯೂ ಕಂಡುಬಂದಿತು. ಅದರ ಫಲವಾಗಿ ಈ ದಶಕವನ್ನು "ಕೀಟನಾಶಕ ಯುಗ" ವೆಂದು ಕರೆಯಲಾಯಿತು.

ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹಾನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ಸಾವಯವ ಬೇಸಾಯ ಒಟ್ಟು ಕೃಷಿ ಉತ್ಪನ್ನ ಶೇಕಡಾ ಪ್ರಮಾಣವನ್ನು ಪರಿಗಣಿಸಿದಾಗ ಪ್ರಾರಂಭದಿಂದಲೂ ತೀರಾ ಕಡಿಮೆಯಾಗಿಯೇ ಉಳಿದುಕೊಂಡು ಬಂದಿದೆ. ಜನಸಾಮಾನ್ಯರಲ್ಲಿ ಪರಿಸರದ ಪರಿಜ್ಞಾನ ಮತ್ತು ಶ್ರದ್ಧೆ ಹೆಚ್ಚಾದಂತೆಲ್ಲಾ ಮೂಲಭೂತವಾಗಿ ಸರಬರಾಜು ವ್ಯವಸ್ಥೆಯ ಚಳುವಳಿ ಒಂದು ಬೇಡಿಕೆಯ ಕೆಲಸವಾಗಿ ಪರಿಣಮಿಸಿತು. ಬಳಕೆದಾರರಿಂದ ಹಾಗೂ ಕೆಲವು ಸಂದರ್ಭಗಳಲ್ಲಿ ಸರಕಾರದ ಸಹಾಯ ಧನದಿಂದ ಬೇಡಿಕೆಗಳು ಅಧಿಕಗೊಂಡವು. ಮತ್ತೆ ಕೆಲವು ವಿಷಯಗಳಲ್ಲಿ ಪ್ರಗತಿಪರ ರಾಷ್ಟ್ರಗಳ ಬೇಸಾಯಗಾರರು ಆರ್ಥಿಕ ಕಾರಣಗಳಿಗಾಗಿ ತಮ್ಮ ವಿಧಾನವನ್ನು ಬದಲಾಯಿಸಿಕೊಂಡರು. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆ ಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ, ವಿಶೇಷವಾಗಿ ಯುರೋಪ್ ದೇಶಗಳಲ್ಲಿ ಅತಿ ಹೆಚ್ಚು.

## ಸಾವಯುವ ಮತ್ತು ಶೂನ್ಯ ಬಂಡವಾಳ ಕೃಷಿ ವಿಧಾನ

**ಮಣ್ಣಿನ ಸಮಗ್ರ ತೇವಾಂಶ ಮತ್ತು ಪೌಷ್ಟಿಕಾಂಶ ನಿರ್ವಹಣೆ :** ಕೃಷಿ ಬೆಳೆಗಳಿಗೆ ನೈಟ್ರೋಜನ್, ಫಾಸ್ಫರಸ್ ಪೊಟಾಸಿಯಂ ಹಾಗೂ ಮೈಕ್ರೋನ್ಯೂಟ್ರಿಯೆಂಟ್ಸ್‌ಗಳ ಅವಶ್ಯಕತೆ ಇದೆ. ಸಾವಯವ ಕೃಷಿಗಾರರು ಕೃತಕ ಗೊಬ್ಬರಗಳನ್ನು ಬಿಟ್ಟು ದನಗಳ ಮತ್ತು ಮೇಕೆಗಳ ಗೊಬ್ಬರವನ್ನು ಬಳಸುತ್ತಾರೆ ಮತ್ತು ಕೆಲವು ಬಗೆಯ ಹದಮಾಡಿದ ಗೊಬ್ಬರಗಳಾದ ಸೀಡ್ ಮೀಲ್ ಮತ್ತು ವಿವಿಧ ಬಗೆಯ

ಖನಿಜಾಂಶದಿಂದ ಕೂಡಿದ ಪುಡಿಗಳು ವಿಶೇಷವಾಗಿ ಕಲ್ಲು ಫಾಸ್ಫೇಟ್ ಮತ್ತು ಹಸಿರುಮರಳು, ಅದು ನೈಸರ್ಗಿಕವಾಗಿ ಸಹಜವಾಗಿ ದೊರೆಯುತ್ತದೆ. ಇದರಿಂದ ಮಣ್ಣಿನ ಫಲವತ್ತೆ ಹೆಚ್ಚುತ್ತದೆ ಮತ್ತು ತೇವಾಂಶವನ್ನು ಹಿಡಿದಿಡುತ್ತದೆ ಇದಕ್ಕೆ ಯಾವುದೆ ರೀತಿಯ ಬಂಡವಾಳದ ಅವ್ಯಶಕತೆ ಇರುವುದಿಲ್ಲ.

ಮಿಶ್ರಬೇಸಾಯ/ಅಂತರ ಬೆಳೆ/ ಬೆಳೆ ಪರಿವರ್ತನೆ:

ದನಗಳು ಹಾಗೂ ಬೆಳೆಗಳು ಸೇರಿಕೊಂಡು ಮಿಶ್ರ ಕೃಷಿ ಭೂಮಿಯನ್ನಾಗಿ ರೂಢಿಸಿಕೊಳ್ಳಬಹುದು. ಇದರಲ್ಲಿ ಅನುಕೂಲವೆಂದರೆ ನೈಟ್ರೋಜನ್ ಭರಿತ ಹುಲ್ಲಿನಿಂದಾಗಿ ಭೂಮಿಯು ಫಲವತ್ತಾಗುತ್ತದೆ. ಹುಲ್ಲು ಬೆಳೆಸುವುದರಿಂದ ಹಾಗೂ ದ್ವಿದಳಧಾನ್ಯದ ಬೆಳೆಗಳಿಗೆ ಮಣ್ಣು ಫಲವತ್ತಾಗುತ್ತದೆ. ದನಗಳಿಲ್ಲದ ಕೃಷಿ ಭೂಮಿಗೆ ಫಲವತ್ತತೆಯನ್ನು ಉಳಿಸಿಕೊಳ್ಳಲು ಹೆಚ್ಚು ಕಷ್ಟವಾಗುತ್ತದೆ. ಅದು ಹೊರಗಿನ ವಸ್ತುಗಳ ಮೇಲೆ ಆಧಾರವಾಗಿರಬೇಕಾಗುತ್ತದೆ. ಆಮದು ಮಾಡಿಕೊಂಡ ಗೊಬ್ಬರ ಹಾಗೂ ಹಸಿರು ಗೊಬ್ಬರ ಮುಂತಾದವು ಅಗತ್ಯವಾಗಿ ಒದಗಿಸಬೇಕಾಗುತ್ತದೆ. ತೋಟಗಾರಿಕಾ ಕ್ಷೇತ್ರಗಳು ವಿಶೇಷವಾಗಿ ಹಣ್ಣು ಹಾಗೂ ತರಕಾರಿಯನ್ನು ಬೆಳೆಯುವಂತಹವು, ರಕ್ಷಿತ ಪರಿಸ್ಥಿತಿಯಲ್ಲಿರುವಂತಹವು ಹೊರಗಿನ ಉತ್ಪನ್ನಗಳಿಗಾಗಿ ಮತ್ತಷ್ಟು ಹೆಚ್ಚಾಗಿ ಅವಲಂಭಿತವಾಗಿರುತ್ತವೆ.

**ಕಳೆ ಹತೋಟಿ :** ಪೌಷ್ಠಿಕತೆ ಒದಗಿಸಿದ ನಂತರ ಕಳೆಯನ್ನು ಹತೋಟಿಯಲ್ಲಿರಿಸಿಕೊಳ್ಳುವುದು ಎರಡನೆಯ ಸ್ಥಾನವನ್ನು ಪಡೆಯುತ್ತದೆ. ಕಳೆಯನ್ನು ಹತೋಟಿಯಲ್ಲಿರಿಸಿಕೊಳ್ಳಲು ವಿವಿಧ ಬಗೆಯ ತಾಂತ್ರಿಕತೆಗಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ. ಅವುಗಳಲ್ಲಿ ಕೈಯಿಂದ ಕಳೆ ಕೀಳುವುದು, ಒದ್ದೆ ಹುಲ್ಲನ್ನು ಬೇರುಗಳ ಬಳಿ ಹೊದಿಸುವುದು, ಮತ್ತಿತರ ಬೇರೆ ಬೇರೆ ಮನೆಯಲ್ಲಿ ಬಳಸುವ ಭತ್ತದ ಬೇಸಾಯದಲ್ಲಿ ಇತ್ತೀಚೆಗೆ ಕಂಡು ಹಿಡಿದಿರುವ ನಿವಾರಣೆಗಳು. ಒಂದು ನಿವಾರಣೋಪಾಯವೆಂದರೆ ಬಾತುಕೋಳಿ ಹಾಗೂ ಮೀನುಗಳನ್ನು ಭತ್ತದ ಗದ್ದೆಗಳಲ್ಲಿ ಬಿಡುವುದು. ಅವು ಕಳೆಯನ್ನು ಮಾತ್ರವಲ್ಲದೆ ಕ್ರಿಮಿಕೀಟಗಳನ್ನು ಸಹ ತಿನ್ನುತ್ತವೆ.

**ಇತರೆ ಜೀವಿಗಳನ್ನು ಹತೋಟಿಯಲ್ಲಿಡುವುದು :** ಕೀಟನಾಶಕಗಳು ಸಾವಯವ ಹಾಗೂ ಸಾವಯವವಲ್ಲದ ನಿರೋಧಕಗಳು ಪರಿಸರ ಹಾಗೂ ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮದಿಂದಾಗಿ ವಿವಾದಗ್ರಸ್ತ ವಿಷಯ. ಕೀಟಗಳನ್ನು ಹತೋಟಿಯಲ್ಲಿರಿಸಿಕೊಳ್ಳವ ಒಂದು ಮಾರ್ಗವೆಂದರೆ ಅವುಗಳನ್ನು ಲೆಕ್ಕಿಸದೆ ಗಿಡಗಳ ಆರೋಗ್ಯದ ಬಗೆಗೆ ಹೆಚ್ಚಿನ ಗಮನ ನೀಡುವುದು. ಏಕೆಂದರೆ ಒಂದು ಗಿಡ ತನ್ನ ಎಲೆಯ ಮೂರನೆಯ ಒಂದು ಭಾಗವನ್ನು ಕಳೆದುಕೊಂಡರೂ ಯಥಾಸ್ಥಿತಿಯಲ್ಲಿ ಬದುಕುಳಿಯಲು ಸಾಮರ್ಥ್ಯ ಪಡೆದಿದೆ. ಅದು ತನ್ನ ಬೆಳವಣಿಗೆಯಲ್ಲಿ ಕುಂಠಿತವಾಗುವುದಿಲ್ಲ. ಕೀಟನಾಶಕಗಳ ಬಳಕೆ ತಪ್ಪಿಸಬೇಕಾದರೆ ಪ್ರಕೃತಿ ಸಹಜವಾಗಿ ತಡೆಗಟ್ಟುವಂತಹ ಗಿಡಗಳನ್ನು ಆಯ್ಕೆ ಮಾಡಿ ಚೀಲಗಳಲ್ಲಿ ಗಿಡದ ಸುತ್ತಲೂ ಇಡಬೇಕು. ಸಾಯುತ್ತಿರುವ ಎಲೆಗಳು, ಹಣ್ಣುಗಳು, ಗಿಡಗಳು, ಅಡಗು ಗಿಡಗಳು ಮುಂತಾದವುಗಳನ್ನು ಹೊರತೆಗೆಯಬೇಕು. ಉಪಯುಕ್ತ ಜೀವಿಗಳನ್ನು ಮತ್ತು ಉಪಯುಕ್ತ ಕೀಟಗಳನ್ನು ಒಳಗೆ ಬಿಟ್ಟು ಬೆಳೆಯಲು ಪ್ರೋತ್ಸಾಹ ನೀಡಬೇಕು. ಜತೆಗೆ ಸಹಕಾರಿಯಾಗುವಂತಹ ಗಿಡಗಳನ್ನು ಹೊಸದಾಗಿ ನಾಟಿಮಾಡಬೇಕು, ಬಹುಮುಖ ಬೇಸಾಯವನ್ನು ರೂಢಿಯಲ್ಲಿರಿಸಿಕೊಳ್ಳಬೇಕು.

**ಮಿಶ್ರಗೊಬ್ಬರ :** ಸಾವಯವ ಮಾನದಂಡಗಳ ಅಡಿಯಲ್ಲಿ ಗೊಬ್ಬರವನ್ನು ಸರಿಯಾದ ಕಾಂಪೋಸ್ಟಿಂಗ್ ಮಾಡಿಕೊಂಡು. ಅದನ್ನು ಒಂದು ನಿಗತ ತಾಪಕ್ಕೆ ತಲುಪುವಂತೆ ಬಿಡಲಾಗುವುದು. ಕಚ್ಚಾ ದನದಗೊಬ್ಬರ ಬಳಸಿದ್ದರೆ ಬೆಳೆಯನ್ನು ಕೊಯ್ಲುಮಾಡಲು 120 ದಿನಗಳು ಕಳೆದಿರಬೇಕಾಗುತ್ತದೆ. ಮಣ್ಣಿನೊಂದಿಗೆ ನೇರವಾಗಿ ಸಂಪರ್ಕ ಪಡೆದಿರುವಾಗ ಮಾತ್ರ ಇದು ಅನ್ವಯಿಸುತ್ತದೆ. ಉತ್ಪನ್ನಗಳು ನೇರವಾಗಿ ಮಣ್ಣಿನೊಂದಿಗೆ ಸಂಪರ್ಕ ಪಡೆಯದಿರುವಾಗ ಕೊಯ್ಲು ಮಾಡಲು 90 ದಿನಗಳು ಕಳೆದಿರಬೇಕು ಈ ಹಿನ್ನೆಲೆಯಲ್ಲಿ ಮಿಶ್ರಗೊಬ್ಬರ ಬಳಕೆ ಸಾವಯುವ ಕೃಷಿಗೆ ಉಪಯೋಗವಾಗಲಿರುತ್ತದೆ.

- ಸಾವಯುವ & ಶೂನ್ಯ ಬಂಡವಾಳ ಕೃಷಿಯ ಅನುಕೂಲಗಳು
- ಪರಿಸರ ಸ್ನೇಹಿ ಮತ್ತು ವಿಷ ಮಕ್ತ ಕೃಷಿ.
- ಮಿಶ್ರ ಕೃಷಿಯಿಂದ ಆದಾಯ ಹೆಚ್ಚಳ (ಪಶುಸಂಗೋಪನೆ ಜೊತೆಗೆ ಕೃಷಿ)
- ಮಣ್ಣಿನ ಗುಣಮಟ್ಟ ಹೆಚ್ಚಳ
- ರಸಗೊಬ್ಬರ ಖರ್ಚುವೆಚ್ಚಗಳ ಉಳಿವು
- ನೈಸರ್ಗಿಕ ಗೊಬ್ಬರ (ಸಸ್ಯ ಮತ್ತು ಪ್ರಾಣಿ)
- ಆರೋಗ್ಯಕರ ಇಳುವರಿಯ ಆಶ್ವಾಸನೆ
- ಇಳುವರಿಗೆ ಮಾರುಕಟ್ಟೆಯಲ್ಲಿ ಸ್ಪರ್ದಾತ್ಮಕ ಬೆಲೆಗಳು
- ಅನೇಕ ಬೆಳೆಯ ವಿಧಗಳ ಬೆಳೆಯಲು ಹೊಂದಿಕೊಳ್ಳುವಿಕೆ
- ಆರೋಗ್ಯಕರ ಜನ ಮತ್ತು ಪ್ರಾಣಿ ಸಂಖ್ಯೆ ಹೆಚ್ಚಳ
- ಜಾನವರುಗಳಿಗೆ ಹೆಚ್ಚಿನ ಉತ್ಸಾಹಪೂರ್ಣ ಹಾಗೂ ಡೈರಿ ಉತ್ಪನ್ನಗಳ ಮಾರಾಟದಿಂದ ಆದಾಯ ಅಯ್ಕೆಗಳು ಮತ್ತು ಫೊಬರ್ ಅನಿಲದ ಅಯ್ಕೆ
- ಮಳೆ ನೀರು ಕೊಯ್ಲು– ಮಳೆ ನೀರಿನ ಸುಧಾರಿತ ಬಳಕೆ, ಉತ್ತಮ ಅಂತರ್ಜಲ ಮಟ್ಟ

**ಶೂನ್ಯ ಬಂಡವಾಳ ಕೃಷಿಯ ಬಗ್ಗೆ ಒಂದು ನೋಟ :** ಶೂನ್ಯ ಬಂಡವಾಳ ಕೃಷಿ ಎಂದರೆ ದುಡ್ಡು ಖರ್ಚು ಮಾಡದೇ ಬೆಳೆ ಬೆಳೆಯುವುದಷ್ಟೇ. ಬಿತ್ತನೆ ಬೀಜ, ಕೀಟ ನಾಶಕ ಎಂದು, ಸಬ್ಸಿಡಿಯಲ್ಲಿ ದೊರೆಯುವ ರಸಗೊಬ್ಬರದ ಮೂಟೆಗಳಿಗಾಗಿ ಸರತಿಯಲ್ಲಿ ಕಾದು ನಿಂತು ಹಣ ಖರ್ಚು ಮಾಡಿ ಬೆಳೆ ಬೆಳಯುವುದರ ಬದಲು ಕೊಟ್ಟಿಗೆಯಲ್ಲಿನ ದನದ ಸಗಣಿ, ಗಂಜಲ, ಬದುವಿನ ಮಣ್ಣು, ಬೆಲ್ಲ, ದ್ವಿದಳ ಧಾನ್ಯಗಳನ್ನು ಬಳಸಿ ಬೆಳೆ ಬೆಳೆಯುವುದೇ ಶೂನ್ಯ ಬಂಡವಾಳ ಕೃಷಿ ಆಗಿದೆ. ಇಲ್ಲಿ ರಸಗೊಬ್ಬರಗಳು ಬೇಕಿಲ್ಲ, ಎರೆಹುಳುಗಳನ್ನು ಸಾಯಿಸುವ ಕೀಟನಾಶಕಗಳ ಅಗತ್ಯವಿಲ್ಲ. ತಿಪ್ಪೆ ಗೊಬ್ಬರ, ಕಾಡಿನ ಎಳೆ ಗೊಬ್ಬರ ಇತ್ಯಾದಿಗಳ ಅನಿವಾರ್ಯವೂ ಇಲ್ಲ. ಕೊಟ್ಟಿಗೆಯಲ್ಲಿ ಒಂದು ದೇಸೀ ಆಕಳು ಇದ್ದರೆ ಸಾಕು, 30 ಎಕರೆಯಲ್ಲಿ ನೈಸರ್ಗಿಕ ಕೃಷಿ ಮಾಡಬಹುದು ಎನ್ನುತ್ತಾರೆ. ಕೀಟದ ಸಮಸ್ಯೆಗಳನ್ನು ತಡೆಯಲು ಮನೆಯಲ್ಲಿಯೇ ಕೀಟನಾಶಕಗಳನ್ನು ತಯಾರಿಸಿಕೊಳ್ಳಬಹುದು. ಇದಕ್ಕಾಗಿ ಅಗತ್ಯವಿರುವ ಔಷಧೀಯ ಸಸ್ಯಗಳನ್ನು ತೋಟದಲ್ಲಿಯೇ ಬೆಳೆಯಬಹುದು. ಉಳುಮೆಯ ಅಗತ್ಯವೂ ಕೂಡ ಕಡಿಮೆ. ಕೇವಲ ಅಲ್ಪಾವಧಿಯ ಬೆಳೆಗಳಿಗಷ್ಟೇ



ಉಳುಮೆ ಮಾಡುವ ಅಗತ್ಯವಿದೆ. ಹೀಗಾಗಿಯೇ ಈ ಪದ್ಧತಿಯನ್ನು ಶೂನ್ಯ ಬಂಡವಾಳ ಕೃಷಿ ಎಂದು ಕರೆಯಲಾಗಿದೆ.

**ಶೂನ್ಯ ಬಂಡವಾಳದ ಕೃಷಿಯಲ್ಲಿ ಸಹಕಾರ ಸಂಸ್ಥೆಗಳ ಮುಖ್ಯ ಪಾತ್ರ**

**ಸಹಕಾರ ಸಂಸ್ಥೆಗಳಿಂದ ಉತ್ಪಾದಕರು ಮತ್ತು ಬಳಕೆದಾರ ಸಂಯೋಜನೆ ಕಾರ್ಯಕ್ರಮಗಳು :** ಶೂನ್ಯ ಬಂಡವಾಳ ಕೃಷಿಯು ಭಾರತ ಕೃಷಿ ಮಾರಾಟ ವ್ಯವಸ್ಥೆಯನ್ನು ಉತ್ಪಾದಕ ಮತ್ತು ಗ್ರಾಹಕ ಇಬ್ಬರಿಗೂ ಉಪಯುಕ್ತವಲ್ಲ ಎಂಬುದನ್ನು ಕರೆಯಲಾಗುತ್ತದೆ ಆದರೆ ಇದರ ಸಲುವಾಗಿ ಸಹಕಾರ ಸಂಸ್ಥೆಗಳು ಉತ್ಪಾದಕರು ಹಾಗು ಬಳಕೆದಾರರನ್ನು ಸಾವಯವ ಕೃಷಿ ಉತ್ಪಾದಕಗಳಿಗೆ ನೇರವಾಗಿ ಸಂಯೋಜಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮ ಸಾವಯವ ರೈತರನ್ನು ಬಳಕೆದಾರ ಸಂಘಗಳಿಗೆ ಹಾಗು ಚಿಕ್ಕ ಮಾರಾಟಗಾರರನ್ನು ನೇರವಾಗಿ ಸಂಯೋಜಿಸಲು ನೆರವಾಗುತ್ತದೆ. ಇದರಿಂದ ಬಹಳ ರೈತರು ತಮ್ಮ ಉತ್ಪನ್ನಗಳನ್ನು ನೆರವಾಗಿ ಬಳಕೆದಾರರಿಗೆ ಮಾರಿ ಒಳ್ಳೆ ಲಾಭವನ್ನು ಕಂಡುಕೊಳ್ಳಬಹುದಾಗಿದೆ.

**ವಿಚಾರಗೋಷ್ಠಿಗಳನ್ನು ಸಂಯೋಜಿಸುವುದು, ಪರ್ಯಾಯ ಕೃಷಿ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಯಾಗಾರಗಳು ಮತ್ತು ತರಬೇತಿ**

ಸಹಕಾರ ಸಂಸ್ಥೆಗಳು ದೇಶದ ಬೇರೆ ಬೇರೆ ಹಳ್ಳಿಗಳಲ್ಲಿ ಬಹಳ ಸಭೆಗಳನ್ನು/ಕಾರ್ಯಕ್ರಮಗಳನ್ನು ನಡೆಸಿ ಈಗಿನ ಕಾಲದಲ್ಲಿ ಸಾವಯವ ಕೃಷಿ ಬಗ್ಗೆ ಆವಶ್ಯಕತೆಯನ್ನು ಸಾವಯವ ಕೃಷಿಯ ಮುಲಭೂತ ತತ್ವಗಳು, ಪರ್ಯಾಯ ರೀತಿಯ ರಸಾಯನಿಕ ಗೊಬ್ಬರಗಳನ್ನು ಸದ್ರುಶ್ಯವಾದ ಮಿಶ್ರಗೊಬ್ಬರ/ಸಸ್ಯಗೊಬ್ಬರ/ಹುಳುವಿನ ಮಿಶ್ರಗೊಬ್ಬರ ಇತ್ಯಾದಿ., ಕ್ರಿಮಿನಾಶಕ ಹಾಗು ಕಿಟನಾಶಕ ಔಷದಿಗೆ ಪರ್ಯಯವಾಗಿ ಸಸ್ಯ ಮೂಲದ ಕಷಾಯಗಳು, ಬೀಜ ಸಂಸ್ಕರಣಗಳು ಇತ್ಯಾದಿಗಳ ಮಾಹಿತಿ ನೀಡುವುದರ ಜೊತೆಗೆ ಗ್ರಾಮೀಣ ಯುವಕರನ್ನು ಮತ್ತು ಮಹಿಳೆಯರನ್ನು ಕೃಷಿ/ತೊಟಗಾರಿಕ ಬೆಳೇಗಳ ತರಬೆತಿ ಮತ್ತು ಸಣ್ಣ ಕಾಡಿನ ಕೆಲವು ಉತ್ಪಾದನೆಗಳು. ಈ ತರಬೇತಿಗಳು ಅವರಲ್ಲಿ ಹೆಚ್ಚು ಆರ್ಥಿಕವಗಿ ಬೆಳೆಗಳು ಬಳಸಿಕೊಳ್ಳಲು ಜಾಗೃತಿ ಮೂಡಿಸುವ ಸಲುವಾಗಿ ಮತ್ತು ಅವುಗಳನ್ನು ಸುತ್ತುವರೆದಿರುವ ಪರಿಸರವನ್ನು ಕಾಪಾಡಿ ಅದರ ಜೀವಿಕ ವೈವಿಧ್ಯತೆಯ ಬಗ್ಗೆ ಜ್ಞಾನವನ್ನು ಗಳಿಸಲು ಅವಕಾಶ ಮಾಡಿಕೊಡಲು ಸ್ವಮವಹಿಸುವುದು.

**ಹೊಸ ಕಲ್ಪನೆಗಳು/ಪರ್ಯಾಯಗಳು :** ಸಹಕಾರಿ ಸಂಸ್ಥೆಗಳು ಸಾವಯುವ ಕೃಷಿಯಬಗ್ಗೆ ಅನ್ವೇಷನೆಯನ್ನು ಮಾಡಿ ಹೊಸ ಪರಿಕರಗಳು, ವಿಧಾನಗಳು ಇತ್ತಾದಿಗಳ ಬಗ್ಗೆ ಮತ್ತು ಪರ್ಯಾಯ, ಮಾರ್ಗಗಳನ್ನು ತರುವುದು.

**ಗೊ ಉತ್ಪನ್ನಗಳ ಸಲಹೆ :** ಸಹಕಾರ ಕ್ಷೇತ್ರದಲ್ಲಿ ಗೊ ಉತ್ಪನ್ನದಲ್ಲಿ ಭಾರತ ಮೊಟ್ಟ ಮೂದಲ ಸ್ಥಾನದಲ್ಲಿದೆ ಇದಕ್ಕೆ ಉದಾಹರಣೆಯಾಗಿ ಅಮುಲ್ ಮತ್ತು ನಂದಿನಿ ಉದಾಹರಣೆ ನೀಡಬಹುದು. ಕೃಷಿಯಲ್ಲಿ ಪುರಾತನ ಕಾಲದ ಬರಹಗಳಿಂದ ಆಲೋಚನೆ ಬಳಸಿ ಗೊ ಮೂತ್ರ, ಸಗಣಿ ,ಹಾಲು, ಮೊಸರು, ಮಜ್ಜಿಗೆ ಹಾಗು ಹಾಲು ಕೊದಕು ಬಳಸಿ ಪ್ರಯೋಗಗಳನ್ನು ನಡೆಸಿದ್ದಾರೆ.ಗೊ ಉತ್ಪನ್ನಗಳನ್ನು ರೈತರು ಬಹಳವಾಗಿ ಬಳಸುತ್ತಾರೆ, ಗೊ ಮೂತ್ರವನ್ನು ಎಲೆಗಳ ಸ್ಪ್ರೇ, ಸಗಣಿಯನ್ನು ಮಿಶ್ರಗೊಬ್ಬರಕ್ಕೆ, ಹಾಲನ್ನು ವೈರಸ್ ಬಾರದ ಹಾಗೆ ಸ್ಪ್ರೇಗಾಗಿ, ಮೊಸರು ಮತ್ತು ಮಜ್ಜಿಗೆಯನ್ನು ಮಣ್ಣಲ್ಲಿ ಸೂಕ್ಷ್ಮ ಜೀವಿಗಳ ಚಟುವಟಿಕೆಗಳನ್ನು ಜಾಸ್ತಿಮಾಡಲು ಮತ್ತು ತುಪ್ಪವನ್ನು ಪಾರಂಪರಿಕ ಬೀಜ ಚಿಕಿತ್ಸೆಗೆ ಉಪಯೊಗಿಸುತ್ತಾರೆ. ಈ ರೀತಿ ಗೂ ಉತ್ಪನ್ನಗಳಿಗೆ ಸಲಹೆ ನೀಡುವುದು.

**ಸಮುದಾಯ ಬೀಜ ರಾಶಿ/ಬ್ಯಾಂಕ್ :** ಸಹಾಕಾರಿ ಸಂಸ್ಥಗಳು ತನ್ನ ಸದಸ್ಯರಿಗೆ ಬೀಜ ರಾಶಿ/ಬ್ಯಾಂಕ್‌ಗಳನ್ನು ಹೊಂದಿಸಿ ಕೊಡುವುದು. ಈ ಬ್ಯಾಂಕ್‌ಗಳು ಸ್ಥಳಿಯ ಹಾಗು ಪಾರಂಪರಿಕ ಬೆಳೆಗಳನ್ನು ಸಂರಕ್ಶಿಸಿ, ಹೆಚ್ಚಿಸಿ,ವಿತರಿಸಿ,ಬಿತ್ತರಿಸುವ ಕೆಲಸಮಾಡಿ ಪಾಲಿಸುತ್ತದೆ. ಇವುಗಳುನ್ನು ಸಮುದಾಯಗಳೆ ನಡೆಸುತ್ತಾರೆ .ಈಗ ಈ ಸಮುದಾಯ ಬೀಜ ಬ್ಯಾಂಕ್‌ಗಳು ಶಿವಮೊಗ್ಗ ಹಾಗು ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೂ ಸಹ ಪದ್ದತಿ ನಡೆದುಕೊಂಡು ಬರುತ್ತಿದೆ.

**ಸಾವಯವ ಕೃಷಿ ಜಾಗೃತಿ ಶಿಬಿರ :** ಸಾವಯವ ಕೃಷಿ ಜಾಗೃತಿ ಶಿಬಿರ (ಸಾವಯವ ಕೃಷಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ಮತ್ತು ಪರ್ಯಾಯ ಕೃಷಿ) ಹಳ್ಳಿಹಳ್ಳಿ ಗಳಲ್ಲಿ ಜಾಗೃತಿ ಮತ್ತು ಸಾವಯುವ ಕೃಷಿಗೆ ಸರ್ಕಾರಿ ಸೌಲಭ್ಯಗಳನ್ನು ಪ್ರಚುರ ಪಡಿಸುವುದು. ಈ ಕಾರ್ಯಕ್ರಮಗಳು ಹಸಿರು ಕ್ರಾಂತಿ, ತಾಂತ್ರಿಕತೆ ಮತ್ತು ರಾಸಾಯನಿಕ ಕೃಷಿಗಳ ಅನಾನುಕುಲಗಳಾದ ಹೆಚ್ಚಿನ ಆರೊಗ್ಯದ ಸಮಸ್ಯೆಗಳು, ನೀರು–ಗಾಳಿ–ಮಣ್ಣಿನ ಮಾಲಿನ್ಯ, ಹೆಚ್ಚಿನ ಕೀಟ ಹಾಗು ರೊಗಕಾರಕ ಪ್ರತಿರೊಧ, ಬೆಳೆಗಳ ಕಡಿಮೆ ಉತ್ಪಾದನೆ, ಹೆಚ್ಚಿನ ಕೃಷಿಯ ಬೆಲೆ, ಪರಿಸರ ಸಮತೊಲನ ನಷ್ಟ ಇತ್ಯಾದಿಗಳ ಕುರಿತು ಜಾಗೃತಿ ಮೂಡಿಸುವುದು.

**ಆನ್ ಲೈನ್ ಮಾರುಕಟ್ಟೆ ವ್ಯವಸ್ಥೆ :** ಸಹಕಾರ ಸಂಸ್ಥೆಗಳು ಅನ್‌ಲೈನ್ ಮಾರುಕಟ್ಟೆಯನ್ನು ಸ್ಥಾಪಿಸಿ ಸದಸ್ಯರು ಬೆಳೆಯುವ ಸಾವಯುವ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಿ ಸಾವಯುವ ಕೃಷಿಯನ್ನು ಉತ್ತೇಜಿಸುವುದು. ಮತ್ತು ರೈತರಿಗೆ ನಿಗದಿತ ದರ ವನ್ನು ಕಲ್ಪಿಸಿ ಕೊಡುವುದು.

**ಉಪಸಂಹಾರ :** ಸಹಕಾರಿ ಸಂಸ್ಥೆಗಳು ಅತ್ಯಾಧುನಿಕ ಯುಗದಲ್ಲಿ ನಿಧಾನವಾಗಿಯಾದರೂ ಸರಿಯೇ ನೈಸರ್ಗಿಕವಾಗಿ ನಮ್ಮ ಭೂಮಾತೆಯನ್ನು ಕೃಷಿಗೆ ಅಳವಡಿಸುತ್ತಾ ಉದ್ದೇಶವನ್ನು ಹೊಂದಿ, ಹಸುಗಳನ್ನು ಉತ್ತೇಜಿಸಿ ನಮ್ಮ ಬೇಸಾಯಕ್ಕೆ ಪೂರಕ ಕೆಲಸ – ಕಾರ್ಯಗಳಲ್ಲಿ ತೊಡಗಿಸಿಕೊಂಡಾಗ ಟ್ರಾಕ್ಟರಿನಿಂದ ಉಳಿಮೆ ಹಾಗೂ ಇನ್ನಿತರೆ ಕಾರ್ಯಗಳಿಗೆ ಕೊಡಬೇಕಾದ ಹಣದ ಉಳಿತಾಯವೂ ಆಗುತ್ತದೆ. ನಂತರ ಇವು ಕೊಡುವ ಸಗಣಿ–ಗಂಜಲಗಳನ್ನು ಬೇಸಾಯಕ್ಕೆ ಗೊಬ್ಬರವಾಗಿ ಬಳಸಿದಾಗ ರಾಸಾಯನಿಕ ಗೊಬ್ಬರಕ್ಕೆ ಕೊಡುವ ಹಣ ಉಳಿತಾಯವಾಗುತ್ತದೆ. ಇದೇ ರೀತಿ ದೇಶೀ ತಳಿಯ ಬೆಳೆಗಳ ಬಿತ್ತನೆ ಬೀಜಗಳನ್ನು ಬಳಸಿದಾಗ ದೇಶೀ ತಳಿಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿದ್ದು, ರೋಗ ನಿವಾರಕ, ಕೀಟ ನಿವಾರಕ, ರಾಸಾಯನಿಕ ಔಷಧಿಗಳ ಬಳಕೆ ಕಡಿಮೆ ಮಾಡಿದಂತಾಗುತ್ತದೆ. ಇದರಿಂದಲೂ ಹಣ ಉಳಿತಾಯವಾಗುವುದಲ್ಲದೇ ನಮ್ಮ ಭೂಮಾತೆಯನ್ನು ವಿಷ ಸಿಂಪಡಣೆಯಿಂದ ದೂರವಿಟ್ಟು ಭೂಮಾತೆಯನ್ನು ಕೃಷಿಗೆ ಯೋಗ್ಯಳನ್ನಾಗಿ ಮುಂದುವರೆಸಿದಂತಾಗುತ್ತದೆ. ಈಗ ನಡೆಯುತ್ತಿರುವ ಹಾಗೆ ರಾಸಾಯನಿಕ ಕೃಷಿಯೇ ಮುಂದುವರೆದರೆ ಮುಂದಿನ ದಿನಗಳಲ್ಲಿ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯಲು ಅಸಾಧ್ಯ ವಾತಾವರಣ ಸೃಷ್ಟಿಯಾಗಿ, ಆಹಾರ ಕೊರತೆ ಹೆಚ್ಚಾಗಿ ರೋಗ – ರುಜಿನಗಳು ಹೆಚ್ಚಾಗಿ ಮಾನವ ತನ್ನ ಸಾವಿನ ಗುಂಡಿಯನ್ನು ತಾನೇ ತೋಡಿಕೊಂಡಂತಾಗುತ್ತದೆ.

ಇಂದು ಕೃಷಿಯಲ್ಲಿ ಮಿಶ್ರ ಕೃಷಿಯನ್ನು ಅಳವಡಿಸಿಕೊಳ್ಳಬೇಕು ಹಾಗೂ ಕೃಷಿಗೆ ಉಪ ಕಸುಬುಗಳು ಬಹಳ ಅವಶ್ಯಕ. ಕೃಷಿ ಹಾಗೂ ಕೃಷಿ ಸಂಬಂಧಿಸಿದ ಉಪ ಕಸುಬುಗಳು ಒಂದಕ್ಕೊಂದು ಪೂರಕವೆಂಬುದನ್ನು ನಾವು ಅರಿತಾಗ ಗುರಿ ತಲುಪುವುದು ಸುಲಭ. ಕೃಷಿಯ ಉಪ ಕಸುಬುಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಕುರಿ ಮತ್ತು ಮೇಕೆಗಳ ಸಾಕಾಣಿಕೆ – ಎಲ್ಲವೂ ಕೃಷಿ ಪೂರಕವಾಗಿವೆ. ಇವುಗಳನ್ನು ರೈತರಿಗೆ ಮತ್ತು ಸದಸ್ಯರಿಗೆ ಸಹಕಾರಿ ಸಂಸ್ಥೆಗಳು ಅಳವಡಿಸಿಕೊಂಟ್ಟು ಮುನ್ನಡೆದಾಗ ನಮ್ಮ ರೈತರ ಆರ್ಥಿಕ ಸ್ವಾವಲಂಬನೆ ಸಾಧ್ಯ.

# RBI News - JANAURY 2019



K. Vittal Shetty, Banking Consultant, kohimavittal@Hotmail.com, Mobile : 9845699904

| The next meeting of the MPC is scheduled from February 5 to 7, 2019. | |
|---|---|
| Policy Rates with effect from 01 August 2018. | % |
| POLICY REPO RATE | 6.50% |
| REVERSE REPO RATE UNDER LAF | 6.25% |
| MARGINAL STANDING FACILITY RATE | 6.75% |
| BANK RATE | 6.75% |
| Reserve Ratios | % |
| Cash Reserve Ratio | 4.00% |
| Statutory Reserve Ratio W.E.F 05 January, 2019 | 19.25% |

**Feb 01, 2019**

**Scheduled Commercial Banks - Business in India**

| (₹ Billion) | | | | | | |
|---|---|---|---|---|---|---|
| **Item** | **Outstanding on Jan. 18, 2019** | **Variation over** | | | | |
| | | **Fortnight** | **Financial year so far** | | **Year–on–Year** | |
| | | | **2017-18** | **2018-19** | **2018** | **2019** |
| | **1** | **2** | **3** | **4** | **5** | **6** |
| **Aggregate Deposits** | **119,864.6** | –473.0 | 1,697.9 | 5,604.1 | 4,823.3 | 10,590.2 |
| Growth (Per cent) | | –0.4 | 1.6 | 4.9 | 4.6 | 9.7 |
| Demand | **12,172.2** | –166.5 | –1,693.0 | –1,530.7 | 575.9 | 1,050.8 |
| Time | **107,692.4** | –306.4 | 3,390.9 | 7,134.7 | 4,247.4 | 9,539.4 |
| **Investments** | **33,622.7** | –238.5 | 3,326.2 | 438.2 | –2,089.4 | –13.1 |
| Growth (Per cent) | | –0.7 | 11.0 | 1.3 | –5.8 | –0.0 |
| **Bank Credit** | **93,316.9** | –57.6 | 3,005.4 | 7,062.7 | 7,524.8 | 11,896.8 |
| Growth (Per cent) | | –0.1 | 3.8 | 8.2 | 10.2 | 14.6 |

## IMPORTANT NEWS

**1). January 1, 2019 :** Micro, Small and Medium Enterprises (MSME) sector – Restructuring of Advances

Refer to the circulars DBR.No.BP.BC.100/21.04.048/2017-18 dated February 07, 2018 and DBR.No.BP.BC.108 / 21.04.048 / 2017-18 dated June 6, 2018. In this regard, with a view to facilitate meaningful restructuring of MSME accounts {MSME as defined in the Micro, Small and Medium Enterprises Development (MSMED) Act, 2006} that have become stressed, it has been decided to permit a one-time restructuring of existing loans to MSMEs classified as 'standard' without a downgrade in the asset classification, subject to the following conditions :

i. The aggregate exposure, including non-fund based facilities, of banks and NBFCs to the borrower does not exceed ₹250 million as on January 1, 2019.

ii. The borrower's account is in default but is a 'standard asset' as on January 1, 2019 and continues to be classified as a 'standard asset' till the date of implementation of the restructuring.

iii. The borrowing entity is GST-registered on the date of implementation of the restructuring. However, this condition will not apply to MSMEs that are exempt from GST-registration.

iv. The restructuring of the borrower account is implemented on or before March 31, 2020. A restructuring would be treated as implemented if the following conditions are met:

- all related documentation, including execution of necessary agreements between lenders and borrower / creation of security charge / perfection of securities are completed by all lenders; and
- the new capital structure and / or changes in the terms and conditions of the existing loans get duly reflected in the books of all the lenders and the borrower.

v. A provision of 5% in addition to the provisions already held, shall be made in respect of accounts restructured under these instructions. Banks will, however, have the option of reversing such provisions at the end of the specified period, subject to the account demonstrating satisfactory performance during the specified period as defined at paragraph 5 below.

vi. Post-restructuring, NPA classification of these accounts shall be as per the extant IRAC norms.

vii. Banks and NBFCs shall make appropriate disclosures in their financial statements, under 'Notes on Accounts', relating to the MSME accounts restructured under these instructions as per the following format:

No. of accounts restructured Amount (₹ in million)

iii. All other instructions applicable to restructuring of loans to MSME borrowers shall continue to be applicable.

2. Banks and NBFCs desirous of adopting this scheme shall put in place a Board approved policy on restructuring of MSME advances under these instructions within a month from the date of this circular. The policy shall, inter alia, include framework for viability assessment of the stressed accounts and regular monitoring of the restructured accounts.
3. It is clarified that accounts classified as NPA can be restructured; however, the extant asset classification norms governing restructuring of NPAs will continue to apply.
4. As a general rule, barring the above one-time exception, any MSME account which is restructured must be downgraded to NPA upon restructuring and will slip into progressively lower asset classification and higher provisioning requirements as per extant IRAC norms. Such an account may be considered for upgradation to 'standard' only if it demonstrates satisfactory performance during the specified period.
5. 'Specified Period' means a period of one year from the commencement of the first payment of interest or principal, whichever is later, on the credit facility with longest period of moratorium under the terms of restructuring package. 'Satisfactory Performance' means no payment (interest and/or principal) shall remain overdue for a period of more than 30 days. In case of cash credit / overdraft account, satisfactory performance means that the outstanding in the account shall not be more than the sanctioned limit or drawing power, whichever is lower, for a period of more than 30 days.

**2) January 08, 2019:** Tokenisation – Card transactions

Continuing the efforts to improve safety and security of card transactions, Reserve Bank of India had permitted card networks for tokenisation in card transactions for a specific use case.

It has now been decided to permit authorised card payment networks to offer card tokenisation services to any token requestor (i.e., third party app provider), subject to the conditions listed in Annex 1. This permission extends to all use cases / channels [e.g., Near Field Communication (NFC) / Magnetic Secure Transmission (MST) based contactless transactions, in-app payments, QR code-based payments, etc.] or token storage mechanisms (cloud, secure element, trusted execution environment, etc.). For the present, this facility shall be offered through mobile phones / tablets only. Its extension to other devices will be examined later based on experience gained.

All extant instructions of Reserve Bank on safety and security of card transactions, including the mandate for Additional Factor of Authentication (AFA) / PIN entry shall be applicable for tokenised card transactions also.

All other instructions related to card transactions shall be applicable for tokenised card transactions as well. The ultimate responsibility for the card tokenisation services rendered rests with the authorised card networks.

No charges should be recovered from the customer for availing this service.

Before providing card tokenisation services, authorised card payment networks shall put in place a mechanism for periodic system (including security) audit at frequent intervals, at least annually, of all entities involved in providing card tokenisation services to customers. This system audit shall be undertaken by empanelled auditors of Indian Computer Emergency Response Team (CERT-In) and all related instructions of Reserve Bank in respect of system audits shall also be adhered to. A copy of this audit report shall be furnished to the Reserve Bank, with comments of auditors on deviations, if any, from the conditions listed in Annex 1, along with the compliance thereto. Further, a report on the details provided in Annex 2 shall be submitted at monthly intervals to the Chief General Manager, Reserve Bank of India, Department of Payment and Settlement Systems, Central Office, Mumbai and by email.

This directive is issued under Section 10 (2) read with Section 18 of Payment and Settlement Systems Act, 2007 (Act 51 of 2007).

**3) Jan 08, 2019 :** RBI releases guidelines on Tokenisation – Card Transactions

The Reserve Bank has released guidelines on tokenisation for debit / credit / prepaid card transactions as a part of its continuous endeavour to enhance the safety and security of the payment systems in the country. Tokenisation involves a process in which a unique token masks sensitive card details. Thereafter, in lieu of actual card details, this token is used to perform card transactions in contactless mode at Point Of Sale(POS) terminals, Quick Response(QR) code payments, These guidelines permit authorised card payment networks to offer card tokenisation services to any token requestor (third party app provider), subject to conditions enumerated in these guidelines. A card holder may avail of these services by registering the card on the

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 36



token requestor's app after giving explicit consent. No charges shall be recovered from the customer for availing this service. All instructions of Reserve Bank on safety and security of card transactions, including mandate for Additional Factor of Authentication (AFA) / PIN entry shall be applicable for tokenised card transactions also.

4) **January 10, 2019 :** Basel III Capital Regulations- Review of transitional arrangements Refer to para 4.5 'Transitional Arrangements', para 15.2.2 of Part D 'Capital Conservation Buffer Framework' and para 2.3 of Annex 16 of the Master Circular, DBR.No.BP. BC.1/21.06.201/2015-16 dated July 1, 2015 on 'Basel III Capital Regulations'. It has been decided to defer the implementation of the last tranche of 0.625% of Capital Conservation Buffer (CCB) from March 31, 2019 to March 31, 2020. Accordingly, minimum capital conservation ratios in para 15.2.2 of Part D 'Capital Conservation Buffer Framework' as applicable from March 31, 2018 will also apply from March 31, 2019 till the CCB attains the level of 2.5% on March 31, 2020. Further, the pre-specified trigger for loss absorption through conversion / write-down of Additional Tier 1 instruments (PNCPS and PDI) shall remain at 5.5% of RWAs and will rise to 6.125% of RWAs on March 31, 2020.

5) **Jan 21, 2019 :** Reserve Bank of India invites comments on Authorisation of New Retail Payment Systems The Reserve Bank has placed on its website a policy paper on Authorisation of New Retail Payment Systems for public comments. In the Statement on Developmental and Regulatory Policies released with the Second Bi-monthly Monetary Policy Statement 2018-19, the Reserve Bank had announced that it would encourage more players to participate in and promote pan-India payment platforms and would bring out a policy paper for public consultation by September 30, 2018. The objective was to minimise the concentration risk in the retail payments market, from a financial stability perspective and to give a fillip to innovation and competition.

The Reserve Bank invites comments on the policy paper from all stakeholders and members of public by February 20, 2019. The comments may be sent by post to the Chief General Manager, Department of Payment and Settlement Systems, Reserve Bank of India, Central Office, 14th Floor, Shahid Bhagat Singh Marg, Mumbai-400001, or by email.

II. Directions, Withdrawals, Penalties & Cancellation of Licences of Urban Co-operative Banks & Banks.

1). Jan 02, 2019:-Amanath Co-operative Bank Ltd., Bengaluru.

2). Jan 02, 2019: -The Mechanical Department Primary Urban Co-operative Bank Ltd., Gorakhpur (U.P.)

3). Jan 04, 2019:-RBI imposes a monetary penalty of ₹5.00 lakh (Rupees Five Lakh only) on Harihareshwar Sahakari Bank Ltd., Wai, Satara, Maharashtra.

4). Jan 07, 2019: -RBI issues Directions to The Youth Development Co-operative Bank Ltd. Kolhapur, Maharashtra.

5). Jan 11, 2019: -RBI Issues Directions to Sri Bharathi Co-operative Urban Bank Ltd., Hyderabad (Telangana),

6). Jan 11, 2019: -RBI imposes monetary penalty on Citibank NA India

7). Jan 16, 2019: -RBI by an order dated January 04, 2019, imposed a monetary penalty of ₹10 million on Bank of Maharashtra (the bank)

**8). Jan 22, 2019 :** United Cooperative Bank Limited, Bagnan Station Road (North), P.O. – Bagnan, Dist- Howrah, Pin – 711303, West Bengal.

**9). Jan 24, 2019 :** RBI issues Directions to Bhagyodaya Friends Urban Co-operative Bank Ltd, Warud, Dist. Amravati, Maharashtra.

**10). Jan 25, 2019 :** The R.S. Co-operative Bank Ltd., Mumbai, Maharashtra.

**11). Jan 25, 2019 :** RBI has imposed a monetary penalty of ₹ 5,00,000/- (Rupees Five Lakh only) on Urban Co-operative Bank Ltd., Sitapur (U.P.)

**12). Jan 28, 2019 :** RBI has imposed a monetary penalty of ₹ 50,000/- (Rupees fifty thousand only) on City Co-operative Bank Ltd., Hassan,

**13). Jan 31, 2019 :** The Kapol Co-operative Bank Ltd., Mumbai was placed under directions vide directive dated March 30, 2017

**Source: www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ, (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ. : 080–23449933/34.
ಬೆಂಗಳೂರು ಪ್ರಾಂತೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ಪ್ರಾಂತೀಯ ಕಛೇರಿ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010